ಮೇ 2017 ಸಂಚಿಕೆ – 10 ಸಂಪುಟ – 32

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .................... 2

ನವ ಭಾರತದ ಕಥಾನಕ .................... 3
* **ವೆಂಕಯ್ಯ ನಾಯ್ಡು**

ಜೀವನ್ಮುಖಿ ಮಾರ್ಗಗಳ ಮೂಲಕ ರೂಪಾಂತರ .................... 8
* **ಅಮರ್‌ಜೀತ್ ಸಿನ್ಹಾ**

ಸಾರ್ವಜನಿಕ ಹಣಕಾಸು; ಅಂಕೀಕೃತ ಆವಿಷ್ಕಾರ .................... 13
* **ಲೇಖಾ ಚಕ್ರವರ್ತಿ ಮತ್ತು ಸಮೀಕ್ಷಾ ಅಗರ್‌ವಾಲ್**

ಕೌಶಲ್ಯಾಭಿವೃದ್ಧಿ ಮತ್ತು ಯುವ ಸಶಕ್ತೀಕರಣ .................... 16
* **ಡಾ. ಜಿತೇಂದರ್ ಸಿಂಗ್**

ಸ್ವಚ್ಛ ಭಾರತ; ಪ್ರತಿಯೊಬ್ಬರ ಕರ್ತವ್ಯ .................... 19
* **ಪರಮೇಶ್ವರನ್ ಅಯ್ಯರ್**

ಪರಿಶುದ್ಧ, ಪಾರದರ್ಶಕ ಆರ್ಥಿಕತೆಯತ್ತ .................... 22
* **ಎಂ. ವಿ. ಭಾನುಮತಿ ಮತ್ತು ರೋಹಿತ್ ದೇವ್ ಝಾ**

ಜ್ಞಾನ ಆರ್ಥಿಕತೆಯತ್ತ ಭಾರತ .................... 28
* **ಡಾ. ಓಂಕಾರ ರೈ**

ಕೃಷಿ ಕ್ಷೇತ್ರದಲ್ಲಿ ಒಳಸುರಿಗಳ ಪಾತ್ರ .................... 33
* **ವಸಂತ್ ಪಿ. ಗಾಂಧಿ**

ರೈತರ ಆದಾಯ ಹೆಚ್ಚಳಕ್ಕೆ ಪಶು ಪೋಷಣೆ .................... 35
* **ರಾಘವೇಂದ್ರ ಭಟ್**

ಕರ್ನಾಟಕ ಪಂಚಾಯತ್ – ಇ ಮಾದರಿ ಸಾಧನೆ .................... 39
* **ಮಹಮ್ಮದ್ ಇಮ್ತಿಯಾಜ್**

ಮನ್ ಕೀ ಬಾತ್ .................... 44
* **ಕೃಪೆ; ಆಕಾಶವಾಣಿ, ಬೆಂಗಳೂರು**

ನಿಮಗಿದು ತಿಳಿದಿದೆಯೇ? .................... 50

ವಾರ್ತಾ ವಿಶೇಷ .................... 51

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**

Log on to
http://publicationsdivision.nic.in/,
in collaboration with bharatkosh.gov.in

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

# ಭಾರತದ ಬೆಳವಣಿಗೆಯ ಕಥಾನಕ




ಉತ್ತಮ ಆಡಳಿತಕ್ಕಾಗಿ ಪಾಲಿಸಬೇಕಾದ ನಿಯಮಗಳು – ಅದು ವೇದಗಳಿರಬಹುದು, ಅಥವಾ ಕೌಟಿಲ್ಯನ ಅರ್ಥಶಾಸ್ತ್ರವಿರಬಹುದು; ಎಲ್ಲ ಸಾಂಪ್ರದಾಯಿಕ ಭಾರತೀಯ ಗ್ರಂಥಗಳಲ್ಲಿ ಉಲ್ಲೇಖವಾಗಿವೆ. ನಾಡಿನ ಅಭಿವೃದ್ಧಿಗಾಗಿ ಸರ್ಕಾರ / ಆಡಳಿತ ಕೈಗೊಳ್ಳಬೇಕಾಗದ ಕಲ್ಯಾಣ ಕ್ರಮಗಳಿಗೆ ನಮ್ಮ ಪುರಾತನ ಪ್ರಾಚೀನ ಗ್ರಂಥಗಳು ಮಹತ್ವ ನೀಡಿವೆ.

ಹಣಕಾಸು ಸಂವರ್ಧನೆ, ಆರ್ಥಿಕ ಒಳಗೊಳ್ಳುವಿಕೆ, ಮೂಲ ಸೌಕರ್ಯ, ಕೃಷಿ ಹೀಗೆ ವಿವಿಧ ದೃಷ್ಟಿಕೋನಗಳಿಂದಲೂ ಭಾರತದ ಬೆಳವಣಿಗೆಯ ಪಥ ಅಪಾರ ಸಾಧನೆಯ ಹೆಜ್ಜೆಗಳಿಂದ ಕೂಡಿದೆ. ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ಕಾರ ನೀಡಿರುವ ಒತ್ತು, ಪ್ರತಿ ಕ್ಷೇತ್ರವನ್ನು ಆದ್ಯತಾ ವಲಯವನ್ನಾಗಿರಿಸಿದೆ. ಸದೃಢ ಆರ್ಥಿಕ ನೀತಿ, ಜಿಎಸ್‌ಟಿಗಳಂತಹ ಹಣಕಾಸು ಕ್ರೋಢೀಕರಣದ ಕ್ರಮಗಳು ಆರ್ಥಿಕ ವಲಯದಲ್ಲಿ ನಿರಂತರ ಬೆಳವಣಿಗೆಯ ಪರಿಸರವನ್ನು ಖಾತರಿಪಡಿಸುತ್ತಿವೆ.

"ಒಂದು ದೇಶ ಒಂದೇ ತೆರಿಗೆ"ಯಂತಹ ಪರಿಕಲ್ಪನೆಗಳು ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸಿ, ಸರಕು ಮತ್ತು ಸೇವೆಗಳಿಗೆ ದೇಶವ್ಯಾಪಿ ಮಾರುಕಟ್ಟೆ ಸೃಷ್ಟಿಸುವ ಸದುದ್ದೇಶ ಹೊಂದಿವೆ, ತಯಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಸ್ಪರ್ಧಾತ್ಮಕತೆ ತರಲಿವೆ. ಹೆಚ್ಚಿನ ಮುಖಬೆಲೆಯ ನೋಟುಗಳ ಚಲಾವಣೆಯನ್ನು ಹಿಂತೆಗೆದುಕೊಂಡ ಚಾರಿತ್ರಿಕ ಕ್ರಮ, ಆದಾಯ ಘೋಷಣೆ ಯೋಜನೆ, ಎಸ್‌ಐಟಿ ರಚನೆಗಳಂತಹ ಉಪಕ್ರಮ, ಭ್ರಷ್ಟಾಚಾರ ಮತ್ತು ಕಪ್ಪು ಹಣ ತೊಲಗಿಸಲು ಕೈಗೊಂಡ ಕಠಿಣ ಕಾರ್ಯಕ್ರಮಗಳಾಗಿವೆ. ಆರ್ಥಿಕತೆಯನ್ನು ಕಪ್ಪುಹಣ ಮತ್ತು ಭ್ರಷ್ಟಾಚಾರದ ಶಾಪಗ್ರಸ್ಥ ಕರಿನೆರಳಿನಿಂದ ಹೊರತಂದು, ಬಂಡವಾಳ ಹೂಡಿಕೆ ಪ್ರೋತ್ಸಾಹಿಸುವುದು ಈ ಕ್ರಮಗಳ ಉದ್ದೇಶವಾಗಿತ್ತು. ಡಿಜಿಟಲ್ ಹಣ ಪಾವತಿಗೆ ಪರಿಸರ ರೂಪಿಸುವುದು, ನಗದುರಹಿತ ಆರ್ಥಿಕತೆ ತರುವುದು ಕೂಡಾ ನೋಟುಗಳ ಅಮಾನ್ಯೀಕರಣದ ಗುರಿಯಾಗಿತ್ತು. ಆರ್ಥಿಕ ವಹಿವಾಟುಗಳಲ್ಲಿ ಪಾರದರ್ಶತೆ ತಂದು ವಿಶ್ವಾಸದ ವಾತಾವರಣ ಮೂಡಿಸುವುದು ಇವುಗಳ ಮೂಲ ಉದ್ದೇಶ. ಭೀಮ್ ಆ್ಯಪ್, ರೂಪೇ, ಡೆಬಿಟ್ ಕಾರ್ಡ್‌ಗಳಂತಹ ಡಿಜಿಟಲ್‌ಗೆ ಹಣ ಪಾವತಿ ನಿರೂಪಣೆ, ಹೆಚ್ಚು ಜನರನ್ನು ಕಡಿಮೆ ನಗದು ನಿರ್ವಹಣೆ ಜಾಲಕ್ಕೆ ಕರೆತರುವ ಗುರಿ ಹೊಂದಿದೆ.

ಯಾವುದೇ ನೀತಿ ಪರಿಣಾಮಕಾರಿಯಾಗಿರಬೇಕಾದರೆ, ಅದು ಎಲ್ಲ ಕುಟುಂಬಗಳ ಕಲ್ಯಾಣ, ಕನಿಷ್ಠ ಅಗತ್ಯ ಪೂರೈಸುವ ಮೂಲಮಂತ್ರದ ತತ್ವ ಹೊಂದಿರಬೇಕು. ಜನ್‌ಧನ್ ಯೋಜನೆ, ಫಲಾನುಭವಿಗೆ ನೇರ ಹಣಪಾವತಿ, ಉಜ್ವಲಾ, ಪಹಲ್, ಮೊದಲಾದ ಆರ್ಥಿಕ ಒಳಗೊಳ್ಳುವಿಕೆ ಕಾರ್ಯಕ್ರಮಗಳು, ಅಭಿವೃದ್ಧಿಯ ಪ್ರಯೋಜನವನ್ನು ಸಮಾಜದ ಮೂಲೆ ಮೂಲೆಗೆ ತಲುಪಿಸಿವೆ.

ಮೇಕ್ ಇನ್ ಇಂಡಿಯಾ ಕಾರ್ಯಕ್ರಮ, ಭಾರತವನ್ನು ತಯಾರಿಕಾ ತಾಣವನ್ನಾಗಿಸುವ, ತನ್ಮೂಲಕ ದೇಶದ ಅಪಾರ ಜನಸಂಖ್ಯೆಯನ್ನು ಕಾರ್ಯಪ್ರವೃತ್ತರನ್ನಾಗಿಸಿ, ಯುವಜನರಿಗೆ ಉದ್ಯೋಗಾವಕಾಶ ಕಲ್ಪಿಸುವ ಗುರಿ ಹೊಂದಿದೆ. ಇದನ್ನು ಸಾಧಿಸಲು, ಕೌಶಲ್ಯ, ಸಾಮರ್ಥ್ಯವರ್ಧನೆಯ, ಕೌಶಲ್, ಭಾರತ್ / ಕುಶಾಲ್ ಭಾರತ್ ಜಾರಿಯಲ್ಲಿದೆ. ಸ್ಟಾರ್ಟ್ ಅಪ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾದಂತಹ ಯೋಜನೆಗಳು ಭಾರತದಲ್ಲೆ ಉಳಿದು ಭಾರತದೊಂದಿಗೇ ತಾವೂ ಅಭಿವೃದ್ಧಿ, ಸಾಧನೆ ಮಾಡುವಂತೆ ಯುವ ಜನಾಂಗವನ್ನು ಪ್ರೇರೇಪಿಸಿವೆ. ಡಿಜಿ ಆಡಳಿತ ಮತ್ತು ವ್ಯಾಪಾರವನ್ನು ಸುಲಭಗೊಳಿಸುವ ನೀತಿಗಳು, ಬಂಡವಾಳಗಳ ಹೂಡಿಕೆ ಭಾರತ ತಲುಪುವುದನ್ನು ಖಾತರಿಪಡಿಸಿವೆ.

ಸರ್ಕಾರದ ಮತ್ತೊಂದು ಮುಂಚೂಣಿ ಕಾರ್ಯಕ್ರಮ ಸ್ವಚ್ಛ ಭಾರತ್ ಮಿಷನ್ ಕ್ರಮ ಪ್ರತಿಪಕ್ಷಗಳಿಂದಲೂ ಶ್ಲಾಘನೆ ಪಡೆದುಕೊಂಡಿದೆ. ಸ್ವಚ್ಛ ಭಾರತ ಅಭಿಯಾನ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆಯ, ಉತ್ತಮ ಶೌಚ ಆರೋಗ್ಯ ಹವ್ಯಾಸ ರೂಢಿಸಿಕೊಳ್ಳುವಂತೆ ಪ್ರೇರೇಪಿಸುತ್ತಿದೆ.

ರೈತರ ಕಲ್ಯಾಣ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಆದ್ಯತಾ ಪಟ್ಟಿಯಲ್ಲಿ ಮೇಲಿನ ಸ್ಥಾನದಲ್ಲಿದೆ, ಪ್ರಧಾನಮಂತ್ರಿ ಫಸಲ್ ಬಿಮಾಯೋಜನೆ, ಕೃಷಿ ಸಿಂಚಾಯಿ ಯೋಜನಾ ಮೊದಲಾದ ಉಪಕ್ರಮಗಳು ನಮ್ಮ ರೈತರ ಜೀವನದಲ್ಲಿ ಪರಿವರ್ತನೆ ತರುವಲ್ಲಿ ನೆರವಾಗಿವೆ. ಸುಕನ್ಯಾ ಸಮೃದ್ಧಿ ಯೋಜನಾ, ಬೇಟಿ ಬಚಾವೊ ಬೇಟಿ ಪಢಾವೊ ಕಾರ್ಯಕ್ರಮಗಳು, ಇದುವರೆಗೂ ಅಭಿವೃದ್ಧಿ ಗುರಿಯ ವ್ಯಾಪ್ತಿಯಾಚೆ ಇದ್ದ ಹೆಣ್ಣು ಮಗುವಿನತ್ತ ಗಮನಹರಿಸುವ ಪ್ರಮುಖ ಯೋಜನೆಗಳಾಗಿವೆ. ಅಟಲ್ ಪಿಂಚಣಿ ಯೋಜನೆ, ಜೀವನ್ ಜ್ಯೋತಿ ಯೋಜನಾ ಹಿರಿಯರಿಗೆ ಸಾಮಾಜಿಕ ಭದ್ರತೆ ಒದಗಿಸುವ ಕಾರ್ಯಕ್ರಮಗಳಾಗಿವೆ.

ಭಾರತವನ್ನು ಜಾಗತಿಕವಾದ ತಯಾರಿಕಾ ಕೇಂದ್ರವನ್ನಾಗಿ ನಿರೂಪಿಸಲು, ಅಗತ್ಯವಾದ ವಿಶ್ವದರ್ಜೆಯ ಮೂಲ ಸೌಕರ್ಯಕ್ಕಾಗಿ ಮುಂಗಡ ಪತ್ರಗಳಲ್ಲಿ ಸತತವಾಗಿ ಹೆಚ್ಚಿನ ಹಣ ಒದಗಿಸಲಾಗಿದೆ. ಸ್ಮಾರ್ಟ್ ಸಿಟಿ, ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನಾ – ಮೊದಲಾದ ಕಾರ್ಯಕ್ರಮಗಳು ಮೂಲಸೌಕರ್ಯಕ್ಕೆ ಒತ್ತು ನೀಡಿವೆ. ಜಗತ್ತು ಭಾರತವನ್ನು ಮೆಚ್ಚುಗೆಯಿಂದ ನೋಡುತ್ತಿದೆ. ನಮ್ಮ ತತ್ವಜ್ಞಾನ, ಸಾಹಿತ್ಯ ಮತ್ತು ಕಲೆಗಳಿಗೆ ಹಿಂದಿನಿಂದಲೂ ಹೆಗ್ಗಳಿಕೆಯ ಸ್ಥಾನ ಇದೆ. ಈಗ ಭಾರತವನ್ನು ಅದರ ಕೌಶಲ್ಯ ಆಧಾರವಾಗಿ, ಬಂಡವಾಳ ಹೂಡಿಕೆಯ ಸದವಕಾಶಗಳಿಗಾಗಿ, ಅಂತಾರಾಷ್ಟ್ರೀಯ ಸಂಬಂಧಗಳಿಗಾಗಿ, ಶಾಂತಿ ಕಾರ್ಯತಂತ್ರಗಳಿಗಾಗಿ ಮೆಚ್ಚುಗೆಯಿಂದ ಕಾಣಲಾಗುತ್ತಿದೆ; ಭಾರತದ ನೀತಿಗಳಿಗೆ ವ್ಯಾಪಕವಾದ ಸ್ವೀಕಾರ, ಮನ್ನಣೆ ಲಭಿಸುತ್ತಿದೆ.

ಒಂದು ಕಾಲದಲ್ಲಿ ಹಾವಾಡಿಗರ ನಾಡೆಂದು ಕರೆಯಲ್ಪಡುತ್ತಿದ್ದ ಭಾರತ, ಇಂದು ಅಮೆರಿಕ, ಚೀನಾ ನಂತರ ವಿಶ್ವದ ಮೂರನೆ ಅತಿದೊಡ್ಡ ಆರ್ಥಿಕತೆಯೆಂದು ಖ್ಯಾತಿ ಪಡೆದಿದೆ. ಭಾರತದ ಅಭಿವೃದ್ಧಿ ಕಥಾನಕ ಪ್ರಗತಿ ಪಥದಲ್ಲಿದೆ. ❑

ದಾಪುಗಾಲು

# ನವ ಭಾರತದ ಕಥಾನಕ

* ವೆಂಕಯ್ಯ ನಾಯ್ಡು




ನಮ್ಮ ಕತೆಯನ್ನು ಪುನಃ ಹೇಳಬೇಕು – ಮತ್ತು ಭಾರತವನ್ನು ಬಣ್ಣದ ಕನ್ನಡಕದಿಂದ ಮತ್ತು ತುಕ್ಕು ಹಿಡಿದ ಚೌಕಟ್ಟಿನೊಳಗಿಂದ ನೋಡುವ ಪಾಶ್ಚಾತ್ಯ ದೇಶಗಳ ದೃಷ್ಟಿಕೋನ ಬದಲಾಗಬೇಕು.

ಜಾಗತಿಕ, ಭೌಗೋಳಿಕ, ಆರ್ಥಿಕ ವಲಯದಲ್ಲಿ ಭಾರತ ತನ್ನ ಅಭಿವೃದ್ಧಿಯ ಕಥಾನಕವನ್ನು ಮರುರಚನೆ ಮಾಡುತ್ತಿದೆ, ಆಡಳಿತದ ವಿಧಾನದಲ್ಲಿ ಹೊಸ ಹಾದಿಯನ್ನು ರೂಪಿಸುತ್ತಿದೆ, ವಿಶ್ವ ಸಮುದಾಯ ತನ್ನ ಕುರಿತಾಗಿ ಹೊಂದಿರುವ ಹಳೆಯ ಚಿತ್ರಣ, ಅಭಿಪ್ರಾಯಗಳನ್ನು ತೊಡೆದು ವಿಭಿನ್ನ ದೃಷ್ಟಿಕೋನದಲ್ಲಿ ಕಾಣಿಸಿಕೊಳ್ಳುವ ಮೂಲಕ **'ನವ ಭಾರತ'**ವಾಗಿ ಹೊರಹೊಮ್ಮಲು ತುಡಿಯುತ್ತಿದೆ.

ಅಮೆರಿಕ ಮತ್ತು ಚೀನಾಗಳಿಂದಾಚೆಗೆ ಭಾರತವನ್ನು ಮೂರನೇ ಸದೃಢ ಆರ್ಥಿಕತೆಯಾಗಿ, ಕ್ಷಿಪ್ರ ಪ್ರಗತಿ ಕಾಣುತ್ತಿರುವ ಸರಕು ಮತ್ತು ಸೇವೆಗಳ ಮಾರುಕಟ್ಟೆಯನ್ನಾಗಿ ವಿಶ್ವ ಗುರುತಿಸಿದೆ. ಬದಲಾಗುತ್ತಿರುವ ಭಾರತದ ಮುಖಚಹರೆಯು ಇದುವರೆಗಿನ ಯಥಾಸ್ಥಿತಿಗೆ ಸತತವಾಗಿ ಸವಾಲಾಗಿ ಪರಿಣಮಿಸಿದ್ದು, ಕಳೆದ ಮೂರು ವರ್ಷಗಳಲ್ಲಿ ವಿವಿಧ ವಲಯಗಳಲ್ಲಿ ಭಾರತ ಹೊರ ಹೊಮ್ಮಿದ ಮುಂಚೂಣಿ ನಾಯಕತ್ವಕ್ಕೆ ಹಲವು ನಿದರ್ಶನಗಳಿವೆ. ಸರ್ಕಾರ ಕೈಗೊಂಡ ಉಪಕ್ರಮಗಳು ಜನರ ಆಲೋಚನೆ ಮತ್ತು ವರ್ತನೆಗಳನ್ನು ಆಳವಾಗಿ ಬದಲಿಸಿವೆ. ರೂಢ ಮಾದರಿಯಲ್ಲಿ ಭಾರತದ ಪ್ರಾತಿನಿಧಿತ್ವವನ್ನು ಕಿತ್ತೊಗೆದು ಜಾಗೃತಗೊಂಡ, ಚೈತನ್ಯಭರಿತ ಮತ್ತು ಉಜ್ವಲ 'ನವ ಭಾರತ'ದ ಕತೆಯನ್ನು ಜಾಗತಿಕ ಬಿಕ್ಕಟ್ಟು ಮತ್ತು ಅಪಾಯಗಳನ್ನು ಮುಂದೆ ಸವಾಲಾಗಿ ಇರಿಸುವ ಕಾಲ ಬಂದಿದೆ.

ಇತ್ತೀಚೆಗಿನ 500 ರೂ. ಮತ್ತು 1000 ರೂ. ನೋಟುಗಳ ಅಮಾನ್ಯೀಕರಣದಿಂದ ಆರಂಭಿಸೋಣ. ಈ ಕ್ರಮವು ಕಾಳಧನ, ನಕಲಿ ನೋಟು ಮತ್ತು ಭ್ರಷ್ಟಾಚಾರ ಈ ಮೂರೂ ಪಿಡುಗುಗಳನ್ನು ಒಂದೇ ಕಲ್ಲಿನಿಂದ ಹೊಡೆಯುವಂತಹ ಪ್ರಯತ್ನವಾಗಿದೆ. ಕಳೆದ ಎರಡೂವರೆ ವರ್ಷಗಳಲ್ಲಿ ಈ ಸಂಬಂಧ ಸರ್ಕಾರ ಕೈಗೊಂಡಿದ್ದ ಹಲವು ಕ್ರಮಗಳಿಗೆ ಅಮಾನ್ಯೀಕರಣವು ಅತ್ಯಂತ ತಾರ್ಕಿಕ ಅಂತ್ಯವೆನಿಸಿದೆ. ಕಾಳಧನ ನಿಯಂತ್ರಣಕ್ಕೆ ಸ್ವಿಸ್ ಬ್ಯಾಂಕ್ ಜೊತೆ ಸಹಯೋಗ, ತೆರಿಗೆ ವಂಚನೆ ತಡೆಗೆ ವಿಶೇಷ ತನಿಖಾ ದಳ ರಚನೆ, ಸುಮಾರು 65,000 ಕೋಟಿ ರೂ. ಸಂಗ್ರಹಕ್ಕೆ ಕಾರಣವಾದ ಆದಾಯ ಘೋಷಣೆ ಯೋಜನೆ ಸೇರಿದಂತೆ ಹಲವು ಕ್ರಮಗಳನ್ನು ಸರ್ಕಾರ ನಗದು ಅಮಾನ್ಯೀಕರಣಕ್ಕೂ ಮುನ್ನ ಕೈಗೊಂಡಿತ್ತು. ಆರ್ಥಿಕತೆಯಿಂದ ಕಪ್ಪುಹಣವನ್ನು ಸೆಳೆದುಕೊಳ್ಳುವ ಕ್ರಮದಿಂದ ದಕ್ಷತೆ ಹೆಚ್ಚಳ, ಭ್ರಷ್ಟಾಚಾರ ನಿಯಂತ್ರಣ




ಮಾತ್ರವಲ್ಲದೆ, ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಕ್ರಮವಾಗಿ ತೆರಿಗೆ ಮತ್ತು ಬಡ್ಡಿ ದರಗಳನ್ನು ಕಡಿತಗೊಳಿಸಲು ಮತ್ತು ಆ ಮೂಲಕ ಹೂಡಿಕೆಗೆ ಉತ್ತೇಜನ ನೀಡಲು ಸಾಧ್ಯವಾಗುತ್ತದೆ. ಜೊತೆಗೆ, ಬ್ಯಾಂಕ್‌ಗಳೂ ವಿತ್ತೀಯ ಕೊರತೆ ತುಂಬಿಕೊಳ್ಳಲು ಮತ್ತು ಪ್ರಗತಿ ಗುರಿಗಳನ್ನು ಮುಟ್ಟಲು ನೆರವಾಗುತ್ತದೆ. **ಇದು ಪುನಶ್ಚೇತನಗೊಂಡ, ಹೊರಹೊಮ್ಮುತ್ತಿರುವ ಭಾರತದ ಕತೆ.**

* ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನೆ, ನಗರಾಭಿವೃದ್ಧಿ, ಸಮಾಚಾರ ಮತ್ತು ಪ್ರಸಾರ ಖಾತೆ ಸಚಿವರು.

ನಗದು ಅಮಾನ್ಯೀಕರಣದ ಬಳಿಕ ಡಿಜಿಟಲ್–ಅಂಕೀಕರಣ ಕ್ಷೇತ್ರದಲ್ಲಿ ಭಾರತದ ಮುಂದಾಳತ್ವವು ಈಗಾಗಲೇ ಸುಸ್ಪಷ್ಟವಾಗಿದೆ. ಈ ಕ್ರಮದ ಬಳಿಕ ಡಿಜಿಟಲ್ ಪಾವತಿ ವ್ಯವಸ್ಥೆಯು ಅತ್ಯಗತ್ಯವಾಗಿದ್ದ ಆದ್ಯತೆಯನ್ನು ಪಡೆದಿದೆ. ನಗದುರಹಿತ ವ್ಯವಹಾರಗಳಿಗೆ ಉತ್ತೇಜನ ನೀಡುವ ಮೂಲಕ ಜನರ ವ್ಯವಹಾರ ನಡವಳಿಕೆಯಲ್ಲಿ ಬದಲಾವಣೆ ತರುವುದು, ಭಾರತವನ್ನು ಒಂದು ನಗದುರಹಿತ ಸಮಾಜವಾಗಿ ಬದಲಾಯಿಸುವುದು, ಆ ಮೂಲಕ ಪಾರದರ್ಶಕತೆ ಮತ್ತು ಬದ್ಧತೆಯನ್ನು ಹೆಚ್ಚಿಸುವುದು ಈ ಕ್ರಮದ ಉದ್ದೇಶವಾಗಿದೆ.

"ಭೀಮ್" ಆ್ಯಪ್‌ಗೆ ಚಾಲನೆ ನೀಡಿದ ಎರಡೇ ತಿಂಗಳಲ್ಲಿ 1.5 ಕೋಟಿ ಮಂದಿ ಅದನ್ನು ಬಳಸಲು ಆರಂಭಿಸಿದ್ದಾರೆ ಎಂಬುದು ಸಂತೋಷದ ವಿಚಾರ. ಡಿಜಿಟಲ್ ವ್ಯವಹಾರಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಜನಧನ ಖಾತೆದಾರರು ಸೇರಿದಂತೆ 30 ಕೋಟಿ 'ರೂಪೇ' ಡೆಬಿಟ್ ಕಾರ್ಡ್‌ಗಳನ್ನು ವಿತರಿಸಿದೆ. ಲಕ್ಕಿ ಗ್ರಾಹಕ್ ಯೋಜನೆಯಡಿ 12.5 ಲಕ್ಷ ಜನರು ಮತ್ತು ಡಿಜಿಧನ್ ವ್ಯಾಪಾರ್ ಯೋಜನೆಯಡಿ 70,000 ವರ್ತಕರು ಬಹುಮಾನಗಳನ್ನು ಗೆದ್ದಿದ್ದಾರೆ. ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯು ತೆರಿಗೆ ವಂಚಕರಿಗೆ ತಮ್ಮ ಆದಾಯವನ್ನು ಘೋಷಿಸಿಕೊಳ್ಳಲು ಅಂತಿಮ ಅವಕಾಶ ನೀಡಿದ್ದು, ಇದರಿಂದ ಬರುವ ಹಣವನ್ನು ಬಡವರ ಅನುಕೂಲಕ್ಕಾಗಿ ಬಳಸಲಾಗುತ್ತಿದೆ. ಕಪ್ಪುಹಣ ಮತ್ತು ಭ್ರಷ್ಟಾಚಾರಕ್ಕೆ ಮಾರಣಾಂತಿಕ ಹೊಡೆತ ನೀಡಿ, ಡಿಜಿಟಲ್ ಕ್ರಾಂತಿಯನ್ನು ಉತ್ತೇಜಿಸಲು




ನಗದು ಅಮಾನ್ಯೀಕರಣ ನಮಗೆ ವಿಶೇಷ ಅವಕಾಶವನ್ನು ಒದಗಿಸಿದೆ. ಆನ್‌ಲೈನ್ ಮೂಲಕ ಪಾವತಿಯು ನಗದಿನ ಅಗತ್ಯವನ್ನು ಕಡಿಮೆ ಮಾಡುತ್ತದೆ ಮತ್ತು ಹಣಕಾಸು ವ್ಯವಹಾರಗಳಲ್ಲಿ ಪಾರದರ್ಶಕತೆ ತರುತ್ತದೆ. ಡಿಜಿಟಲ್ ವ್ಯವಹಾರ ಮುಂತಾದವುಗಳ ಬಗ್ಗೆ ತಿಳಿಯದವರಿಗೆ ಹೇಳಿಕೊಡುವುದು, ಈ ವ್ಯವಹಾರಗಳಲ್ಲಿ ನೈಪುಣ್ಯತೆ ಪಡೆದವರ ಕರ್ತವ್ಯವಾಗಿದೆ. ಜನರ ಜೀವನ ಗುಣಮಟ್ಟವನ್ನು ಸುಧಾರಿಸುವ ಮತ್ತು ಭ್ರಷ್ಟಾಚಾರ, ಕಾಳಧನವನ್ನು ಕಿತ್ತೊಗೆಯುವ ನಿಟ್ಟಿನಲ್ಲಿ ನಡೆಸುವ ಹೋರಾಟವು ಒಂದು ಸಾಮೂಹಿಕ ಮತ್ತು ಸಾಮಾಜಿಕ ಪ್ರಯತ್ನವಾಗಬೇಕು. **ಇದು ಡಿಜಿಟಲ್ ಇಂಡಿಯಾದ ಕತೆ.**

ಪ್ರಧಾನ ಮಂತ್ರಿ ಜನಧನ ಯೋಜನೆ (ಪಿಎಂಜೆಡಿವೈ) ಅಡಿಯಲ್ಲಿ ಖಾತೆಗಳನ್ನು ತೆರೆದಿದ್ದರಿಂದ, ಅಡುಗೆ ಅನಿಲ (ಎಲ್‌ಪಿಜಿ) ಸಬ್ಸಿಡಿಯನ್ನು ನೇರ ವರ್ಗಾವಣೆ ಯೋಜನೆ (ಡಿಬಿಟಿ) ಅಥವಾ ಪಹಲ್ – ಪಿಎಹೆಚ್‌ಎಎಲ್ ಅಡಿಯಲ್ಲಿ ನೇರವಾಗಿ ಫಲಾನುಭವಿಗಳಿಗೆ ತಲುಪಿಸಲು ಸಾಧ್ಯವಾಗಿದೆ. ಈ ಉಪಕ್ರಮವು, ಬಡ ಕುಟುಂಬಗಳಿಗೆ ಅನುಕೂಲವನ್ನು ತಲುಪಿಸುವ ಅತ್ಯುತ್ತಮ ವಿಧಾನವಾಗಿ ಜಾಗತಿಕವಾಗಿ ಹೊರಹೊಮ್ಮುವ ಸಂಭವವಿದೆ. 160 ದಶಲಕ್ಷ ನೊಂದಾಯಿತ ಫಲಾನುಭವಿಗಳೊಂದಿಗೆ, ಇದು ವಿಶ್ವದಲ್ಲೇ ಅತಿ ದೊಡ್ಡ "ಡಿಬಿಟಿ" ಯೋಜನೆ ಎನಿಸಿದೆ. ಸಬ್ಸಿಡಿ ಸುಧಾರಣೆ ಈ ಯೋಜನೆಯ ಪ್ರಾಥಮಿಕ ಗುರಿಯಾಗಿದ್ದು, ಸಬ್ಸಿಡಿಯನ್ನು ರದ್ದುಗೊಳಿಸುವ ಬದಲು, ಉದ್ದೇಶಿತ ಫಲಾನುಭವಿಗಳಿಗಷ್ಟೇ ಅದು ತಲುಪುವಂತೆ ನೋಡಿಕೊಳ್ಳುವ ಮತ್ತು ಸಾರ್ವಜನಿಕ ವಿತರಣೆ ವ್ಯವಸ್ಥೆಯುದ್ದಕ್ಕೂ ಹೆಚ್ಚು ಪಾರದರ್ಶಕತೆ ತರುವ ಮತ್ತು ಸೋರಿಕೆ, ಭ್ರಷ್ಟಾಚಾರವನ್ನು ತೊಡೆದು ಹಾಕುವುದೂ ಇದರ ಉದ್ದೇಶವಾಗಿದೆ. ಈ ಯೋಜನೆ ಆರಂಭದ ಬಳಿಕ ಸರ್ಕಾರಕ್ಕೆ ಎಲ್‌ಪಿಜಿ ಸಬ್ಸಿಡಿ ರೂಪದಲ್ಲಿ 22,000 ಕೋಟಿ ರೂ. ಉಳಿತಾಯವಾಗಿದೆ.

ನಗದು ಅಮಾನ್ಯೀಕರಣ ಮತ್ತು ಆರ್ಥಿಕ ವಲಯದಲ್ಲಿ ಕೈಗೊಂಡ ಇತರ ನಿರ್ಧಾರಗಳು ಸಾರ್ವತ್ರಿಕ ಆರ್ಥಿಕ ಒಳಗೊಳ್ಳುವಿಕೆಯನ್ನು ಸಾಧಿಸಲು ಮತ್ತು ಪ್ರತಿಯೊಬ್ಬ ಪ್ರಜೆಯನ್ನೂ ಬ್ಯಾಂಕಿಂಗ್ ಜಾಲಕ್ಕೆ ತರುವಲ್ಲಿ ಜೊತೆ ಜೊತೆಯಲ್ಲಿ ಕೆಲಸ ಮಾಡಿವೆ. ಪ್ರಧಾನ ಮಂತ್ರಿ ಜನ್ ಧನ್ ಯೋಜನೆ (ಪಿಎಂಜೆಡಿವೈ) ಅಡಿಯಲ್ಲಿ ಇದುವರೆಗೂ ಸುಮಾರು 28.13 ಕೋಟಿ ಖಾತೆಗಳನ್ನು ತೆರೆಯಲಾಗಿದೆ. ಇದು ನಗದು ರಹಿತ ಆರ್ಥಿಕತೆ ಅಗತ್ಯಕ್ಕೆ ಇಂಬು ಒದಗಿಸಿದ್ದು, 'ಆರ್ಥಿಕ ಅಸ್ಪೃಶ್ಯತೆ' ನಿವಾರಣೆ ಗುರಿಯನ್ನು ಸಾಧಿಸುವ ನಿಟ್ಟಿನಲ್ಲೂ ದಿಟ್ಟ ಹೆಜ್ಜೆಯಾಗಿದೆ. ಈ ಯೋಜನೆಯು, ಸ್ವಾತಂತ್ರ್ಯಾನಂತರ ಕಾಲದಿಂದ ಆಗಸ್ಟ್ 2014ರವರೆಗೆ ತೆರೆಯಲಾದ ಒಟ್ಟು ಖಾತೆಗಳಿಗಿಂತಲೂ ಹೆಚ್ಚು ಖಾತೆಗಳನ್ನು ಎರಡೇ ವರ್ಷಗಳಲ್ಲಿ ತೆರೆಯಲು ಅನುವು ಮಾಡಿಕೊಟ್ಟಿದೆ. **ಇದು ಸರ್ವರನ್ನೂ ಒಳಗೊಂಡ ಭಾರತದ ಕತೆ.**

'ಪಿಎಹೆಚ್‌ಎಎಲ್' – ಪಹಲ್ ಯೋಜನೆಯ ಮತ್ತೊಂದು ಮುಖವೇ "ಗೀವ್ ಇಟ್ ಅಪ್" ಅಭಿಯಾನ. ಈ ಯೋಜನೆಯು ವಾರ್ಷಿಕ 10 ಲಕ್ಷ ರೂಗಿಂತಲೂ ಹೆಚ್ಚು ಆದಾಯ ಗಳಿಸುವ ವ್ಯಕ್ತಿಗಳನ್ನು ಸ್ವಯಂ ಪ್ರೇರಿತವಾಗಿ ಎಲ್‌ಪಿಜಿ ಸಬ್ಸಿಡಿ ಬಿಟ್ಟುಕೊಡುವಂತೆ ಪ್ರೇರೇಪಿಸುತ್ತದೆ. ಈ ರೀತಿಯಲ್ಲಿ ಉಳಿತಾಯ ಮಾಡಲಾದ ಹಣವನ್ನು, ಅಡುಗೆಗಾಗಿ ಕಟ್ಟಿಗೆ ಅಥವಾ ಸೀಮೆ ಎಣ್ಣೆ ಸ್ಟೋವ್ ಮೇಲೆ ಅವಲಂಬಿಸಿ



65 ಲಕ್ಷ ಕುಟುಂಬಗಳಿಗೆ ಹೊಸ ಎಲ್‌ಪಿಜಿ ಸಂಪರ್ಕಗಳನ್ನು ನೀಡಲು ಬಳಸಲಾಗಿದೆ. ಒಂದು ಕೋಟಿಗೂ ಹೆಚ್ಚು ಮಂದಿ ಸಬ್ಸಿಡಿಯನ್ನು ಸ್ವಯಂಪ್ರೇರಿತರಾಗಿ ಬಿಟ್ಟುಕೊಟ್ಟಿದ್ದಾರೆ ಮತ್ತು ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು 5000 ಕೋಟಿ ರೂ. ಉಳಿತಾಯವಾಗಿದೆ. **ಇದು ಭ್ರಷ್ಟನಿರೋಧಕ ಭಾರತದ ಕತೆ.**

'ಮೇಕ್ ಇನ್ ಇಂಡಿಯಾ' ಅಭಿಯಾನವು ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾಗಿದ್ದು, ಭಾರತವನ್ನು ಜಾಗತಿಕ ಉತ್ಪಾದನೆಯ ಕೇಂದ್ರವನ್ನಾಗಿಸುವುದು




ಇದರ ಪ್ರಮುಖ ಗುರಿಯಾಗಿದೆ. ಉತ್ತಮ ಮೂಲಸೌಕರ್ಯ, ಉದ್ಯೋಗಾವಕಾಶ ಮತ್ತು ಭಾರತದ ಭಾರಿ ಜನಸಂಖ್ಯಾಬಲದ ಸದ್ಬಳಕೆಗೆ ಇದು ದಾರಿ ಮಾಡಿದೆ. ವಿದೇಶಿ ನೇರ ಬಂಡವಾಳದ (ಎಫ್‌ಡಿಐ) ಹರಿವು 2017ರ ಆರಂಭದಲ್ಲಿ ಇದುವರೆಗಿನ ಗರಿಷ್ಠ ಮಟ್ಟ ತಲುಪಿದ್ದು, 3.35 ಶತಕೋಟಿ ಡಾಲರ್ ಹರಿದುಬಂದಿದೆ. ಈ ಮೊತ್ತವು ಹಾಲಿ ಚಾಲ್ತಿ ಖಾತೆ ಖೋತಕ್ಕಿಂತಲೂ ಪ್ರಮಾಣಕ್ಕಿಂತಲೂ ಹೆಚ್ಚಿನದ್ದಾಗಿದೆ. ಮೇಕ್ ಇನ್ ಇಂಡಿಯಾ ಆರಂಭದ ಬಳಿಕ ವಿದೇಶಿ ಹೂಡಿಕೆ ಶೇ. 46ರಷ್ಟು ಏರಿಕೆಯಾಗಿದೆ. **ಇದು ಹೂಡಿಕೆದಾರ–ಸ್ನೇಹಿ ಭಾರತದ ಕತೆ.**

ಐತಿಹಾಸಿಕ 'ಜಿಎಸ್‌ಟಿ' ಕಾಯ್ದೆಯ ಅನುಮೋದನೆಯೊಂದಿಗೆ ತೆರಿಗೆ ಆಡಳಿತ ಸರಳಗೊಳ್ಳಲಿದ್ದು, ಸರಕು ಮತ್ತು ಸೇವೆಗಳ ಮಾರುಕಟ್ಟೆ ವ್ಯಾಪ್ತಿಯನ್ನು ದೇಶಾದ್ಯಂತ ವಿಸ್ತರಿಸಲಿದೆ ಮತ್ತು ತೆರಿಗೆ ಜಾಲದ ವಿಸ್ತರಣೆಯೊಂದಿಗೆ ಆರ್ಥಿಕ ಪ್ರಗತಿಗೆ ಉತ್ತೇಜನ ದೊರೆಯಲಿದೆ. ಸರ್ಕಾರದ ಆದಾಯ ಹೆಚ್ಚಾಗಲಿದೆ; ಸರಕು ಸಾಗಣೆ, ದಾಸ್ತಾನು ವೆಚ್ಚ, ತೆರಿಗೆ ವಂಚನೆ ಕಡಿಮೆಯಾಗಲಿದೆ ಮತ್ತು ಉತ್ಪಾದಿತ ಸರಕುಗಳ ಬೆಲೆಯೂ ಕಡಿಮೆಯಾಗಲಿದೆ. ಒಂದು ದೇಶ, ಒಂದು ತೆರಿಗೆ ಕನಸು ನನಸಾಗಲಿದೆ. ಇದು ಸರ್ಕಾರದ ನಿರ್ಧಾರಕ ಶಕ್ತಿಗೆ ಒಂದು ನಿದರ್ಶನ ಎಂಬುದರಲ್ಲಿ ಅನುಮಾನವಿಲ್ಲ. ಬಹು ತೆರಿಗೆ, ಅಂತಾರಾಜ್ಯ ತೆರಿಗೆ, ಅಧಿಕ ಸಾಗಣೆ ವೆಚ್ಚ ಮತ್ತು ವಿಚ್ಛಿನ್ನ ಮಾರುಕಟ್ಟೆ ಸಮಸ್ಯೆಗಳನ್ನು ಜಿಎಸ್‌ಟಿ ಪರಿಹರಿಸುವುದಿಂದ ಉತ್ಪಾದಿತ ಸರಕುಗಳ ಬೆಲೆ ಕಡಿಮೆಯಾಗಲಿದೆ. ಜಿಎಸ್‌ಟಿ ಸೂಕ್ತ ಸೀಮಾ ಸುಂಕಕ್ಕೂ ಅವಕಾಶ ಮಾಡಿಕೊಡುವುದರಿಂದ ವಿದೇಶಿ ಆಮದುಗಳಿಂದ ರಕ್ಷಣೆ ದೊರೆಯುತ್ತದೆ. **ಇದು ಪರಿವರ್ತನಶೀಲ ಭಾರತದ ಕತೆ.**

ಮತ್ತಷ್ಟು ದಕ್ಷ ಆರ್ಥಿಕತೆಯ ಕನಸನ್ನು ನನಸಾಗಿಸಿಕೊಳ್ಳಲು ಮತ್ತು ಡಿಜಿಟಲ್ ಮೂಲಸೌಕರ್ಯ ಹಾಗೂ ಡಿಜಿಟಲ್ ಸಾಕ್ಷರತೆಯನ್ನು ಉತ್ತೇಜಿಸಲು 'ಡಿಜಿಟಲ್ ಇಂಡಿಯಾ ಅಭಿಯಾನ'ವನ್ನು ಆರಂಭಿಸಲಾಗಿದೆ. ಇ–ಆಡಳಿತವು ದಕ್ಷತೆ ಮತ್ತು ಸಾಕ್ಷರತೆಯನ್ನು ಕಾಯ್ದುಕೊಳ್ಳುವುದರ ಜೊತೆಗೆ, ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಸಮಯವನ್ನು ಉಳಿಸುತ್ತದೆ.

ಇದು ಇನ್ನೂ ಆರಂಭಿಕ ಹಂತವಾಗಿದ್ದರೂ, ಬಹುಭಾಷೆಗೆ ವಿಸ್ತರಿಸುವುದರಿಂದ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅಂತರ್ಜಾಲ ಸಂಪರ್ಕವನ್ನು ಹೆಚ್ಚಿಸುವುದರಿಂದ ಈ ಯೋಜನೆಯನ್ನು ಮತ್ತಷ್ಟು ಸುಧಾರಿಸಬಹುದು.

ಸರ್ಕಾರವು ಮೂಲ ಸೌಕರ್ಯದ ಅಗತ್ಯವನ್ನು ಮನಗಂಡಿದೆ. ಆದ್ದರಿಂದಲೇ ನಾವು ದೇಶಾದ್ಯಂತ 2.5 ಲಕ್ಷ ಪಂಚಾಯತ್‌ಗಳಲ್ಲಿ ಅಂತರ್ಜಾಲ ಸೇವೆ ಕಲ್ಪಿಸುವ 'ಭಾರತ್ ಬ್ರಾಡ್‌ಬ್ಯಾಂಡ್' ಸ್ಥಾಪನೆಗೆ ಬದ್ಧರಾಗಿದ್ದೇವೆ. ಜನವರಿ 29, 2017ರಂತೆ, 76,089 ಗ್ರಾಮ ಪಂಚಾಯತ್‌ಗಳಿಗೆ, ಒಟ್ಟು 1,72,257 ಕಿ.ಮೀ. ಆಪ್ಟಿಕಲ್ ಫೈಬರ್ ಕೇಬಲ್ ಅಳವಡಿಸಲಾಗಿದೆ. 16,355 ಗ್ರಾಮ ಪಂಚಾಯಿತಿಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಲಾಗಿದೆ. **ಇದು ಡಿಜಿಟಲ್ ಇಂಡಿಯಾದ ಕತೆ.**

ಈ ಸರ್ಕಾರದ ಹೆಸರಲ್ಲಿ ಹಾಸು ಹೊಕ್ಕಾಗಿರುವ ಒಂದು ಮಹತ್ವದ ಯೋಜನೆಯೆಂದರೆ, ಸ್ವಚ್ಛ ಭಾರತ್




ಅಭಿಯಾನ. 2019ರ ವೇಳೆಗೆ ಭಾರತವನ್ನು ಬಯಲು ಶೌಚಮುಕ್ತಗೊಳಿಸುವ ಮಹತ್ವದ ಗುರಿಯನ್ನು ಹೊಂದಿರುವ ಕ್ರಾಂತಿಕಾರ ಯೋಜನೆಯೆಂದು ಇದನ್ನು ಶ್ಲಾಘಿಸಲಾಗಿದೆ. ಈ ಯೋಜನೆಯಡಿ, ಶೌಚಾಲಯಗಳ ನಿರ್ಮಾಣದ ಮೂಲಕ ಮೂಲಸೌಕರ್ಯವನ್ನು ಹಲವು ಪಟ್ಟು ಸುಧಾರಣೆ ಮಾಡಲಾಗಿದೆ. ಸರ್ಕಾರದ ಮುಂದಿನ ಗುರಿಯೆಂದರೆ, ಶೌಚಾಲಯಗಳನ್ನು ಬಳಸುವಂತೆ ಜನರಲ್ಲಿ ಪರಿವರ್ತನೆ ತರುವುದು ಮತ್ತು ಇದಕ್ಕಾಗಿ ಇರುವ ಸಾಂಸ್ಕೃತಿಕ, ಪುರಾತನ, ಧಾರ್ಮಿಕ ಮತ್ತು ಸಾಮಾಜಿಕ ಅಡ್ಡಿಗಳನ್ನು ತೊಲಗಿಸುವುದು. ಈ ಯೋಜನೆಯ ಆರಂಭದ ಬಳಿಕ 4 ಕೋಟಿಗೂ ಹೆಚ್ಚು ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದ್ದು, 573 ನಗರಗಳು, 1,88,008 ಹಳ್ಳಿಗಳು ಮತ್ತು 130 ಜಿಲ್ಲೆಗಳನ್ನು ಬಯಲು ಶೌಚ ಮುಕ್ತ ಎಂದು ಘೋಷಿಸಲಾಗಿದೆ. **ಇದು ಸ್ವಚ್ಛ ಭಾರತದ ಕತೆ.**

ಕೌಶಲ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ, ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ (ಪಿಎಂಕೆವಿವೈ) ಯು ಸರ್ಕಾರದ ಮಹತ್ವಕಾಂಕ್ಷೆಯ ಯೋಜನೆಯಾಗಿದ್ದು, ಹೆಚ್ಚು ಹೆಚ್ಚು ಭಾರತೀಯ ಯುವಕರಿಗೆ ಕೈಗಾರಿಕಾ–ಸಂಬಂಧಿತ ಕೌಶಲ್ಯಗಳಲ್ಲಿ ತರಬೇತಿ ನೀಡಿ, ಅವರಿಗೆ ಉತ್ತಮ ಜೀವನಾಧರ ಆದಾಯ ಗಳಿಕೆಗೆ ನೆರವಾಗುವುದು ಈ ಯೋಜನೆಯ ಧ್ಯೇಯವಾಗಿದೆ. **"ಕೌಶಲ್ ಭಾರತ್ ಕುಶಲ್ ಭಾರತ್"** ಎಂಬ ಘೋಷಣೆಯೊಂದಿಗೆ, 19.85 ಲಕ್ಷ ಯುವಕರನ್ನು ತರಬೇತಿಗೊಳಿಸಲಾಗಿದ್ದು, ಈ ಪೈಕಿ 2.49 ಲಕ್ಷ ಮಂದಿಗೆ 2016ರ ಅವಧಿಯಲ್ಲಿ ಉದ್ಯೋಗಾವಕಾಶ ಒದಗಿಸಲಾಗಿದೆ. 596 ಜಿಲ್ಲೆಗಳಲ್ಲಿ 8479 ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. **ಇದು ಕೌಶಲ ಭಾರತದ ಕತೆ.**

'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ' ನಾಣ್ನುಡಿಯಲ್ಲಿ ಸರ್ಕಾರ ನಂಬಿಕೆಯಿರಿಸಿದ್ದು, ಸರ್ಕಾರದ ಬದಲಾದ ವೃತ್ತಿ ಮೌಲ್ಯಗಳಿಂದ ಇದು ಸಾಬೀತಾಗಿದೆ. ಪ್ರಸಕ್ತ ನಾಯಕತ್ವವು ವೃತ್ತಿಪರ ಕೆಲಸದ ವಿಧಾನವನ್ನು ಹೊಂದಿದ್ದು, ಸರ್ಕಾರದಲ್ಲಿ ಹೊಸ ಕೆಲಸದ ಸಂಸ್ಕೃತಿಯನ್ನು ಆರಂಭಿಸುವ ಮೂಲಕ ಆಡಳಿತವನ್ನು 'ಕಾರ್ಪೊರೇಟೀಕರಣ' ಮಾಡಿದೆ. ಸಚಿವರು, ಹಿರಿಯ ಅಧಿಕಾರಿಗಳನ್ನೊಳಗೊಂಡ

ಸಾಮಾನ್ಯ ಪರಿಶೀಲನಾ ಸಭೆಗಳು ಮತ್ತು ದೇಶಾದ್ಯಂತ ಎಲ್ಲಾ ಅಧಿಕಾರಿಗಳ ಜೊತೆ ಆಗಾಗ್ಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆಗಳನ್ನು ನಡೆಸುವುದು ಮಹತ್ವದ ವಿಚಾರವಾಗಿದೆ. ವ್ಯವಸ್ಥೆಯಲ್ಲಿ ವಿಸ್ತಾರವಾಗಿ ಹಬ್ಬಿದ್ದ ಭ್ರಷ್ಟಾಚಾರವನ್ನು ನಿಯಂತ್ರಿಸುವುದು ಮತ್ತು ಕಲ್ಲಿದ್ದಲು ನಿಕ್ಷೇಪ ಹಂಚಿಕೆಯಂತಹ ಪ್ರಕರಣಗಳಲ್ಲಿ ಕಂಡು ಬಂದಂತಹ ನಿರ್ಧಾರ ವಿಳಂಬವನ್ನು ತೊಡೆದುಹಾಕಿ, ಆಡಳಿತಾತ್ಮಕ ಅಡಚಣೆಗಳನ್ನು ತಪ್ಪಿಸಿರುವುದು ಈ ಸರ್ಕಾರದ ಮಹತ್ವದ ಸಾಧನೆ. **ಇದು ಪಾರದರ್ಶಕ ಭಾರತದ ಕತೆ**.

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನಾ, ಮಣ್ಣು ಆರೋಗ್ಯ ಕಾರ್ಡ್ ಯೋಜನೆ, ಬೇವು ಲೇಪಿತ ಯೂರಿಯಾ, ಕನಿಷ್ಠ ಬೆಂಬಲ ಬೆಲೆ ಹೆಚ್ಚಳ ಇತ್ಯಾದಿ ಕೃಷಿ ಕ್ಷೇತ್ರದ ಯೋಜನೆಗಳು ದುರ್ಬಲ ಮುಂಗಾರಿನ ನಡುವೆಯೂ ನಮ್ಮ ದೇಶದ ಕೃಷಿಕರಿಗೆ ವರದಾನವಾಗಿವೆ.




2014–17ರ ಅವಧಿಯಲ್ಲಿ 'ಮೋರ್ ಕ್ರಾಪ್ ಪರ್ ಡ್ರಾಪ್' ಯೋಜನೆಯಡಿ ಸುಮಾರು 15.86 ಲಕ್ಷ ಹೆಕ್ಟೇರ್ ಭೂಮಿಯನ್ನು ಸಣ್ಣ ನೀರಾವರಿ ಯೋಜನೆಯಡಿಗೆ ತರಲಾಗಿದೆ. ಇದೇ ವೇಳೆ, 6.20 ಕೋಟಿ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ವಿತರಣೆ ಮಾಡಲಾಗಿದೆ. ವಿಮೆ ಸುರಕ್ಷತೆ ವಿಚಾರವಾಗಿ ಹೇಳುವುದಾದರೆ, 2016ರ ಮುಂಗಾರು ಅವಧಿಯಲ್ಲಿ 23 ರಾಜ್ಯಗಳು; 390 ಲಕ್ಷ ಕೃಷಿಕರಿಗೆ ವಿಮೆ ಒದಗಿಸಲಾಗಿದ್ದು, 386.75 ಲಕ್ಷ ಹೆಕ್ಟೇರ್ ಭೂಮಿಗೆ 1,41,883.30 ಕೋಟಿ ರೂ. ಮೌಲ್ಯದ ವಿಮೆ ಒದಗಿಸಲಾಗಿದೆ. 2016–17ರ ಹಿಂಗಾರು




ಅವಧಿಯಲ್ಲಿ, ಇದುವರೆಗಿನ ಪ್ರಕಾರ, 167 ಲಕ್ಷ ಕೃಷಿಕರು ಮತ್ತು 193.35 ಲಕ್ಷ ಹೆಕ್ಟೇರ್ ಭೂಮಿಗೆ 71,728.59 ಕೋಟಿ ರೂ. ಮೌಲ್ಯದ ವಿಮೆ ಒದಗಿಸಲಾಗಿದೆ. ಈ ಭಾರಿ ಅಂಕಿ–ಅಂಶಗಳು ದೇಶದ 'ಅನ್ನದಾತರ' ಕಲ್ಯಾಣಕ್ಕಾಗಿ ಸರ್ಕಾರದ ಬದ್ಧತೆಯನ್ನು ತೋರಿಸುತ್ತವೆ.

ಮೂಲಸೌಕರ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, 'ಸ್ಮಾರ್ಟ್ ಸಿಟಿ' ಯೋಜನೆ, 'ಅಮೃತ್' ಮಿಷನ್, ಪ್ರಧಾನ ಮಂತ್ರಿ ಆವಾಸ್ ಯೋಜನೆ, ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಯೋಜನೆ, ಪ್ರಧಾನ ಮಂತ್ರಿ ಸಂಸದ್ ಆದರ್ಶ್ ಗ್ರಾಮ ಯೋಜನೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, 'ಆರ್‌ಇಆರ್‌ಎ' ಅನುಮೋದನೆ, ಇತ್ಯಾದಿಗಳು ಈ ಕ್ಷೇತ್ರದ ಕಾರ್ಯದಕ್ಷತೆಯನ್ನು ಹೆಚ್ಚಿಸಿವೆ.

ಬೇಟಿ ಬಚಾವೊ, ಬೇಟಿ ಪಢಾವೊ, ಅಟಲ್ ಪೆನ್ಶನ್ ಯೋಜನಾ, ಜೀವನ್ ಜ್ಯೋತಿ ಬಿಮಾ ಯೋಜನಾ (ಪಿಎಂಜೆಜೆಬಿವೈ), ಕೃಷಿ ಸಿಂಚಾಯಿ ಯೋಜನಾ, 'ಮುದ್ರಾ' ಬ್ಯಾಂಕ್ ಯೋಜನಾ, ಸುಕನ್ಯಾ ಸಮೃದ್ಧಿ ಯೋಜನಾ, ನಯಿ ಮಂಜಿಲ್ ಯೋಜನಾ ಇತ್ಯಾದಿಗಳು ಸಮಾಜದ ಎಲ್ಲಾ ವರ್ಗಗಳ ಸಮತೋಲಿತ ಪ್ರಗತಿಯನ್ನು ಕಾಯ್ದುಕೊಳ್ಳುತ್ತವೆ. ಮಕ್ಕಳು, ಹಿರಿಯ ನಾಗರಿಕರು, ಕೃಷಿಕರು, ಅಲ್ಪಸಂಖ್ಯಾತರು, ನಗರವಾಸಿಗಳು ಅಥವಾ ಗ್ರಾಮೀಣ ಪ್ರದೇಶದ ಜನರು ಎಲ್ಲರ ಹಿತವನ್ನೂ ಈ ಯೋಜನೆಗಳು ಕಾಯ್ದುಕೊಳ್ಳುತ್ತವೆ. ಸರ್ಕಾರದ ಯೋಜನೆಗಳು ಸಮಾಜದ ಎಲ್ಲಾ ವರ್ಗಗಳಿಗೂ ತಲುಪಿದ್ದು, ಅವರ ಜೀವನವನ್ನು ಸರಳಗೊಳಿಸಿವೆ. ಇದು ಬಡವರು, ಕೃಷಿಕರು ಮತ್ತು ಮಹಿಳೆಯರ ಕತೆಯಾಗಿದ್ದು, ಇವರು ಪರಿವರ್ತನಶೀಲ ಭಾರತದ ಫಲವನ್ನು ಅನುಭವಿಸುತ್ತಿದ್ದಾರೆ.

ಭಾರತದ ವಿದೇಶಾಂಗ ನೀತಿಯತ್ತ ಗಮನ ಹರಿಸುವುದಾದರೆ, ಸರ್ಕಾರದ ಪ್ರಯತ್ನಗಳು ಅತ್ಯಂತ ಸಕಾರಾತ್ಮಕ ಮತ್ತು ಕ್ರಿಯಾತ್ಮಕವಾಗಿವೆ. ಕೇವಲ 2 ವರ್ಷಗಳ ಅವಧಿಯಲ್ಲಿ ಪ್ರಧಾನಿ ಅವರು 6 ಖಂಡಗಳಲ್ಲಿರುವ 50ಕ್ಕೂ ಹೆಚ್ಚು ದೇಶಗಳಿಗೆ ಭೇಟಿ ನೀಡಿದ್ದಾರೆ. ಪ್ರಮಾಣ ವಚನ ಸಮಾರಂಭಕ್ಕೆ ಸಾರ್ಕ್ ದೇಶಗಳ ನಾಯಕರನ್ನು ಆಹ್ವಾನಿಸುವ ಪ್ರಧಾನಿ ಅವರ ಮೊದಲ ನಿರ್ಧಾರವನ್ನೇ 'ಮಾಸ್ಟರ್ ಸ್ಟ್ರೋಕ್'




ಎಂದು ಬಣ್ಣಿಸಬಹುದಾಗಿದ್ದು, ಇದು ನೆರೆಯ ರಾಷ್ಟ್ರಗಳೊಂದಿಗೆ ಹತ್ತಿರದ ಸಂಬಂಧ ಬೆಳೆಸುವ ಭಾರತದ ಉದ್ದೇಶದ ಕುರಿತಾಗಿ ರಾಜತಾಂತ್ರಿಕ ವಲಯದಲ್ಲಿ ಮಹತ್ವದ ಸಂದೇಶವನ್ನು ರವಾನಿಸಿತು. ಭೂತಾನ್ ಅನ್ನು ದ್ವಿಪಕ್ಷೀಯ ಭೇಟಿಗೆ ಮೊದಲ ದೇಶವನ್ನಾಗಿ ಆರಿಸಿಕೊಂಡದ್ದು ಮತ್ತು ನೆರೆಹೊರೆಯ ದೇಶಗಳಿಗೆ ಪ್ರಧಾನಿ ಇದುವರೆಗೂ ಒಮ್ಮೆಯಾದರೂ ಭೇಟಿ ನೀಡಿರುವುದು ಈ ವಿಷಯವನ್ನು ಮತ್ತಷ್ಟು ಸ್ಪಷ್ಟಪಡಿಸಿದೆ. ಪಾಕಿಸ್ತಾನದಿಂದ ಭಯೋತ್ಪಾದನೆ ಕುರಿತಾಗಿ ಭಾರತದ ನಿಲುವು ರಣತಂತ್ರಾತ್ಮಕ ನಿಗ್ರಹದ ಹಂತದಿಂದ ಕಠಿಣ ಸಂದೇಶ ರವಾನೆವರೆಗೂ ಬೆಳೆದಿದೆ. ಪಾಕಿಸ್ತಾನದಿಂದ ಕೇವಲ ದ್ವಿಪಕ್ಷೀಯ ಸಂಬಂಧವನ್ನಷ್ಟೇ ಬಯಸುತ್ತಿದ್ದು, ಪ್ರತ್ಯೇಕವಾದಿಗಳೊಂದಿಗಿನ ಪಾಕ್ ಮಾತುಕತೆಯನ್ನು ಒಪ್ಪುವುದಿಲ್ಲ ಎಂದು ಭಾರತ ಸುಸ್ಪಷ್ಟವಾಗಿ ತಿಳಿಸಿದೆ. ಅಲ್ಲದೆ, ವಿದೇಶಾಂಗ ಕಾರ್ಯದರ್ಶಿ ಮಟ್ಟದ ಮಾತುಕತೆಯನ್ನು ರದ್ದುಪಡಿಸುವ ಮೂಲಕ ಮತ್ತು ಸಾರ್ಕ್ ಶೃಂಗಸಭೆಯನ್ನು ರದ್ದುಪಡಿಸುವ ಮೂಲಕ ಇಂತಹ ನಡೆಗಳಿಗೆ ಪಾಕ್ ವಿರುದ್ಧ ತನ್ನ ನಿಲುವನ್ನು ಪ್ರದರ್ಶಿಸಿದೆ. ಭಾರತದ ಸೇನೆಯ ಮೇಲಿನ ದಾಳಿಗೆ ಸೀಮಿತ ದಾಳಿ ಮೂಲಕ ಪ್ರತೀಕಾರ ತೀರಿಸಿಕೊಂಡ ಬಗೆಯು ಭಾರತದ ಪಾಕ್ ವಿರುದ್ಧ ಭಾರತದ ಸ್ಥಿತಿಯನ್ನು ಮತ್ತಷ್ಟು ಬಲಿಷ್ಠಗೊಳಿಸಿದೆ. ಸಾರ್ಕ್ ಸಮ್ಮೇಳನವನ್ನು ರದ್ದುಗೊಳಿಸುವ ಮೂಲಕ ಭಾರತ ವಿಶ್ವದ ಇತರ ಪ್ರಮುಖ ರಾಷ್ಟ್ರಗಳಿಗೆ ಕಠಿಣ ಸಂದೇಶ ರವಾನಿಸಿದ್ದು, ಆ ರಾಷ್ಟ್ರಗಳು ಪಾಕಿಸ್ತಾನವನ್ನು ಭಯೋತ್ಪಾದಕ ದೇಶವನ್ನಾಗಿ ಘೋಷಿಸಿ ನಿಲುವಳಿ ಮಂಡಿಸಲು ಕಾರಣವಾಗಿದೆ. ಬಹುಪಕ್ಷೀಯ ಒಡನಾಟಗಳಿಗೆ ಸಂಬಂಧಿಸಿದಂತೆ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಪಡೆಯುವ ಭಾರತದ ಪ್ರಯತ್ನಕ್ಕೆ ಸಾಕಷ್ಟು ಸದಸ್ಯರಿಂದ ಬೆಂಬಲ ವ್ಯಕ್ತವಾಗಿದೆ ಮತ್ತು ಪರಮಾಣು ಪೂರೈಕೆದಾರರ ಗುಂಪಿಗೆ ಸೇರ್ಪಡೆ ಕುರಿತಾಗಿಯೂ ಸಾಕಷ್ಟು ಪ್ರಗತಿ ಸಾಧಿಸಲಾಗಿದೆ. 'ಬ್ರಿಕ್ಸ್', 'ಸಾರ್ಕ್', 'ಬಿಮ್‌ಸ್ಟೆಕ್'ಗಳಂತಹ ಪ್ರಾದೇಶಿಕ ಗುಂಪುಗಳ ಜೊತೆ ಭಾರತದ ಒಡನಾಟವು ಫಲ ನೀಡಿದೆ.




ಹವಾಮಾನ ಬದಲಾವಣೆ ಕುರಿತಾದ ಬಹುಪಕ್ಷೀಯ ಮಾತುಕತೆಗೆ (ಪ್ಯಾರಿಸ್ ಒಪ್ಪಂದದಲ್ಲಿ) ಮತ್ತು 'ಡಬ್ಲ್ಯೂಟಿಒ' ಮಾತುಕತೆಗೆ ಸಂಬಂಧಿಸಿದಂತೆಯೂ ಭಾರತ ಅಭಿವೃದ್ಧಿಶೀಲ ದೇಶಗಳ ಮುಂದಾಳತ್ವ ವಹಿಸಿದೆ. ಹಾಲಿ ನಾಯಕತ್ವದಡಿ ಭಾರತ–ಅಮೆರಿಕ ಸಂಬಂಧದಲ್ಲಿ ಮಹತ್ವದ ಬದಲಾವಣೆಯಾಗಿದೆ. ಅಮೆರಿಕ ಪ್ರಮುಖ ರಾಜಕೀಯ ನಾಯಕರೊಂದಿಗೆ ಉತ್ತಮ ಸಂಬಂಧ ಬೆಳೆಸಲು ಸಕಾರಾತ್ಮಕ ಕ್ರಮಗಳನ್ನು ಕೈಗೊಂಡಿರುವ ಪ್ರಧಾನಿ ಅವರು, ತಮ್ಮ ಅಧಿಕಾರಾವಧಿಯ ಮೊದಲ 24 ತಿಂಗಳ ಒಳಗಾಗಿಯೇ ಅಮೆರಿಕ ಅಧ್ಯಕ್ಷರನ್ನು ಭೇಟಿ ಮಾಡಿದರು ಮತ್ತು ಮೂರು ಭಾರಿ ಅಮೆರಿಕ ಭೇಟಿ ಕೈಗೊಂಡರು. ಎರಡೂ ದೇಶಗಳ ನಡುವಿನ ರಕ್ಷಣಾ ಸಂಬಂಧಗಳು ಉತ್ತಮ ಪ್ರಗತಿ ಕಂಡಿವೆ. ಸಾಂಪ್ರದಾಯಿಕ ಮಿತ್ರ ರಾಷ್ಟ್ರಗಳಾದ ಜಪಾನ್ ಮತ್ತು ರಷ್ಯಾ ಜೊತೆಗೂ ಭಾರತ ಬಾಂಧವ್ಯ ಮುಂದುವರಿಸಿದ್ದು, ದಕ್ಷಿಣ ಏಷಿಯಾ ಭಾಗದಲ್ಲಿ ಚೀನಾದ ಪ್ರಗತಿ ಮಹತ್ವಾಕಾಂಕ್ಷೆಗೆ ಭಾರತ ಸವಾಲೊಡ್ಡಿದೆ. 'ಟಿಎಪಿಐ' ಯೋಜನೆ, ಛಹ್‌ಬಹರ್ ಬಂದರು ಒಪ್ಪಂದಗಳು ಈ ಪ್ರದೇಶದಲ್ಲಿ ಚೀನಾದ ಆಧಿಪತ್ಯಕ್ಕೆ ಅಂಕುಶ ಹಾಕುವಲ್ಲಿ ಪರಿಣಾಮಕಾರಿಯಾಗಿವೆ. ಸಾಂಪ್ರದಾಯಿಕ ಮಿತ್ರ ದೇಶಗಳೊಂದಿಗೆ ಸಂಬಂಧ ಬೆಳೆಸುವುದರ ಜೊತೆಗೆ, ಮಧ್ಯ ಏಶಿಯಾ, ಆಫ್ರಿಕಾದ ಹೊಸ ಉದಯೋನ್ಮುಖ ದೇಶಗಳೊಂದಿಗೆ; ಅಪಾರ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿರುವ ದೇಶಗಳೊಂದಿಗೆ ಮತ್ತು ರಣತಂತ್ರಾತ್ಮಕ ಮಹತ್ವ ಹೊಂದಿರುವ ದೇಶಗಳೊಂದಿಗೆ ರಾಜತಾಂತ್ರಿಕ ಸಂಬಂಧ ಬೆಳೆಸುವುದರತ್ತ ಸರ್ಕಾರ ಗಮನ ಹರಿಸುತ್ತಿದೆ. ಸಹಜ ನಾಯಕನಾಗಿ ಹೊರಹೊಮ್ಮುವ ನಿಟ್ಟಿನಲ್ಲಿ ಭಾರತ ಒಂದು ಹೆಜ್ಜೆ ಮುಂದಿಟ್ಟಿದೆ. **ಇದು ಉದಯೋನ್ಮುಖ ಭಾರತದ ಕತೆ.**

ಅದು ನೇಪಾಳದ ಭೂಕಂಪವಾಗಿರಲಿ, ಅಥವಾ ಯೆಮೆನ್‌ನಲ್ಲಿ ಭಾರತೀಯರ ಅಸಹಾಯಕತೆಯಾಗಿರಲಿ, ಕಾಶ್ಮೀರದಲ್ಲಿ ಪ್ರವಾಹವಾಗಿರಲಿ ಅಥವಾ ಕೇರಳ ದೇಗುಲದಲ್ಲಿ ಬೆಂಕಿ ಅನಾಹುತವಾಗಿರಲಿ, ಸರ್ಕಾರ ಸದಾ ಪರಿಹಾರ ಮತ್ತು ರಕ್ಷಣಾ ಕ್ರಮಗಳೊಂದಿಗೆ ಸಹಾಯ ಹಸ್ತ ಚಾಚಿದೆ. ಅಂತಾರಾಷ್ಟ್ರೀಯ ಯೋಗ ದಿನ ಮುಂತಾದ ಕಾರ್ಯಕ್ರಮಗಳ ಪರಿಣಾಮಕಾರಿ ಬಳಕೆಯೊಂದಿಗೆ ಭಾರತ ತನ್ನ ಸೌಮ್ಯ ಶಕ್ತಿಯನ್ನು ವಿಶ್ವದರ್ಶನ ಮಾಡಿಸಿದೆ. **ಇದು ಕಾಳಜಿಯುತ ಭಾರತದ ಕತೆ.**

ಕಳೆದ 3 ವರ್ಷಗಳಲ್ಲಿ, ಮುಂಬರುವ ದಿನಗಳಲ್ಲಿ ದೇಶದ ಮತ್ತಷ್ಟು ಪ್ರಗತಿಗೆ ಕ್ರಮಗಳನ್ನು ಕೈಗೊಳ್ಳಲು ಅಗತ್ಯವಾದ ತಳಪಾಯವನ್ನು ಹಾಕಲಾಗಿದೆ. ಪತ್ರಿಕಾಗೋಷ್ಠಿಗಳು, ಟಿವಿ, ರೆಡಿಯೊ, ಮುದ್ರಣ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಭಾರಿ ಮಟ್ಟದಲ್ಲಿ ಇವುಗಳ ಕುರಿತು ಜನರಿಗೆ ಮಾಹಿತಿ ತಲುಪಿಸಲಾಗಿದೆ. ಖುದ್ದು ಪ್ರಧಾನಿ ಅವರೇ ಆಲ್ ಇಂಡಿಯಾ ರೆಡಿಯೊದ ತಮ್ಮ 'ಮನ್ ಕಿ ಬಾತ್' ಮಾಸಿಕ ಕಾರ್ಯಕ್ರಮದ ಮೂಲಕ ದೇಶದ ಜನತೆಗೆ ತಾವು ಹೇಳಿದ್ದನ್ನು ಮಾಡಿ ತೋರಿಸುತ್ತಾರೆ.




ಸರ್ಕಾರ, ವಿರೋಧ ಪಕ್ಷಗಳು, ಆಡಳಿತ, ಕಾರ್ಪೊರೇಟ್ ವಲಯ ಮತ್ತು ನಾಗರಿಕರ ಸಾಮೂಹಿಕ ಪ್ರಯತ್ನವು, ಒಂದು ಅಭಿವೃದ್ಧಿಹೊಂದಿದ ಮತ್ತು ಜಾಗತಿಕ ದೈತ್ಯ ದೇಶವಾಗಿ ಹೊರಹೊಮ್ಮಬೇಕೆಂಬ ಭಾರತದ ಕನಸನ್ನು ನನಸು ಮಾಡಲು ನೆರವಾಗುತ್ತದೆ. **ಇದು ಸಂವಹನನಿರತ ಭಾರತದ ಕತೆ.**

ನಮ್ಮ ಕತೆಯನ್ನು ಪುನಃ ಹೇಳಬೇಕು – ಮತ್ತು ಭಾರತವನ್ನು ಬಣ್ಣದ ಕನ್ನಡಕದಿಂದ ಮತ್ತು ತುಕ್ಕು ಹಿಡಿದ ಚೌಕಟ್ಟಿನೊಳಗಿಂದ ನೋಡುವ ಪಾಶ್ಚಾತ್ಯ ದೇಶಗಳ ದೃಷ್ಟಿಕೋನ ಬದಲಾಗಬೇಕು. ಸಮಾಜವಾದಿ ಸಿದ್ಧಾಂತಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಿಂದಲೂ ಭಾರತದ ಕುರಿತಾಗಿ ಪಾಶ್ಚಾತ್ಯ ದೇಶಗಳ ಈ ಧೋರಣೆ ಬೆಳೆದುಬಂದಿದ್ದು, ಇಂತಹ 'ಇಸಂ'ಗಳಿಗೆ ಮನುಕುಲ ಎಂದೋ ಸಮಾಧಿ ಕಟ್ಟಿದ ಬಳಿಕವೂ ಇದು ಮುಂದುವರಿದಿದೆ. ಮೇಲಿನವೆಲ್ಲವೂ 'ನವ ಭಾರತ' ಮತ್ತು 'ಹೊಸ ಶಕ್ತಿ' ಮತ್ತು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ನಿರ್ಮಾಣ ಮಾಡುತ್ತಿರುವ, ಬದ್ಧತೆಯನ್ನು ಸೂಚಿಸುವ ಕೆಲವೇ ಕಥಾನಕಗಳಷ್ಟೇ. **ಇದು ಮಿಷನ್ ಮೋದಿಯ** (Mission MODI – Making of Developing India - ಅಭಿವೃದ್ಧಿ ಭಾರತವನ್ನು ಸಾಧ್ಯಗೊಳಿಸುವುದು) **ಕತೆ.** ❑

ಯೋಜನಾ

**ಜೂನ್ 2017 ಸಂಚಿಕೆಯ ವಿಷಯ**

**ಯುವ ಭಾರತ**

**ಹೊರಹೊಮ್ಮುತ್ತಿರುವ ಶಕ್ತಿ**

# ಜೀವನ್ಮುಖಿ ಮಾರ್ಗಗಳ ಮೂಲಕ ರೂಪಾಂತರ

* ಅಮರ್‌ಜೀತ್ ಸಿನ್ಹಾ



**ಗ್ರಾಮೀಣಾಭಿವೃದ್ಧಿ ಇಲಾಖೆಯು ಒಂದು ಲಕ್ಷ ಕೋಟಿ ರೂಪಾಯಿಗೂ ಮಿಕ್ಕಿದ ತನ್ನ ವಾರ್ಷಿಕ ಬಜೆಟ್‌ನ ಮೂಲಕ ಬಡತನ ನಿವಾರಣೆ ಎಲ್ಲ ಆಯಾಮಗಳನ್ನು ನಿರ್ವಹಿಸುತ್ತಿದೆ. ಅಲ್ಲದೇ ಇತರ ಇಲಾಖೆಗಳ ಸಮನ್ವಯದೊಂದಿಗೆ ಗ್ರಾಮೀಣ ಪ್ರದೇಶಗಳ ಕುಟುಂಬಗಳ ಕ್ಷೇಮಾಭಿವೃದ್ಧಿ ಹಾಗೂ ಜೀವನೋಪಾಯಗಳ ಬಗ್ಗೆ ಗಮನಹರಿಸುತ್ತಿದೆ.**

ಗ್ರಾಮೀಣ ಅಭಿವೃದ್ಧಿಯು ಸುಸ್ಥಿರ ಆರ್ಥಿಕ ಅಭಿವೃದ್ಧಿ ಹಾಗೂ ಮಾನವ ವಿಕಾಸದ ಪ್ರಮುಖ ಅಂಶವಾಗಿದೆ. ಗ್ರಾಮೀಣ ಆರ್ಥಿಕತೆಗಳು ಪುನರುಜ್ಜೀವಿತಗೊಂಡು ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ವಿಭಿನ್ನ ಜೀವನೋಪಾಯಗಳ ಅವಕಾಶಗಳು ಒದಗಿದಾಗ ಬಡತನ ನಿವಾರಣೆ ಪ್ರಕ್ರಿಯೆ ವೇಗವಾಗುತ್ತದೆ.

ಗ್ರಾಮೀಣ ಬಡತನ ಹಾಗೂ ಅಭಿವೃದ್ಧಿಯ ಸವಾಲನ್ನು ನಿಭಾಯಿಸುವ ಸಾಮರ್ಥ್ಯದ ಆಧಾರದ ಮೇಲೆ ಭಾರತ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುವುದು ಅವಲಂಬಿತವಾಗಿದೆ. ಈ ಕಾರಣಕ್ಕಾಗಿಯೇ ಸರ್ಕಾರ ಗ್ರಾಮೀಣ ಪ್ರದೇಶದ ಕುಟುಂಬಗಳ ಯೋಗಕ್ಷೇಮ ಹಾಗೂ ಬದುಕು ಸುಧಾರಣೆಗಾಗಿ ಜೀವನೋಪಾಯಗಳು ಹಾಗೂ ಮೂಲಭೂತ ಸೌಕರ್ಯ ಸುಧಾರಿಸಲು ಹೆಚ್ಚಿನ ಆದ್ಯತೆ ನೀಡುತ್ತಿದೆ. ಸರ್ವಾಂತರ್ಗತ ಗ್ರಾಮೀಣ ಅಭಿವೃದ್ಧಿ ಕಾರ್ಯಸೂಚಿಯ ಮೂಲಕವೇ ಸುಸ್ಥಿರ ಮಾನವ ವಿಕಾಸ ಸಾಧ್ಯವಾಗುತ್ತದೆ.

ಗ್ರಾಮೀಣ ಪ್ರದೇಶದಲ್ಲಿನ ಬಡತನ ಹಲವು ಆಯಾಮಗಳನ್ನು ಹೊಂದಿರುತ್ತದೆ. ಆದ ಕಾರಣ ಏಕಕಾಲದಲ್ಲಿ ಈ ಎಲ್ಲ ಆಯಾಮಗಳತ್ತ ಗಮನಹರಿಸಿ ಪರಿಣಾಮಕಾರಿಯಾಗಿ ಇವುಗಳನ್ನು ಪರಿಹರಿಸುವ ಅವಶ್ಯಕತೆ ಇದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಒಂದು ಕುಟುಂಬ ವಸತಿ ಸೌಲಭ್ಯ ಇಲ್ಲದ ಕಾರಣ ಬಡತನದಲ್ಲಿರಬಹುದು, ಅನಕ್ಷರತೆ ಅಥವಾ ವೃತ್ತಿಕೌಶಲ್ಯವಿಲ್ಲದ ಕಾರಣ ಬಡತನ ಅನುಭವಿಸುತ್ತಿರಬಹುದು ಇಲ್ಲವೇ ಅನಾರೋಗ್ಯ ಅಥವಾ ಆಸ್ತಿ–ಪಾಸ್ತಿ ಹೊಂದಿರದ ಕಾರಣಕ್ಕಾಗಿಯೂ ಬಡತನದಲ್ಲಿರಬಹುದು. ಹೀಗೆ ಬಹುವಿಧ ಕಾರಣದಿಂದ 'ವ್ಯಕ್ತಿಗತ ಮಾನವ ಸಾಮರ್ಥ್ಯ'ದ ಸಂಪೂರ್ಣ ಬೆಳವಣಿಗೆ ಸಾಧ್ಯವಾಗುತ್ತಿಲ್ಲ. ಮಾನವಾಭಿವೃದ್ಧಿ ಹಾಗೂ ಆರ್ಥಿಕ ವಿಕಾಸದ ಸೇವೆಗಳ ಮೂಲಕ ಗ್ರಾಮೀಣ ಪ್ರದೇಶದ ಪ್ರತಿಯೊಂದು ಕುಟುಂಬದ ಮಾನವ ಸಾಮರ್ಥ್ಯದ ಸಂಪೂರ್ಣ ಬೆಳವಣಿಗೆಗೆ ಅವಕಾಶ ಒದಗಿಸುವುದು ಗ್ರಾಮೀಣ ಅಭಿವೃದ್ಧಿಯ ನಿಜವಾದ ಸವಾಲಾಗಿದೆ.

ಗ್ರಾಮೀಣಾಭಿವೃದ್ಧಿ ಇಲಾಖೆಯು ಒಂದು ಲಕ್ಷ ಕೋಟಿ ರೂಪಾಯಿಗೂ ಮಿಕ್ಕಿದ ತನ್ನ ವಾರ್ಷಿಕ ಬಜೆಟ್‌ನ ಮೂಲಕ ಈ ಮೇಲೆ ಹೇಳಲಾದ ಬಡತನ ನಿವಾರಣೆ ಎಲ್ಲ ಆಯಾಮಗಳನ್ನು ನಿರ್ವಹಿಸುತ್ತಿದೆ. ಅಲ್ಲದೇ ಇತರ ಇಲಾಖೆಗಳ ಸಮನ್ವಯದೊಂದಿಗೆ ಗ್ರಾಮೀಣ ಪ್ರದೇಶಗಳ ಕುಟುಂಬಗಳ ಕ್ಷೇಮಾಭಿವೃದ್ಧಿ ಹಾಗೂ ಜೀವನೋಪಾಯಗಳ ಬಗ್ಗೆ ಗಮನಹರಿಸುತ್ತಿದೆ. ಗ್ರಾಮೀಣಾಭಿವೃದ್ಧಿಗಾಗಿ ಬೇರೆ ಬೇರೆ ಇಲಾಖೆಗಳ ಹಾಗೂ ರಾಜ್ಯ ಸರ್ಕಾರಗಳ ಬಜೆಟ್‌ನ್ನು ಒಟ್ಟಿಗೆ ಸೇರಿಸಿದಲ್ಲಿ ವಾರ್ಷಿಕವಾಗಿ 3–4 ಲಕ್ಷ ಕೋಟಿ ರೂ. ಗೂ ಹೆಚ್ಚು ಹಣ ಗ್ರಾಮೀಣ ಪ್ರದೇಶದಲ್ಲಿ ವ್ಯಯಿಸಲಾಗುತ್ತಿದೆ.

ಎಲ್ಲೆಡೆ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಜಲ ಸಂರಕ್ಷಣೆಗೆ ಹೆಚ್ಚು ಒತ್ತು ನೀಡುತ್ತಿರುವ ಕಾರಣ ಬೆಳೆ, ತೋಟಗಾರಿಕೆ

* ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಇಲಾಖೆ, ಭಾರತ ಸರ್ಕಾರ. E-mail : secyrd@nic.in

ಮತ್ತು ಪಶು ಸಂಗೋಪನೆ ಒಳಗೊಂಡ ಸಮಗ್ರ ಕೃಷಿ ವ್ಯವಸ್ಥೆ ಹಾಗೂ ಕೃಷಿಯೇತರ ಉದ್ಯೋಗದ ಬೆಳವಣಿಗೆಯತ್ತ ಗಮನ ನೀಡುವಂತಾಗಿದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮನರೆಗಾಯಡಿಯಲ್ಲಿನ ಸಂಪನ್ಮೂಲಗಳನ್ನು ಕುಟುಂಬಗಳಿಗೆ ವಿಭಿನ್ನ ಜೀವನೋಪಾಯದ ಅವಕಾಶ ಒದಗಿಸಲು ಬಳಕೆ ಮಾಡಲು ಪ್ರಯತ್ನಿಸಲಾಗುತ್ತಿದೆ. 'ಮಿಷನ್ ಕನ್ವರ್ಜನ್ಸ್' ಅಡಿಯಲ್ಲಿ ಇತ್ತೀಚಿಗೆ ಅಳವಡಿಸಿಕೊಳ್ಳಲಾದ ಮಾರ್ಗದರ್ಶಿ ಸೂಚನೆಗಳ ಪ್ರಕಾರ ಬರಪೀಡಿತ ಜಲಾನಯನ ಪ್ರದೇಶಗಳಲ್ಲಿ 'ಪರ್ವತದಿಂದ ಕಣಿವೆವರೆಗೆ' ಸೂತ್ರದಲ್ಲಿ 'ಮನರೇಗಾ' ಯೋಜನೆಯ ಸಂಪನ್ಮೂಲಗಳನ್ನು ಸಾಕಷ್ಟು ವೈಜ್ಞಾನಿಕವಾಗಿ ಹಾಗೂ ತಾಂತ್ರಿಕವಾಗಿ ಬಳಕೆ ಮಾಡಲಾಗುವುದು.

**ದೀನ್‌ದಯಾಳ್ ಅಂತ್ಯೋದಯ ಯೋಜನೆ :** ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಅಡಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಗ್ರಾಮೀಣ ಕುಟುಂಬಗಳ ಆರ್ಥಿಕ ಚಟುವಟಿಕೆಗಳಿಗೆ ಕಿರು ಸಾಲಗಳನ್ನು ನೀಡಲಾಗುತ್ತಿದೆ. ಸುಮಾರು 31 ಲಕ್ಷ ಮಹಿಳಾ ಸ್ವಸಹಾಯ ಸಂಘಗಳು ಹಾಗೂ ಸುಮಾರು 3.6 ಕೋಟಿ ಮಹಿಳೆಯರು ಈ ಯೋಜನೆಯ ಭಾಗವಾಗಿದ್ದಾರೆ. ಸ್ವಸಹಾಯ ಗುಂಪುಗಳು, ಗ್ರಾಮೀಣ ಸಂಘಸಂಸ್ಥೆಗಳು, ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಮೂಲಕ ಪರಿಣಾಮಕಾರಿ ಸಾಮಾಜಿಕ ಬಂಡವಾಳ ಅಭಿವೃದ್ಧಿಯಾದ ಬಳಿಕ, ಸೂಕ್ತ ಬ್ಯಾಂಕಿಂಗ್ ವ್ಯವಸ್ಥೆ ಸಹಾಯದಿಂದ ಈ ಗುಂಪುಗಳ ಮುಖಾಂತರ ಆರ್ಥಿಕ ಚಟುವಟಿಕೆಗಳನ್ನು ಕ್ರೋಢೀಕರಿಸುವ ಕಾರ್ಯದ ಬಗ್ಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಮಹಿಳಾ ಸ್ವಸಹಾಯ ಸಂಘಗಳು 85,000 ಕೋಟಿ ರೂಪಾಯಿಯಷ್ಟು ಸಾಲವನ್ನು ಬಟವಡೆ ಮಾಡಿವೆ. ಈ ಪೈಕಿ ಹೆಚ್ಚಿನ ಪಾಲನ್ನು ಹೊಸ ಹೊಸ ಜೀವನೋಪಾಯಗಳತ್ತ ಹಾಗೂ ಬಡ ಕುಟುಂಬಗಳ ಆದಾಯದ ಪ್ರಮಾಣವನ್ನು ಹೆಚ್ಚಿಸಲು ಸಮರ್ಥವಾಗಿ ಬಳಕೆ ಮಾಡಲಾಗಿದೆ. 'ಮನರೇಗಾ' ಯೋಜನೆಯ ಸಂಪನ್ಮೂಲಗಳನ್ನು ಮೇಕೆ ಹಾಗೂ ಕೋಳಿ ಸಾಕಾಣಿಕೆ ಶೆಡ್‌ಗಳ ನಿರ್ಮಾಣ, ಹಾಲಿನ ಡೇರಿ ಶೆಡ್ ನಿರ್ಮಾಣ,



ಕೃಷಿ ಹೊಂಡ, ತೋಡುಬಾವಿಗಳ ನಿರ್ಮಾಣದಂತಹ ಆದಾಯ ಹೆಚ್ಚಿಸುವ ಹೊಸ ಜೀವನೋಪಾಯಗಳ ಮೇಲೆ ವಿನಿಯೋಗಿಸಲಾಗಿದೆ.

**ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಸಾಧನೆ 2016–17** : 2016–17 ನೇ ಸಾಲಿನಲ್ಲಿ ಬಹುತೇಕ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಸಾಧನೆ ಗಮನಾರ್ಹವಾಗಿದೆ. ಪ್ರಧಾನ ಮಂತ್ರಿ ಗ್ರಾಮೀಣ ರಸ್ತೆ ಯೋಜನೆಯಡಿಯಲ್ಲಿ 2011–14 ನೇ ಸಾಲಿನಲ್ಲಿ ದಿನಂಪ್ರತಿ 73.5 ಕಿ.ಮೀ. ರಸ್ತೆ ನಿರ್ಮಾಣವಾಗುತ್ತಿದ್ದರೆ 2014–2016 ನೇ ಸಾಲಿನ ಅವಧಿಯಲ್ಲಿ ದಿನಕ್ಕೆ 100 ಕಿ.ಮೀ. ಗೆ ಹೆಚ್ಚಳವಾಗಿ ಪ್ರಸ್ತುತ 2016–17 ರಲ್ಲಿ ಇದು ಪ್ರತಿ ದಿನಕ್ಕೆ 130 ಕಿ.ಮೀ. ತಲುಪಿದ್ದು, ಇದರ ಹಿಂದಿರುವ ಪ್ರಯತ್ನಗಳನ್ನು ಬಿಂಬಿಸುತ್ತದೆ. ಹಾಗೆಯೇ ಗ್ರಾಮೀಣ ವಸತಿ ಕಾರ್ಯಕ್ರಮಗಳಡಿಯಲ್ಲಿ ಇಂದಿರಾ ಆವಾಸ್ ಯೋಜನೆಯಲ್ಲಿ ಅಪೂರ್ಣಗೊಂಡಿದ್ದ ಮನೆಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡುವುದರ ಜೊತೆಯಲ್ಲಿ ನವೆಂಬರ್ 20,2016 ರಂದು ಪ್ರಧಾನಮಂತ್ರಿಗಳಿಂದ ಚಾಲನೆ ಪಡೆದ 'ಪ್ರಧಾನಮಂತ್ರಿ ಗ್ರಾಮೀಣ ಆವಾಸ್ ಯೋಜನೆ' ಅಡಿಯಲ್ಲಿ ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭಿಸಲಾಯಿತು. ಈಗಾಗಲೇ 32.14 ಲಕ್ಷ ಮನೆಗಳ ನಿರ್ಮಾಣ ಮಾಡಲಾಗಿದೆ ಎಂದು ರಾಜ್ಯಗಳಿಂದ ಬಂದಿರುವ ವರದಿಗಳು ತಿಳಿಸಿವೆ. ಇದು 2011–14 ನೇ ಸಾಲಿನ ಸರಾಸರಿಗೆ ಹೋಲಿಸಿದಲ್ಲಿ ಇದು 2–3 ಪಟ್ಟು ಹೆಚ್ಚಾಗಿದೆ. ಅಂತೆಯೇ 'ಮನರೆಗಾ' ಯೋಜನೆ ಅಡಿಯಲ್ಲಿ ಸಾಮಾನ್ಯವಾಗಿ 25 ರಿಂದ 30 ಲಕ್ಷ ಕಾಮಗಾರಿಗಳು ಪೂರ್ಣಗೊಳ್ಳುತ್ತಿದ್ದವು. ಆದರೆ 2016–17 ಸಾಲಿನಲ್ಲಿ 52 ಲಕ್ಷ ಕಾಮಗಾರಿಗಳು ಪೂರ್ಣಗೊಂಡಿವೆ. 88 ಲಕ್ಷ ಸ್ವತ್ತುಗಳನ್ನು ಮೊದಲ ಬಾರಿಗೆ 'ಮನರೆಗಾ' ಅಡಿಯಲ್ಲಿ 'ಜಿಯೊ ಟ್ಯಾಗಿಂಗ್' ಮಾಡಲಾಗಿದೆ. 2016–17 ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಸಾಧನೆಯ ಸಾರಾಂಶ ಈ ಮುಂದೆ ನೀಡಲಾಗಿದೆ.

**ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ**

* ಈ ಯೋಜನೆಯಲ್ಲಿ 2016–17 ನೇ ಸಾಲಿನಲ್ಲಿ ದಾಖಲೆಯ 47,350 ಕಿ.ಮೀ. ರಸ್ತೆಯನ್ನು ನಿರ್ಮಾಣ ಮಾಡಲಾಯಿತು. ಈ ಕಾರ್ಯಯೋಜನೆ ಅಡಿಯಲ್ಲಿ ಕಳೆದ 7 ವರ್ಷಗಳಲ್ಲಿ ಇದು ಒಂದೇ ವರ್ಷದಲ್ಲಿ ನಿರ್ಮಾಣಗೊಂಡ ರಸ್ತೆಗಳ ದಾಖಲೆಯಾಗಿದೆ.
* ಒಟ್ಟು 47,350 ಕಿ.ಮೀ. ರಸ್ತೆ ನಿರ್ಮಾಣದ ಮೂಲಕ 11,614 ವಸತಿ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. (ದಿನ ಒಂದಕ್ಕೆ ಸರಾಸರಿ 32 ವಸತಿ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲಾಗಿದೆ.). ಇದು ಕೂಡ ಕಳೆದ 7 ವರ್ಷಗಳಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ್ದಾಗಿದೆ.
* ಈ ಯೋಜನೆಯಲ್ಲಿ ಪರಿಸರ ಮಾಲಿನ್ಯ ಹಾಗೂ ನಿರ್ಮಾಣ ವೆಚ್ಚ ತಗ್ಗಿಸಲು ಹಾಗೂ ಕೆಲಸದ ಋತು ಕಾಲಾವಧಿ ಹೆಚ್ಚಿಸಲು ಹಸಿರು ತಂತ್ರಜ್ಞಾನದ ಬಳಕೆ ಹಾಗೂ ಅಸಾಂಪ್ರದಾಯಿಕ ವಸ್ತುಗಳಾದ ಪ್ಲಾಸ್ಟಿಕ್ ತ್ಯಾಜ್ಯ, ಫ್ಲೈಯಾಷ್, ತಾಮ್ರದ ಗಸಿ ಮುಂತಾದವುಗಳನ್ನು ಬಳಸಿ ಗ್ರಾಮೀಣ ರಸ್ತೆ ನಿರ್ಮಿಸಲು ಪ್ರೋತ್ಸಾಹಿಸಲಾಗುತ್ತಿದೆ.
* 2016–17 ನೇ ಸಾಲಿನಲ್ಲಿ ಈ ಹಸಿರು ತಂತ್ರಜ್ಞಾನ ಬಳಸಿ 4,113.13 ಕಿ.ಮೀ. ರಸ್ತೆ ನಿರ್ಮಿಸಲಾಗಿದೆ.

**ಜಲ ಸಂರಕ್ಷಣೆಗೆ ವಿಶೇಷ ಒತ್ತು**

2016–17 ನೇ ಸಾಲಿನಲ್ಲಿ ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ನಿರ್ವಹಣೆಯಲ್ಲಿ ವಿಶೇಷ ಪರಿವರ್ತನೆ ಹಾಗೂ ಜಲ ಸಂರಕ್ಷಣೆ ಕುರಿತು ವಿಶೇಷ ಒತ್ತು ಕಂಡುಬಂದಿದೆ. ಯೋಜನೆಯ ಅಧೀನದ 82% ಸಕ್ರಿಯ ಕಾರ್ಮಿಕರ (9.1ಕೋಟಿ) ಆಧಾರ ಕಾರ್ಡ್ 'ನರೆಗಾಸಾಫ್ಟ್'ನಲ್ಲಿ ಜೋಡಣೆ, 4.6



ಕೋಟಿ ಕಾರ್ಮಿಕರು 'ಆಧಾರ' ಆಧರಿತ ಪೇಮೆಂಟ್ ಗೇಟ್‌ವೇಗೆ ಜೋಡಣೆ, ಇಲೆಕ್ಟ್ರಾನಿಕ್ ಪೇಮೆಂಟ್ ಸಿಸ್ಟಂ ಮೂಲಕ 96% ವೇತನ ಪಾವತಿ, 89 ಲಕ್ಷ ಸ್ವತ್ತುಗಳ 'ಜಿಯೋಟ್ಯಾಗಿಂಗ್', 93 ಲಕ್ಷ ನಕಲಿ ಉದ್ಯೋಗ ಚೀಲಗಳ ರದ್ದತಿ, ಮಳೆ ಕೊರತೆ ಇರುವ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಬರ ನಿರ್ಮೂಲನೆ ಜಲಸಂರಕ್ಷಣೆ ಕಾಮಗಾರಿಗಳು– ಹೀಗೆ 'ಮನರೇಗಾ' ಆರ್ಥಿಕ ದುರ್ಬಲತೆ ಇರುವ ಪ್ರದೇಶದಲ್ಲಿ ಬೇಡಿಕೆಗೆ ಅನುಗುಣವಾಗಿ ಉದ್ಯೋಗವನ್ನು ನೀಡುತ್ತ, ಜೀವನೋಪಾಯ ಭದ್ರತೆ ಒದಗಿಸುವ, ಬಾಳಿಕೆಯ ಸ್ವತ್ತುಗಳನ್ನು ಸೃಷ್ಟಿಸುವ ಒಂದು ಸುವ್ಯಸ್ಥಿತವಾಗಿ ಸಂಚಾಲಿತವಾದ ಕಾರ್ಯಕ್ರಮವಾಗಿ ಸ್ಥಾಪಿತಗೊಂಡಿದೆ.

'ಮನರೇಗಾ' ಈಗಾಗಲೇ 230 ಕೋಟಿ 'ಮಾನವ ದಿನ'ಗಳನ್ನು ಸಾಧಿಸಿದ್ದು, ಇದು ಪರಿಷ್ಕೃತ ಕಾರ್ಮಿಕ ಬಜೆಟ್‌ಗಿಂತ ಹೆಚ್ಚಾಗಿದೆ. ಕೇಂದ್ರ ಮತ್ತು ರಾಜ್ಯದ ಒಟ್ಟು 58,056 ಕೋಟಿ ರೂ. ಹಂಗಾಮಿ ವೆಚ್ಚವು ಈ ಹಿಂದಿನ ಯಾವುದೇ ವರ್ಷಕ್ಕೂ ಹೋಲಿಸಿದಲ್ಲಿ ಅತ್ಯಂತ ಹೆಚ್ಚಾಗಿದೆ. 56% ವೇತನ ಮಹಿಳೆಯರಿಗೆ ಲಭ್ಯವಾಗಿದ್ದು ಕೂಡ ಈವರೆಗಿನ ಅತ್ಯಂತ ಹೆಚ್ಚಿನದಾಗಿದೆ.

ಬರ ಪೀಡಿತ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಯಲ್ಲಿ ಪ್ರಧಾನಮಂತ್ರಿಗಳ ಸಭೆಗಳ ಮೂಲಕ ಜಲಸಂರಕ್ಷಣೆ ಕಾರ್ಯಕ್ಕೆ ಈಗಾಗಲೇ ಚಾಲನೆ ದೊರೆತಿದೆ. ರಾಜ್ಯ ಸರ್ಕಾರಗಳು ಕೂಡಾ ಆಯಾ ನಿರ್ದಿಷ್ಟ ಪ್ರದೇಶಗಳಿಗೆ ಅನುಸಾರವಾಗಿ ಜಲಸಂರಕ್ಷಣೆಯ ಉಪಕ್ರಮಗಳನ್ನು 'ಮನರೇಗಾ' ಯೋಜನೆ ಅಡಿಯಲ್ಲಿ ಕೈಗೆತ್ತಿಕೊಂಡವು. ರಾಜಸ್ಥಾನದಲ್ಲಿ 'ಮುಖ್ಯಮಂತ್ರಿ ಜಲ್ ಸ್ವಾಭಿಮಾನ ಯೋಜನಾ' ಅಡಿಯಲ್ಲಿ ಬರ ಪೀಡಿತ 3200 ಗ್ರಾಮಗಳಲ್ಲಿ 92000 ಜಲಸಂರಕ್ಷಣೆಯ ಪ್ರಕಲ್ಪಗಳು, ಜಾರ್ಖಂಡ್‌ನಲ್ಲಿ ಪ್ರತಿ ಕಂದಾಯ ಗ್ರಾಮದ ಮಂಡಲದಲ್ಲಿ ನಿರ್ಮಾಣಗೊಂಡ ಕೃಷಿ ಹೊಂಡಗಳು, ಹಾಗೆಯೇ ಆಂಧ್ರಪ್ರದೇಶದ 'ನೀರು ಚೆಟ್ಟು' ಯೋಜನೆ, ತೆಲಂಗಾಣಾದ 'ಮಿಷನ್ ಕಾಕತೀಯಾ', ಮಧ್ಯಪ್ರದೇಶದ 'ಕಪಿಲಧಾರಾ' ತೋಡುಬಾವಿ ಯೋಜನೆ, ಮಹಾರಾಷ್ಟ್ರದ 'ಜಲಯುಕ್ತ ಶಿಬಿರ' ಮುಂತಾದವೆಲ್ಲವೂ ಕೂಡ 'ಮನರೆಗಾ' ಯೋಜನೆಯ ಸಂಪನ್ಮೂಲಗಳನ್ನೇ ಬಳಸಿ ಬರ ಪರಿಹಾರದ ಕಾಮಗಾರಿಗಳನ್ನು ಕೈಗೆತ್ತಿಕೊಂಡಿವೆ. 2016–17 ನೇ ಸಾಲಿನ ಆರ್ಥಿಕ ವರ್ಷದಲ್ಲಿ 5.66 ಲಕ್ಷ ಕೃಷಿ ಹೊಂಡಗಳ ನಿರ್ಮಾಣ ಸೇರಿದಂತೆ ಒಟ್ಟು 15.47 ಲಕ್ಷ ಜಲ ಸಂಬಂಧಿ ಕಾಮಗಾರಿಗಳು ಸಂಪನ್ನಗೊಂಡಿವೆ. 2015–16 ಹಾಗೂ 2016–17 ರಲ್ಲಿ 'ಮನರೆಗಾ' ಅಡಿಯಲ್ಲಿ ಒಟ್ಟು 90 ಲಕ್ಷ ಹೆಕ್ಟೆರ್ ಪ್ರದೇಶ ನೀರಾವರಿ ಸಂಭಾವ್ಯ ಪ್ರದೇಶವಾಗಿ ಸೃಷ್ಟಿಸಲಾಗಿದೆ ಎಂದು ಹೊಸದಾಗಿ ಜಾರಿಗೆ ತರಲಾಗಿರುವ “'ಮನರೆಗಾ' ವಾರ್ಷಿಕ ಸಾಧನೆಯ ವರದಿ”ಯಲ್ಲಿ ಕಂಡುಬಂದಿದೆ.

2016–17 ರಲ್ಲಿ 'ಮನರೆಗಾ' ಅಡಿಯಲ್ಲಿ ದೊಡ್ಡ ಪ್ರಮಾಣದಲ್ಲಿ (14.61 ಲಕ್ಷ) ವೈಯಕ್ತಿಕ ಫಲಾನುಭವಿಗಳು ಕೋಳಿ ಸಾಕಾಣಿಕೆ, ಹೈನುಗಾರಿಕೆ, ಮೇಕೆ ಸಾಕಾಣಿಕೆ, ಕೃಷಿ ಹೊಂಡ ಮತ್ತು ಶೌಚಾಲಯ ನಿರ್ಮಾಣ ಮುಂತಾದವುಗಳ ಮೂಲಕ ಲಾಭಾನ್ವಿತರಾಗಿದ್ದಾರೆ. ಅಲ್ಲದೆ ತಮಿಳುನಾಡಿನ 11000 ಹಳ್ಳಿಗಳಲ್ಲಿ ಹೊಸತನದಿಂದ ಕೂಡಿದ ಘನತ್ಯಾಜ್ಯ ವಿಲೇವಾರಿ ಉಪಕ್ರಮಗಳು ಹಾಗೂ ತೆಲಂಗಾಣಾ, ಆಂಧ್ರಪ್ರದೇಶ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಲ್ಲಿ ದ್ರವರೂಪದ ತ್ಯಾಜ್ಯ ವಿಲೇವಾರಿಗಾಗಿ 4 ಲಕ್ಷ 'ಮ್ಯಾಜಿಕ್ ಪಿಟ್' ಗಳನ್ನು ಕೂಡ ನಿರ್ಮಿಸಲಾಗಿದೆ.

ಕೌಶಲ್ಯರಹಿತ ಕಾರ್ಮಿಕರ ಕೌಶಲ್ಯವಿಕಾಸದ ಉಪಕ್ರಮವಾಗಿ 29704 ಕಾರ್ಮಿಕರನ್ನು ಗ್ರಾಮೀಣ ಸ್ವಉದ್ಯೋಗ ತರಬೇತಿ ನೀಡಲಾಯಿತು. 3812 ಜನರಿಗೆ ತಾಂತ್ರಿಕ ತರಬೇತಿ ನೀಡಿ ಅವರನ್ನು 'ಟೆಕ್ನೀಷಿಯನ್' ಮಾಡಲಾಯಿತು. ದೀನ್‌ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಅಡಿಯಲ್ಲಿ ಹಾಗೂ ಪ್ರಧಾನಮಂತ್ರಿ ಆವಾಸ ಯೋಜನೆ ಅಡಿಯಲ್ಲಿ 3000 ಕ್ಕೂ ಹೆಚ್ಚು ಜನರಿಗೆ ವೇತನ ಆಧಾರಿತ ಉದ್ಯೋಗ ದೊರಕಿಸಲಾಗಿದೆ.

## ಪ್ರಧಾನಮಂತ್ರಿ ಆವಾಸ ಯೋಜನಾ – ಗ್ರಾಮೀಣ

**ಕೇವಲ ಮನೆಯಲ್ಲ/ ಸುಸಜ್ಜಿತ ಮನೆ.**

ಮಾನ್ಯ ಪ್ರಧಾನಮಂತ್ರಿಗಳು ಗ್ರಾಮೀಣ ಭಾಗದ ವಸತಿರಹಿತ ಜನರಿಗಾಗಿ ನವೆಂಬರ್ 20, 2016 ರಂದು ಪ್ರಧಾನಮಂತ್ರಿ ಆವಾಸ ಯೋಜನೆಗೆ ಚಾಲನೆ ನೀಡಿದರು.



ಫಲಾನುಭವಿ ಕುಟುಂಬಗಳ ಅಪೇಕ್ಷೆ ಹಾಗೂ ಅವಶ್ಯಕತೆಗಳನ್ನು ಗಮನದಲ್ಲಿರಿಸಿ ಈ ಗ್ರಾಮೀಣ ವಸತಿ ಯೋಜನೆಯನ್ನು ರೂಪಿಸಲಾಗಿದೆ. ಅಡುಗೆ ಕೋಣೆ, ಎಲ್.ಪಿ.ಜಿ. ಗ್ಯಾಸ್ ಸಂಪರ್ಕ, ಶೌಚಾಲಯ, ವಿದ್ಯುತ್ ಸಂಪರ್ಕ, ನೀರಿನ ಸಂಪರ್ಕ ಮುಂತಾದ ಸೌಲಭ್ಯಗಳನ್ನು ಒಳಗೊಂಡ ಈ ಮನೆಗಳು ಫಲಾನುಭವಿಗಳೇ ಅವಶ್ಯಕತೆ ತಕ್ಕಂತೆ ವಿನ್ಯಾಸ ಮಾಡಬಹುದಾಗಿದೆ. 'ಪ್ರತಿ ಘಟಕ ವೆಚ್ಚ' ಹೆಚ್ಚಿರುವ ಕಾರಣ ಸ್ಥಳೀಯ ವಸ್ತುಗಳನ್ನು ಹಾಗೂ ಸ್ಥಳೀಯ ನಿರ್ಮಾಣ ವಿನ್ಯಾಸಗಳನ್ನು ಪ್ರಯೋಗಿಸಲು ಕೂಡ ಅವಕಾಶ ಮಾಡಿಕೊಡಲಾಗಿದೆ. ಗುಣಮಟ್ಟದ ನಿರ್ಮಾಣಕ್ಕೆ ಬೇಕಾಗುವ ಕೌಶಲ್ಯ ವಿಕಾಸಕ್ಕಾಗಿ ಸ್ಥಳೀಯ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ತರಬೇತಿ ಕೂಡಾ ನೀಡಲಾಗುತ್ತಿದೆ.

2016–17 ನೇ ಸಾಲಿನಲ್ಲಿ ಪಿಎಂಎಜಿವೈ ಯೋಜನೆಗೆ ಚಾಲನೆ ನೀಡುವ ಮುನ್ನ ಬಾಹ್ಯಾಕಾಶ ಮತ್ತು ಮಾಹಿತಿ ತಂತ್ರಜ್ಞಾನದ ಬಳಕೆ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು, ನೇರ ಹಣ ವರ್ಗಾವಣೆ ವೇದಿಕೆ ಕಲ್ಪಿಸುವುದು, ಕಟ್ಟಡ ನಿರ್ಮಾಣ ಕಾರ್ಮಿಕರ ಕೌಶಲ್ಯ ತರಬೇತಿ ನೀಡುವುದು ಹಾಗೂ ಮನೆಗಳ ವಿನ್ಯಾಸ ಅಂತಿಮಗೊಳಿಸಲು ವಿಶೇಷ ಒತ್ತು ನೀಡಲಾಗಿತ್ತು. ಅಲ್ಲದೇ ಕಳೆದ 1–4 ವರ್ಷಗಳಿಂದ ಇಂದಿರಾ ಆವಾಸ ಯೋಜನೆ ಅಡಿಯಲ್ಲಿ ಅಪೂರ್ಣವಾಗಿದ್ದ 34 ಲಕ್ಷ ಮನೆಗಳನ್ನು ಪೂರ್ಣಗೊಳಿಸುವುದಕ್ಕೂ ವಿಶೇಷ ಒತ್ತು ನೀಡಲಾಗಿತ್ತು.

ಆಡಳಿತ ಸುಧಾರಣೆ ಕ್ರಮವಾಗಿ ಗ್ರಾಮೀಣ ವಸತಿ ಯೋಜನೆಗಾಗಿ ರಾಜ್ಯ ಮಟ್ಟದಲ್ಲಿ ಒಂದೇ ಖಾತೆ ತೆರೆಯಲಾಗಿದೆ. ಈ ಖಾತೆಯ ಮೂಲಕ ಹಣ ಫಲಾನುಭವಿಗಳ ಖಾತೆಗೆ ಆವಾಸ್–ಸಾಫ್ಟ್ ಮೂಲಕ ನೇರವಾಗಿ ವರ್ಗಾವಣೆಗೊಳ್ಳಲಿದೆ. ಈ ಮುನ್ನ ಗ್ರಾಮೀಣ ವಸತಿ ಯೋಜನೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಅಂದಾಜು 2 ರಿಂದ 20 ರಷ್ಟು ಬ್ಯಾಂಕ್ ಖಾತೆಗಳನ್ನು ಹೊಂದಿರಲಾಗುತ್ತಿತ್ತು.

ಆದ್ಯತೆ ಹಾಗೂ ಪಾರದರ್ಶಕ ಆಯ್ಕೆ ಪ್ರಕ್ರಿಯೆ ಮೂಲಕ 2022 ಇಸ್ವಿವರೆಗಿನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಮೂರು ಹಂತದ ಪರಿಷ್ಕರಣೆ ವ್ಯವಸ್ಥೆ ಮೂಲಕ ಅರ್ಹ ವಸತಿಹೀನ ಬಡವರು ಹಾಗೂ ಶಿಥಿಲಗೊಂಡ ಮನೆಗಳಲ್ಲಿ ವಾಸಿಸುತ್ತಿರುವ ಬಡವರು ಆಯ್ಕೆಯಾಗುವಂತೆ ನೋಡಿಕೊಳ್ಳಲಾಗಿದೆ. ದುರ್ಬಲ ವರ್ಗಕ್ಕೆ ಸೇರಿದವರು ಹಾಗೂ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಯೋಜನೆಯ ಫಲಾನುಭವಿಗಳಾಗಿದ್ದಾರೆ. ವಿಪತ್ತು ನಿರ್ವಹಣೆ ಮತ್ತು ಚೇತರಿಕೆ ಗುಣಗಳ ವಿನ್ಯಾಸವುಳ್ಳ ಮನೆಗಳ ಮಾದರಿಗಳನ್ನು ಅಂತಿಮಗೊಳಿಸಲಾಗಿದ್ದು ರಾಜ್ಯ ಸರ್ಕಾರಗಳು ಅವುಗಳನ್ನು ಉಪಯೋಗಿಸುತ್ತಿವೆ.

ಮಧ್ಯಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ, ಛತ್ತೀಸ್‌ಗಢ್, ಕರ್ನಾಟಕ, ಅಸ್ಸಾಂ ಮುಂತಾದ ರಾಜ್ಯಗಳು ಈ ಯೋಜನೆಯ ಅನುಷ್ಠಾನದಲ್ಲಿ ಮುಂದಿವೆ. ಅಂತೆಯೇ ಬಿಹಾರ, ಪಶ್ಚಿಮಬಂಗಾಲ, ಉತ್ತರಪ್ರದೇಶ, ಮಧ್ಯಪ್ರದೇಶ, ಅಸ್ಸಾಂ, ಜಾರ್ಖಂಡ, ರಾಜಸ್ಥಾನ ಮತ್ತು ಮಹಾರಾಷ್ಟ್ರ ರಾಜ್ಯಗಳು ಇಂದಿರಾ ಆವಾಸ ಯೋಜನೆಯಲ್ಲಿ ಅಪೂರ್ಣಗೊಂಡಿದ್ದ ಮನೆಗಳ ಪೂರ್ಣಗೊಳಿಸುವಿಕೆಯಲ್ಲಿ ಮುಂದಿವೆ.

ಗ್ರಾಮೀಣಾಭಿವೃದ್ಧಿ ಇಲಾಖೆಯು 2017–18ರ ಒಳಗಾಗಿ 51 ಲಕ್ಷ ಮನೆಗಳನ್ನು ನಿರ್ಮಾಣ ಮಾಡುವ ವಿಶ್ವಾಸ ಹೊಂದಿದೆ. ಅಲ್ಲದೇ 2017–18 ನೇ ಸಾಲಿಗಾಗಿ ಹೆಚ್ಚುವರಿಯಾಗಿ 33 ಲಕ್ಷ ಮನೆಗಳನ್ನು ಸದ್ಯದಲ್ಲಿಯೇ ಮಂಜೂರು ಮಾಡಲಾಗುವುದು. 2018–19 ನೇ ಸಾಲಿನಲ್ಲಿ ಕೂಡ 51 ಲಕ್ಷ ಮನೆಗಳನ್ನು ಪೂರ್ಣಗೊಳಿಸಲು ಪ್ರಸ್ತಾಪಿಸಲಾಗಿದೆ. ಹೀಗೆ ಒಟ್ಟು 2016–19 ರ ಅವಧಿಯ ಒಳಗಾಗಿ 1.35 ಕೋಟಿ ಮನೆಗಳನ್ನು ಪೂರ್ಣಗೊಳಿಸುವ ಮೂಲಕ 2022ನೇ ಇಸ್ವಿ ಒಳಗಾಗಿ ಎಲ್ಲರಿಗೂ ವಸತಿ ಒದಗಿಸುವ ಮಾರ್ಗ ಪ್ರಶಸ್ತವಾಗಲಿದೆ.

**ಡಿಎವೈ–ಎನ್ ಆರ್ ಎಲ್ ಎಮ್**

ದೀನ್‌ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಸ್ವಸಹಾಯ ಸಂಘಗಳಲ್ಲಿ ಸದಸ್ಯರಾಗಿರುವ ಮಹಿಳೆಯರ 3.6 ಕುಟುಂಬಗಳ ಜೀವನ ಹಾಗೂ ಜೀವನೋಪಾಯಗಳಲ್ಲಿ ಸಾಕಷ್ಟು ಪರಿವರ್ತನೆ ತಂದಿದೆ. ಸ್ವಸಹಾಯ ಸಂಘಗಳು, ಗ್ರಾಮೀಣ ಸಂಸ್ಥೆಗಳು, ಮಂಡಲ ಮಟ್ಟದ ಒಕ್ಕೂಟಗಳಲ್ಲಿನ ಮಹಿಳಾ ಸಮೂಹವು ಗಮನಾರ್ಹವಾದ ಸಾಮಾಜಿಕ ಬಂಡವಾಳ ಸೃಜಿಸಿದ ಕಾರಣ ಲಿಂಗ ತಾರತಮ್ಯ ಕುಸಿಯುತ್ತಿದ್ದು ಮಹಿಳೆಯರು ಕೂಡ ಗ್ರಾಮ ಸಭೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಭಾಗವಹಿಸುವಿಕೆಗೆ ಹಾಗೂ ಅಲ್ಲಿನ ಸೇವೆಗಳ ಪ್ರಯೋಜನೆ ಪಡೆಯಲು ಮುಕ್ತ ಅವಕಾಶ ಒದಗಿಸಿದೆ. ಈ ಕಾರ್ಯಕ್ರಮವು ಸಮುದಾಯ ಸಂಪನ್ಮೂಲ ವ್ಯಕ್ತಿಯ ಮೂಲಕ ಕೌಶಲ್ಯ ವಿಕಾಸ ಹಾಗೂ ಸಾಮರ್ಥ್ಯವನ್ನು ಬೆಳೆಸಿಕೊಂಡ ಮಹಿಳೆಯರಿಗೆ ತಮ್ಮ ಆರ್ಥಿಕ ಚಟುವಟಿಕೆಗಳಿಗೆ ಬ್ಯಾಂಕಗಳ ಮೂಲಕ ಸಾಲ ಸೌಲಭ್ಯ ಪಡೆಯಲು ವಿಶ್ವಾಸವನ್ನು ತುಂಬಿದೆ. ಇಂದು 1.50 ಲಕ್ಷ ಮಹಿಳಾ ಸಿ.ಆರ್.ಪಿ.ಗಳು ಬಡತನದ ಸಮಸ್ಯೆಯಿಂದ ಹೊರಬಂದು ಗ್ರಾಮೀಣ ಸುಸ್ಥಿರ ಕೃಷಿ ಪ್ರವರ್ತಕರಾಗಿ, ಬ್ಯಾಂಕಿಂಗ್ ಸೇವೆ ಒದಗಿಸುತ್ತ, ಪಶು ವೈದ್ಯಕೀಯ ಸೇವೆಗಾಗಿ ಸಹಾಯಕರನ್ನು ಬೆಳೆಸುತ್ತ, ಸ್ವಸಹಾಯ ಸಂಘಗಳಿಗೆ ಲೆಕ್ಕಪತ್ರ ನಿರ್ವಹಣೆಯಲ್ಲಿ ಸಹಾಯ ಒದಗಿಸುತ್ತ ಹಾಗೂ ಬಹುಮುಖ್ಯವಾಗಿ ಹಳ್ಳಿಗಳ ಸಾಮಾಜಿಕ ಪರಿವರ್ತನೆಯ ರಾಯಭಾರಿಗಳಾಗಿದ್ದಾರೆ.

2011ರಲ್ಲಿ ಈ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರು 1.06 ಲಕ್ಷ ಕೋಟಿ ರೂಪಾಯಿಗಳಷ್ಟು ಸಾಲ ಸೌಲಭ್ಯ ಪಡೆದಿದ್ದಾರೆ. ಸ್ವಸಹಾಯ ಸಂಘಗಳಿಗೆ 2014–15 ನೇ ಸಾಲಿನಲ್ಲಿ 20,000 ಕೋಟಿ ರೂಪಾಯಿಯಷ್ಟು ಇದ್ದ ಬ್ಯಾಂಕ್ ಸಾಲ ಸೌಲಭ್ಯ, 2015–



16 ರಲ್ಲಿ 30,000 ಕೋಟಿ ರೂಪಾಯಿಗೆ ಏರಿಕೆಯಾಯಿತು. ಫೆಬ್ರವರಿ 2017 ರಲ್ಲಿ ಇದ್ದ ಅಂಕಿ ಅಂಶಗಳ ಪ್ರಕಾರ ಈಗಾಗಲೇ 29000 ಕೋಟಿ ರೂಪಾಯಿಯಷ್ಟು ಸಾಲ ವಿತರಿಸಲಾಗಿದ್ದು ಇದು 2016–17 ಆರ್ಥಿಕ ವರ್ಷಕ್ಕೆ 35000 ದಿಂದ 38000 ಕೋಟಿ ರೂಪಾಯಿಗಳಷ್ಟು ಆಗಲಿದೆ ಎಂದು ಅಂದಾಜಿಸಲಾಗಿದೆ. 2016–17 ರ ಅಂಕಿ ಅಂಶಗಳ ಪ್ರಕಾರ ಅಸ್ಸಾಂ, ರಾಜಸ್ಥಾನ, ಪಶ್ಚಿಮ ಬಂಗಾಲ ಬಿಹಾರ, ಒಡಿಶಾ ರಾಜ್ಯಗಳಲ್ಲಿ ಬ್ಯಾಂಕ್ ಆಧಾರಿತ ಸಾಲದ ಪ್ರಮಾಣ ಗಣನೀಯವಾಗಿ ಹೆಚ್ಚಿದೆ. ಸ್ವಸಹಾಯ ಗುಂಪುಗಳು ಬಡವರ ಪಾಲಿನ ಸಮರ್ಥ ಸಬಲ ಸಂಸ್ಥೆಗಳಾದಂತೆಲ್ಲ ಬ್ಯಾಂಕ್ ಸಂಪರ್ಕಿತ ಆರ್ಥಿಕತೆ ಉತ್ತರ ಭಾರತ ಸೇರಿದಂತೆ ದೇಶಾದ್ಯಂತ ಸಮಾನವಾಗಿ ಹರಡಿದೆ. ದಕ್ಷಿಣ ಭಾರತದಲ್ಲಿ ಇವು ಈಗಾಗಲೇ ಸಮರ್ಥವಾಗಿ ಸಬಲವಾಗಿವೆ.

ಡಿಎವೈ–ಎನ್ ಆರ್ ಎಲ್ ಎಮ್ ಯೋಜನೆಯಲ್ಲಿ ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ ಅಡಿಯಲ್ಲಿ ಸುಸ್ಥಿರ ಕೃಷಿಯನ್ನು ಪ್ರೋತ್ಸಾಹಿಸಲು ಸುಮಾರು 30 ಲಕ್ಷ ಮಹಿಳಾ ಕೃಷಿಕರಿಗೆ ಉತ್ತೇಜನೆ ನೀಡಲಾಗಿದೆ. ಮಹಿಳಾ ಸ್ವಸಹಾಯ ಸಂಘಗಳ ಮುಂದಾಳತ್ವದಲ್ಲಿ ಕೃಷಿ ಪರಿಕರ, ಪವರ್ ಟಿಲ್ಲರ ಮುಂತಾದವುಗಳನ್ನು ಬಾಡಿಗೆಗೆ ನೀಡುವ ಸೇವಾ ಕೇಂದ್ರಗಳು ಕೆಲ ರಾಜ್ಯಗಳಲ್ಲಿ ಪ್ರಾರಂಭವಾಗಿವೆ. ವರ್ಮಿ ಕಾಂಪೋಸ್ಟ್ ಗುಂಡಿಗಳು, ಕೀಟನಾಶಕ ಮುಕ್ತ ಕೃಷಿ, ಮಳೆ ಆಧಾರಿತ ಕೃಷಿ ಪ್ರದೇಶಗಳಲ್ಲಿ ಆಹಾರ, ಮೇವು, ಹಣ್ಣು, ಕಾಡು ಮುಂತಾದ ಬಹುಬೆಳೆಗೆ ಪ್ರೋತ್ಸಾಹ ಸೇರಿದಂತೆ ಅನೇಕ ಉಪಕ್ರಮಗಳು ಮಹಿಳಾ ಕೃಷಿಕರ ಸ್ವಸಹಾಯ ಸಂಘಗಳ ಮೂಲಕ ಪ್ರಾರಂಭವಾಗಿವೆ.

ಡಿಎವೈ– ಎನ್ ಆರ್ ಎಲ್ ಎಮ್ ಯೋಜನೆಯು ಈಗಾಗಲೇ ದೇಶದ 1/3 ಗ್ರಾಮ ಪಂಚಾಯತ್‌ಗಳಿಗೆ ತಲುಪಿದ್ದು ಇದರ ಸಬಲೀಕರಣ ಹಾಗೂ ವಿಸ್ತಾರಕ್ಕೆ ನಿರಂತರ ಪ್ರಯತ್ನಗಳು ನಡೆಯುತ್ತಿವೆ. 2017–18 ನೇ ಸಾಲಿಗಾಗಿ 4.5 ಲಕ್ಷ ಹೊಸ

ಸ್ವಸಹಾಯ ಸಂಘಗಳ ಮೂಲಕ 52 ಲಕ್ಷ ಕುಟುಂಬಗಳನ್ನು ಈ ಯೋಜನೆಗೆ ಸೇರ್ಪಡೆ ಮಾಡಲಾಗಿದೆ. 84,000 ಕಿರು ವ್ಯಾಪಾರಿ ಸಂಸ್ಥೆಗಳನ್ನು ಪ್ರಾರಂಭಿಸುವ ಉದ್ದೇಶದಿಂದ 17 ರಾಜ್ಯಗಳಲ್ಲಿ ಹರಡಿರುವ 47 ಬ್ಲಾಕ್‌ಗಳಲ್ಲಿ ಸ್ಟಾರ್ಟಪ್ ಗ್ರಾಮೀಣ ಉದ್ಯಮಶೀಲತಾ ಕಾರ್ಯಕ್ರಮ (ಎಸ್.ವಿ.ಇ.ಪಿ.) ಪ್ರಾರಂಭಿಸಲಾಗಿದೆ. ತಮಿಳುನಾಡಿನ 11,000 ಹಳ್ಳಿಗಳಲ್ಲಿ ಅಂದರೆ ಆ ರಾಜ್ಯದ ಒಟ್ಟು ಹಳ್ಳಿಗಳ ಪೈಕಿ 90% ಹಳ್ಳಿಗಳಲ್ಲಿ ಸ್ಥಳೀಯ ಸ್ವಸಹಾಯ ಸಂಘಗಳ ಮೂಲಕ



ಘನತ್ಯಾಜ್ಯ ವಿಲೇವಾರಿ ಉಪಕ್ರಮವನ್ನು ಕೈಗೆತ್ತಿಕೊಳ್ಳಲಾಯಿತು. ಈ ಉಪಕ್ರಮದ ಯಶಸ್ಸಿನ ಹಿನ್ನೆಲೆಯಲ್ಲಿ ಇದನ್ನು ಮತ್ತೆ 6 ರಾಜ್ಯಗಳಲ್ಲಿ ಪ್ರಾರಂಭಿಸಲಾಯಿತು. ಡಿಎವೈ– ಎನ್ ಆರ್ ಎಲ್ ಎಮ್ ಯೋಜನೆಯಲ್ಲಿನ ಯಶಸ್ವಿ ವ್ಯಾಪಾರ ಮಾದರಿಗಳ ಸಂಕಲನವನ್ನು ಪ್ರಕಾಶನ ಮಾಡಲಾಗಿದ್ದು, ಪ್ರಶಸ್ತಿ ಹಾಗೂ ಮಾನ್ಯತೆ ಪಡೆದ ಸ್ವಸಹಾಯ ಸಂಘಗಳ ಉತ್ತಮ ಅಂಶಗಳ ಆಧಾರದಲ್ಲಿ 'ಉತ್ತಮ ಪದ್ಧತಿಗಳು' ಎಂಬ ಸಂಪುಟವನ್ನು ಕೂಡ ಸಿದ್ಧಪಡಿಸಲಾಗಿದೆ.

ವಿಭಿನ್ನ ಜೀವನೋಪಾಯಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಡಿಎವೈ– ಎನ್ ಆರ್ ಎಲ್ ಎಮ್ ಯೋಜನೆಯಲ್ಲಿ ದೀನ್‌ದಯಾಳ್ ಗ್ರಾಮೀಣ ಕೌಶಲ್ಯ ಯೋಜನೆ ಹಾಗೂ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಕೇಂದ್ರಗಳ ಮೂಲಕ ಕೌಶಲ್ಯ ಅಭಿವೃದ್ಧಿ ಮೂಲಕ ವೇತನ ಆಧಾರಿತ ಅಥವಾ ಸ್ವ ಉದ್ಯೋಗಕ್ಕೆ ವಿಶೇಷ ಪ್ರೋತ್ಸಾಹ ನೀಡಲಾಗಿದೆ. 2016–17 ನೇ ಸಾಲಿನಲ್ಲಿ ದೀನ್‌ದಯಾಳ್ ಗ್ರಾಮೀಣ ಕೌಶಲ್ಯ ಯೋಜನೆ ಅಡಿಯಲ್ಲಿ 1.60 ಲಕ್ಷ ಯುವಕರಿಗೆ ತರಬೇತಿ ನೀಡಲಾಗಿದ್ದು 79400 ಯುವಕರಿಗೆ ಉದ್ಯೋಗ ದೊರಕಿಸಲಾಗಿದೆ. ಹಾಗೆಯೇ 585 ಗ್ರಾಮೀಣ ಸ್ವ ಉದ್ಯೋಗ ತರಬೇತಿ ಕೇಂದ್ರಗಳಲ್ಲಿ 4 ಲಕ್ಷ ಯುವಕರನ್ನು ತರಬೇತಿಗೊಳಿಸಲಾಗಿದೆ. ದೀನ್‌ದಯಾಳ್ ಗ್ರಾಮೀಣ ಕೌಶಲ್ಯ ಯೋಜನೆಯಲ್ಲಿ ಶ್ರೇಷ್ಠ ಗುಣಮಟ್ಟದ ತರಬೇತಿ ಹಾಗೂ ನಿಶ್ಚಿತ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಕೆಫೆ ಕಾಫಿ ಡೇ, ಅಪೋಲೋ ಮೆಡಿ ಸ್ಕಿಲ್ಸ್, ಟೀಂ ಲೀಸ್ ಮುಂತಾದ 12 ಶ್ರೇಷ್ಠ ಉದ್ಯೋಗದಾತರನ್ನು ಆಯ್ಕೆ ಮಾಡಲಾಗಿದೆ. ಚಾಲಕರಿಗೆ ತರಬೇತಿ ನೀಡುವ ಕಾರ್ಯಕ್ರಮಗಳು ಕೂಡ ಹೆಚ್ಚಿನ ಸಂಖ್ಯೆಯ ಗ್ರಾಮೀಣ ಸ್ವಉದ್ಯೋಗ ತರಬೇತಿ ಕೇಂದ್ರಗಳಲ್ಲಿ ಪ್ರಾರಂಭವಾಗಿದೆ.

ಡಿಎವೈ – ಎನ್ ಆರ್ ಎಲ್ ಎಮ್ ಯೋಜನೆಯ ಮೊದಲ ರಾಷ್ಟ್ರೀಯ ಮೌಲ್ಯಮಾಪನ ಇತ್ತೀಚೆಗೆ ಮುಕ್ತಾಯಗೊಂಡಿದ್ದು ಗುಜರಾತ್‌ನ ಆನಂದನಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜಮೆಂಟ್ ಈ ಮೌಲ್ಯಮಾಪನವನ್ನು ಕೈಗೊಂಡಿದೆ. ಹಳ್ಳಿಗಳ ಮಟ್ಟದಲ್ಲಿ ಮಹಿಳಾ ಗುಂಪುಗಳು ಸೃಜಿಸಿರುವ ಸಾಮಾಜಿಕ ಬಂಡವಾಳವನ್ನು ವರದಿಯ ಕರಡು ಪ್ರತಿಯಲ್ಲಿ ಗುರುತಿಸಲಾಗಿದೆ. ಅಲ್ಲದೇ ಎನ್.ಆರ್.ಎಲ್.ಎಮ್ ನೀತಿಯ ಪರಿಣಾಮ ಗ್ರಾಮೀಣ ಭಾಗದ ಬಡವರು ತಮ್ಮನ್ನು ಕೇವಲ ವಾರದ ಸಭೆಗಳಿಗೆ ಸೀಮಿತಗೊಳಿಸಿಕೊಳ್ಳದೇ, ಉತ್ಪಾದನೆ, ಬೇಡಿಕೆ ಹಾಗೂ ಸಾಮಾಜಿಕ ವಿಷಯಗಳಲ್ಲಿಯೂ ಅಭಿವ್ಯಕ್ತಿ ಕಾಣಿಸುತ್ತಿದೆ ಎಂದು ಮೌಲ್ಯಮಾಪನದಲ್ಲಿ ಉಲ್ಲೇಖಿಸಲಾಗಿದೆ. ಜೀವನೋಪಾಯಗಳಲ್ಲಿ ದೊಡ್ಡ ಪ್ರಮಾಣದ ವೈವಿಧ್ಯತೆ ಹಾಗೂ ವಿಕಾಸ, ಗ್ರಾಮೀಣ ಜನರ ಬದುಕು ಸುಧಾರಣೆಗೆ ಹಾಗೂ 'ಮಿಷನ್ ಅಂತ್ಯೋದಯ'ದ ಉದ್ದೇಶವಾಗಿರುವ ಬಡತನ ಮುಕ್ತ ಗ್ರಾಮದ ಉದ್ದೇಶ ಸಾಧಿಸಲು ಇರುವ ಮುಂದಿನ ಏಕೈಕ ಮಾರ್ಗವಾಗಿದೆ.

ಬಡತನದ ವಿವಿಧ ಆಯಾಮಗಳನ್ನು ನಿರ್ವಹಿಸಲು ಸುಧಾರಿತ ಆಡಳಿತ ವ್ಯವಸ್ಥೆ ಅತ್ಯಂತ ಅವಶ್ಯಕ. ಇದನ್ನು ಸಾಧಿಸಲು ಸೌಲಭ್ಯ ವಂಚಿತ ಕುಟುಂಬಗಳ ಪ್ರಗತಿಯನ್ನು 'ಸಾಮಾಜಿಕ ಆರ್ಥಿಕ ಜಾತಿವಾರು ಗಣತಿ'ಯ ಮಾಪನದ ಆಧಾರದಲ್ಲಿ ಸಾಮಾಜಿಕ ನೊಂದಾವಣೆ ಪಟ್ಟಿಯ ಮೂಲಕ ಗಮನಿಸಲಾಗುವುದು. ಹಾಗೆಯೇ ಪಂಚಾಯತ್ ದರ್ಪಣದಲ್ಲಿ ಗುರುತಿಸಲಾಗಿರುವ ಬಡತನದ ವಿವಿಧ ಆಯಾಮಗಳ 35 ಸೂಚಕಗಳನ್ನು ಬಳಸಿ ಇಲಾಖೆಯು ಕುಟುಂಬಗಳ ಬಡತನ



ನಿವಾರಣೆಯಲ್ಲಿ ಗ್ರಾಮ ಪಂಚಾಯತ್‌ಗಳ ಪ್ರಗತಿಯ ಮೇಲ್ವಿಚಾರಣೆ ಮಾಡಲಿದೆ. ಉತ್ತಮ ಆಡಳಿತ ವ್ಯವಸ್ಥೆಯ ಒಟ್ಟು ಚೌಕಟ್ಟಿನಲ್ಲಿ, ಇಲಾಖೆಯು 'ಆಧಾರ' ಅನ್ನು ಒಪ್ಪಿಗೆಯ ಮೇರೆಗೆ ಗುರುತನ್ನು ಸ್ಥಾಪಿಸುವ ಸಾಧನವನ್ನಾಗಿ ಬಳಸಲಿದೆ. ಗರಿಷ್ಠ ಪರಿಣಾಮ ಸಾಧಿಸಲು ಗ್ರಾಮೀಣಾಭಿವೃದ್ಧಿ ಸಚಿವಾಲಯವು ಬಡತನದ ವಿವಿಧ ಆಯಾಮಗಳನ್ನು ಏಕಕಾಲದಲ್ಲಿಯೇ ನಿರ್ವಹಿಸುತ್ತ 50,000 ಬಡತನ ಮುಕ್ತ ಗ್ರಾಮ ಪಂಚಾಯತ್‌ಗಳು/ 5000 ಗ್ರಾಮೀಣ ಸಂಕುಲಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ. ಸಂಸದರ ಆದರ್ಶ ಗ್ರಾಮ ಯೋಜನೆಯಲ್ಲಿನ ವಿಧಾನವನ್ನು ಬಳಸಿ, ಸಚಿವಾಲಯವು ಗ್ರಾಮ ಪಂಚಾಯತ್‌ನಲ್ಲಿನ ಪ್ರಗತಿಯ ಸ್ಥಿತಿಗತಿಗಳನ್ನು ಅರಿಯಲು 36 ಸೂಚಕಗಳನ್ನು ಅಭಿವೃದ್ಧಿಪಡಿಸಿದೆ. ಮೂಲಭೂತ ಸೌಕರ್ಯ, ಸಂಪರ್ಕ ವ್ಯವಸ್ಥೆ, ಸಾಮಾಜಿಕ ಅಭಿವೃದ್ಧಿ, ಬ್ಯಾಂಕಿಂಗ್ ಹಾಗೂ ಇತರ ಸೇವೆಗಳ ಲಭ್ಯತೆ ಮತ್ತು ಅವಕಾಶ, ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ, ಆರೋಗ್ಯ, ಶಿಕ್ಷಣ, ಬರ ಪರಿಹಾರ, ಪೌಷ್ಟಿಕತೆ ಇತ್ಯಾದಿಗಳು ಈ 36 ಸೂಚಕಗಳಡಿ ಮಾಪಕವಾಗಲಿವೆ. ಪ್ರಗತಿ ಕಾರ್ಯವನ್ನು ತಳಮಟ್ಟದಿಂದಲೇ ಉಸ್ತುವಾರಿ ನಡೆಸಲು ಬಡತನ ಮುಕ್ತ ಗ್ರಾಮ ಪಂಚಾಯತ್‌ಗಳಿಗಾಗಿ ಸಂಯುಕ್ತ ಸೂಚ್ಯಾಂಕ ಸಿದ್ಧಪಡಿಸಲು ಸಚಿವಾಲಯವು ಉದ್ದೇಶಿಸಿದೆ. ಈ ಪ್ರಕ್ರಿಯೆ ಮೂಲಕ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಎಲ್ಲ 50,000 ಗ್ರಾಮ ಪಂಚಾಯತ್‌ಗಳು/ 5000 ಗ್ರಾಮೀಣ ಸಂಕುಲಗಳಲ್ಲಿನ ಎಲ್ಲ ಕುಟುಂಬಗಳಿಗೆ ಕನಿಷ್ಠ ಮೂಲಭೂತ ಸೌಕರ್ಯ ಮತ್ತು ಸೌಲಭ್ಯಯುಕ್ತ ಸುಸ್ಥಿರ ಜೀವನೋಪಾಯನ್ನು ಖಚಿತಪಡಿಸಲಿದೆ. ಜಿಲ್ಲಾ ಮಟ್ಟದಲ್ಲಿರುವ 'ದಿಶಾ' ಸಮಿತಿಯು ಬಡತನ ಮುಕ್ತ ಗ್ರಾಮ ಪಂಚಾಯತ್‌ಗಳಲ್ಲಿನ ಬಡತನ ನಿವಾರಣೆ ಕಾರ್ಯದ ಪ್ರಗತಿ ಪರಿಶೀಲನೆ ನಡೆಸಲಿದೆ. ❑

# ಸಾರ್ವಜನಿಕ ಹಣಕಾಸು; ಅಂಕೀಕೃತ ಆವಿಷ್ಕಾರ

* ಲೇಖಾ ಚಕ್ರವರ್ತಿ
** ಸಮೀಕ್ಷಾ ಅಗರ್‌ವಾಲ್



**ಅಂಕೀಕರಣದಿಂದಾಗಿ ಭಾರತದಲ್ಲಿ ಹಲವು ಕಲ್ಯಾಣ ಕಾರ್ಯಕ್ರಮಗಳ ಫಲಾನುಭವವನ್ನು ಹಲವು ಮಂದಿಗೆ ತಲುಪಿಸಲು ಸಾಧ್ಯವಾಗಿದೆ. ಇವುಗಳಲ್ಲಿ ಮನರೇಗಾನಲ್ಲಿ 41%, ಎಲ್‌ಪಿಜಿ ಸಬ್ಸಿಡಿ ಯೋಜನೆ ಪಹಲ್‌ನಲ್ಲಿ 37%, ಎನ್‌ಎಸ್‌ಎಪಿನಲ್ಲಿ 14%, ರಾಷ್ಟ್ರೀಯ ವಿದ್ಯಾರ್ಥಿವೇತನ ಯೋಜನೆಯಲ್ಲಿ 7%ನಷ್ಟು ಯಶಸ್ವಿಯಾಗಿದೆ ಎಂದು 2015–16ರ ಭಾರತದ ಆರ್ಥಿಕ ಸಮೀಕ್ಷೆ ಹೇಳುತ್ತದೆ.**

ಭಾರತದಲ್ಲಿ ಇತ್ತೀಚಿನ ನೋಟು ಅಮಾನ್ಯದ ನಂತರದ ಅವಧಿಯಲ್ಲಿ ಆರ್ಥಿಕ ನೀತಿಗಳನ್ನು ರೂಪಿಸುವಾಗ ಸಮಗ್ರ ನೀತಿ ರೂಪಕರ ಮುಖ್ಯವಾದ ಕಾರ್ಯಸೂಚಿ ಎಂದರೆ ಡಿಜಿಟಲೀಕರಣ–ಅಂಕೀಕರಣದ ಅನ್ವೇಷಣೆಯನ್ನು ಒಳಗೊಳ್ಳುವುದು. ಇತ್ತೀಚಿನ ಆರ್ಥಿಕ ಸಮೀಕ್ಷೆಯ ಪ್ರಕಾರ ಭಾರತವು ಸಾರ್ವಜನಿಕ ಹಣಕಾಸು ವಲಯದಲ್ಲಿ ಹಣಕಾಸು ಸೇವೆಗಳ ಅಂಕೀಕರಣದ ಪ್ರಯೋಗವನ್ನು ಮಾಡಿದೆ. ಆ ಸಮೀಕ್ಷೆಯು ಹೇಳುವಂತೆ ಸಾರ್ವಜನಿಕ ಹಣಕಾಸು ವಲಯದಲ್ಲಿ ಡಿಜಿಟಲೀಕರಣ ಅಳವಡಿಕೆಯಿಂದಾಗಿ ಸರ್ಕಾರವು ಫಲಾನುಭವಿಗಳನ್ನುಗುರುತಿಸಲು ನೆರವಾಗಿದೆ. ಅದರೊಂದಿಗೆ ಗುರುತಿಸುವಿಕೆಯಲ್ಲಿ ಉಂಟಾಗಿರುವ ತಪ್ಪುಗಳು ಹಾಗೂ ನಕಲಿ ಫಲಾನುಭವಿಗಳನ್ನು ಗುರುತಿಸಿ ತೆಗೆದುಹಾಕಲು ಸಹ ಸಹಾಯವಾಗಿದೆ. ಅದರಲ್ಲಿನ ಅಂಕಿ ಅಂಶಗಳ ಪ್ರಕಾರ ಸಾರ್ವಜನಿಕ ಹಣಕಾಸು ವಲಯದಲ್ಲಿನ ಡಿಜಿಟಲೀಕರಣದಿಂದಾಗಿ ಭಾರತದಲ್ಲಿ ಹಲವು ಕಲ್ಯಾಣ ಕಾರ್ಯಕ್ರಮಗಳ ಫಲಾನುಭವವನ್ನು ಹಲವು ಮಂದಿಗೆ ತಲುಪಿಸಲು ಸಾಧ್ಯವಾಗಿದೆ. ಇವುಗಳಲ್ಲಿ ಮನರೇಗಾನಲ್ಲಿ 41%, ಎಲ್‌ಪಿಜಿ ಸಬ್ಸಿಡಿ ಯೋಜನೆ ಪಹಲ್‌ನಲ್ಲಿ 37%, ಎನ್‌ಎಸ್‌ಎಪಿನಲ್ಲಿ 14%, ರಾಷ್ಟ್ರೀಯ ವಿದ್ಯಾರ್ಥಿವೇತನ ಯೋಜನೆಯಲ್ಲಿ 7%ನಷ್ಟು ಯಶಸ್ವಿಯಾಗಿದೆ ಎಂದು 2015–16ರ ಭಾರತದ ಆರ್ಥಿಕ ಸಮೀಕ್ಷೆ ಹೇಳುತ್ತದೆ.

ಆರ್ಥಿಕ ನೀತಿಯಲ್ಲಿ ಅಂಕೀಕರಣ ಪ್ರಯೋಗದ ಮತ್ತೊಂದು ಹೊಸ ಯೋಜನೆ ಪ್ರಧಾನ ಮಂತ್ರಿ ಜನ್ ಧನ್ ಯೋಜನೆ. ಉಳಿತಾಯ ಖಾತೆಯನ್ನು ತೆರೆಯಲು ಜನರಿಗೆ ಪ್ರೋತ್ಸಾಹ ನೀಡುವ ಮೂಲಕ ಹಣವು ಅಸಲಿ ಫಲಾನುಭವಿಗಳಿಗೆ ದಕ್ಕುವಂತೆ ಮಾಡುವಲ್ಲಿ ಇದು ನೆರವಾಯಿತು. ಮತ್ತೊಂದು ಇಂತಹುದೇ ಪ್ರಯತ್ನ ಆಧಾರ್ ಕಾರ್ಡು ವಿತರಣೆ. ಪ್ರತಿಯೊಬ್ಬರಿಗೂ ಪ್ರತ್ಯೇಕ ಗುರುತಿನ ಸಂಖ್ಯೆಯನ್ನು ನೀಡಿತು. ಬ್ಯಾಂಕ್ ಖಾತೆಗಳಿಗೆ ಆಧಾರ್ ಕಾರ್ಡು ಹಾಗೂ ಮೊಬೈಲ್ ಸಂಖ್ಯೆಗಳನ್ನು ಜೋಡಿಸುವ ಮೂಲಕ ವಹಿವಾಟನ್ನು ಸುಗುಮಗೊಳಿಸಲಾಯಿತು. ಮೊಬೈಲ್ ಬ್ಯಾಂಕಿಂಗ್ ಮೂಲಕ ವಹಿವಾಟು ನಡೆಸಲು ಉತ್ತೇಜಿಸುವ ಮೂಲಕ ಬ್ಯಾಂಕಿಂಗ್‌ನಲ್ಲಿ ಸರತಿ ಸಾಲುಗಳ ಸಮಸ್ಯೆ ಕೂಡ ನಿವಾರಣೆಯಾಗುವಂತಾಗುತ್ತದೆ. ಜನ್‌ಧನ್ ಖಾತೆ, ಆಧಾರ್ ಕಾರ್ಡುಗಳು ಹಾಗೂ ಮೊಬೈಲ್ ಬ್ಯಾಂಕಿಂಗ್‌ಗಳು ಭಾರತದ ಡಿಜಿಟಲ್ ಕ್ರಾಂತಿಯೆಡೆಗಿನ ನಡೆಯನ್ನು ಹತ್ತಿರ ತಂದಿವೆ.

ಇಂತಹ ಡಿಜಿಟಲೀಕರಣದ ಪ್ರಯೋಗಗಳು ಜಾಗತಿಕವಾಗಿ ಹಲವೆಡೆ ನಡೆದಿವೆ. ಕೀನ್ಯಾದಲ್ಲಿ ಹಣಕಾಸು ಸಂಸ್ಥೆಗಳು ಎಷ್ಟರಮಟ್ಟಿಗೆ ಬೆಳೆಯುತ್ತಿರುವ ಅಂಕೀಕರಣ ಪರಿಸರಕ್ಕೆ ಸ್ಪಂದಿಸುತ್ತಿವೆ ಎನ್ನುವುದನ್ನು ತಿಳಿಯಲು ಸಮೀಕ್ಷೆ ನಡೆಸಲಾಯಿತು. ಕೀನ್ಯಾದಲ್ಲಿ ಬಹುಪಾಲು ಜನಸಂಖ್ಯೆಯು ಹಣಕಾಸು ಕೇಂದ್ರಗಳಿಂದ 5 ಕಿಮಿ ಸುತ್ತಳತೆಯಲ್ಲಿದೆ. ಇಲ್ಲಿ ಜನರು ಮೊಬೈಲ್ ಮೂಲಕ ವ್ಯವಹರಿಸುವುದನ್ನು ಕಲಿತಿದ್ದಾರೆ. ಈ ಬೆಳವಣಿಗೆ ಕೇವಲ ಹತ್ತು ವರ್ಷಗಳಲ್ಲಿ

* ಪ್ರಾಧ್ಯಾಪಕರು ** ಸಂಶೋಧನಾರ್ಥಿ, ರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮತ್ತು ನೀತಿ ಸಂಸ್ಥೆ.
**E-mail : * lekhachakraborty@gmail.com ** samiksha.agarwal94@gmail.com**

ಸೊನ್ನೆಯಿಂದ 75%ಗೆ ಏರಿದೆ. (Ndung'u Njuguna, Armando Morales, and Lydia Ndirangu2016)[2].

ಈ ಜಾಗತಿಕ ಅನುಭವದ ಹಿನ್ನೆಲೆಯಲ್ಲಿ ಭಾರತವು ಜನ್‌ಧನ್, ಆಧಾರ್ ಹಾಗೂ ಮೊಬೈಲ್ ತ್ರಿವಳಿಗಳ (ಜೆ.ಎ.ಎಂ.) ಮೂಲಕ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಸಲು ಮುಂದಾಗಿದೆ. ಸಬ್ಸಿಡಿಯ ವರ್ಗಾವಣೆಯಲ್ಲಿ ನಕಲಿಗಳ ಹಾವಳಿಯಿಂದಾಗಿ ಸೋರಿಕೆ ಹೆಚ್ಚಿತ್ತು. ಉದಾಹರಣೆಗೆ ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ಅಸಲಿ ಗುರುತಿನ ಸಮಸ್ಯೆಯಿಂದಾಗಿ ನಕಲಿ ಚೀಟಿಗಳ ಹಾವಳಿ ಹೆಚ್ಚಾಗಿದೆ. ಅದೇ ರೀತಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯ ಅನುಷ್ಠಾನದಲ್ಲಿ ಈ ತರಹದ ಸಮಸ್ಯೆಗಳಿಂದಾಗಿ ಸೋರಿಕೆ ಹೆಚ್ಚಾಗಿದೆ. ಎಲ್‌ಪಿಜಿ ಸಬ್ಸಿಡಿ ವಿಷಯದಲ್ಲೂ ಇದೇ ರೀತಿಯಾಗಿದ್ದು ಮೇಲಿನ ಪದರದಲ್ಲಿ ಒಟ್ಟು ಜನಸಂಖ್ಯೆಯಲ್ಲಿ 20% ಮಂದಿಯ ಬಳಕೆಯು 60% ಸಬ್ಸಿಡಿಯನ್ನು ಪಡೆಯುತ್ತಿದ್ದರೆ ಕೆಳಹಂತದವರಲ್ಲಿ ಒಟ್ಟು ಸಬ್ಸಿಡಿಯಲ್ಲಿ 8% ಮಾತ್ರ ಪಡೆಯುತ್ತಿತ್ತು. ಈ ಸಮಸ್ಯೆಗಳ ಹಿನ್ನೆಲೆಯಲ್ಲಿ ನೋಡಿದಾಗ ಅಂಕೀಕರಣ ಇದಕ್ಕೆ ಸೂಕ್ತ ಪರಿಹಾರ ಎಂದೆನಿಸುತ್ತದೆ. 2011ರಲ್ಲಿ ಶ್ರೀನಂದನ್ ನೀಲೇಕಣಿ ಕಾರ್ಯ ಪಡೆ ಬಡವರಿಗೆ ಸಬ್ಸಿಡಿಯನ್ನು ವರ್ಗಾಯಿಸಲು ಆಧಾರ್ ಆಧಾರಿತ ಏಕೀಕೃತ ಪಾವತಿ ವ್ಯವಸ್ಥೆಯನ್ನು ರೂಪಿಸಿತು. ಇದು ಸಬ್ಸಿಡಿಯ ನೇರ ವರ್ಗಾವಣೆ ಹಾಗೂ ವರ್ಗಾವಣೆಯ ವಿಧಾನಗಳನ್ನು ರೂಪಿಸಲು ಸೂಚಿಸಿತು. 2012ರ ಎನ್‌ಐಪಿಎಫ್‌ಪಿ ಸಮೀಕ್ಷೆ ಪ್ರಕಾರ ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ಫಲಾನುಭವಿಗಳು ಒಮ್ಮೆ ಆಧಾರ ಸಂಖ್ಯೆಯನ್ನು ನೀಡಿದರೆ ಆ ಸಂಖ್ಯೆಯು ಪ್ರಮಾಣೀಕೃತವಾದ್ದರಿಂದ ಮುಂದಿನ ವ್ಯವಹಾರಗಳು ಸುಸೂತ್ರವಾಗಿ ನಡೆಯುತ್ತವೆ. ಅದೇ ರೀತಿ ಮನರೆಗಾ ಯೋಜನೆಯಲ್ಲೂ ವೇತನವನ್ನು ಆಧಾರ ಸಂಖ್ಯೆಯ ಮೂಲಕ ಮಾಡಿದ್ದರಿಂದ 5%ನಷ್ಟು ಸೋರಿಕೆಯನ್ನು ತಡೆಗಟ್ಟಲಾಯಿತು. ಅದೇನೆ ಇರಲಿ ಗುರುತಿನ ದಾಖಲೆಗಳು ಸರಿಯಾದ ತಾರ್ಕಿಕ ರೀತಿಯಲ್ಲಿ ಮಾಡಿಲ್ಲದಿದ್ದರೆ ವ್ಯವಸ್ಥಿತ ಅಪರಾಧಗಳು ಹಾಗೂ ಗುರುತಿನ ವಂಚನೆಗಳು ಕೂಡ ನಡೆಯಬಹುದು. ಇತ್ತೀಚಿನ ಆರ್ಥಿಕ ಸಮೀಕ್ಷೆಯ ಪ್ರಕಾರ 2015ರಲ್ಲಿ 210 ಮಿಲಿಯನ್ ಆಧಾರ ಕಾರ್ಡುಗಳನ್ನು ಪ್ರತಿವಾರಕ್ಕೆ 4 ಮಿಲಿಯನ್‌ನಂತೆ ತಯಾರಿಸಲಾಗಿದೆ. ಹಾಗೆಯೇ ಸುಮಾರು 975 ಮಿಲಿಯನ್ ಮಂದಿ ಆಧಾರ್ ಕಾರ್ಡನ್ನು ಹೊಂದಿದ್ದಾರೆ. ಇದು ಒಟ್ಟು ಜನಸಂಖ್ಯೆಯ 75% ಭಾಗ. ಇದರಲ್ಲಿ 95% ಯುವಜನತೆ. ಎಲ್ಲ ರಾಜ್ಯಗಳಲ್ಲೂ ಆಧಾರ್ ಕಾರ್ಡು ಪ್ರಕ್ರಿಯೆ ಚಾಲನೆಯಲ್ಲಿದ್ದು ಹೆಚ್ಚು ರಾಜ್ಯಗಳಲ್ಲಿ 90%ನಷ್ಟು ಪ್ರಗತಿ ಕಂಡಿದೆ. (ಆರ್ಥಿಕ ಸಮೀಕ್ಷೆ, ಭಾರತ ಸರ್ಕಾರ 2015–16).

**ಕೋಷ್ಟಕ 1**

**ಸಾರ್ವಜನಿಕ ಹಣಕಾಸುವಲಯದಲ್ಲಿ ಅಂಕೀಕರಣ : ಹಣಕಾಸು ಸೇವೆಗಳ ಮೂಲಕ ಆರ್ಥಿಕ ಸೇರ್ಪಡೆ**

(ಕೋಟಿಗಳಲ್ಲಿ)

| ಬ್ಯಾಂಕ್ ಹೆಸರು | ಗ್ರಾಮೀಣ | ನಗರ | ಒಟ್ಟು | ರೂಪಾಯಿ ಕಾರ್ಡುಗಳು | ಆಧಾರ ಜೋಡಿತ | ಖಾತೆಯಲ್ಲಿ ಮೊತ್ತ |
|---|---|---|---|---|---|---|
| ಸಾರ್ವಜನಿಕ ಬ್ಯಾಂಕು | 12.32 | 10.22 | 22.54 | 17.58 | 14.93 | 49266.04 |
| ಗ್ರಾಮೀಣ ಬ್ಯಾಂಕ್ | 3.97 | 0.66 | 4.63 | 3.53 | 2.76 | 11708.05 |
| ಖಾಸಗಿ ಬ್ಯಾಂಕು | 0.55 | 0.37 | 0.91 | 0.84 | 0.44 | 2127.40 |
| ಒಟ್ಟು | 16.84 | 11.24 | 28.08 | 21.95 | 18.13 | 63101.49 |

ಟಿಪ್ಪಣಿ : ಈ ಖಾತೆಗಳು ಪ್ರಧಾನಮಂತ್ರಿ ಜನ್‌ಧನ್ ಯೋಜನೆಯಡಿಯಲ್ಲಿ 22 ಮಾರ್ಚ್ 2017ರವರೆಗೆ ತೆರೆಯಲಾದದ್ದು. ಎಲ್ಲ ಸಂಖ್ಯೆಗಳು ಕೋಟಿಗಳಲ್ಲಿವೆ. ಈ ಅಂಕಿಅಂಶಗಳನ್ನು ಏಪ್ರಿಲ್ 2017ಕ್ಕೆ ನವೀಕರಿಸಲಾಗಿದೆ.

ಮೂಲ : ಭಾರತ ಸರ್ಕಾರ (2017) PMJDY

ಕೋಷ್ಟಕ 1 ಭಾರತದಲ್ಲಿ ಜನ್‌ಧನ್‌ಯೋಜನೆ ಎಷ್ಟು ಯಶಸ್ವಿಯಾಗಿದೆ ಎನ್ನುವುದನ್ನು ತೋರಿಸುತ್ತದೆ. ಪ್ರಧಾನ ಮಂತ್ರಿಯವರ ಜನ್‌ಧನ್ ಯೋಜನೆಯು ಎಲ್ಲ ಹಂತದ ಜನರನ್ನು ಉಳಿತಾಯ ಖಾತೆ ತೆರೆಯಲು ಪ್ರೋತ್ಸಾಹಿತು. ಇದರಿಂದಾಗಿ ಸಬ್ಸಿಡಿ ಹಣವನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಬಹುದು. ಎಲ್‌ಪಿಜಿಯ ಸಬ್ಸಿಡಿಯನ್ನು ನೇರವಾಗಿ ಗ್ರಾಹಕರಿಗೆ ವರ್ಗಾಯಿಸುವ ಯೋಜನೆ ಪಹಲ್ 2014ರಲ್ಲಿ ಪುನಃ ಚಾಲನೆ ನೀಡಲಾಯಿತು. ಇದರ ಉದ್ದೇಶ ಎಲ್‌ಪಿಜಿ ಗ್ರಾಹಕರಿಗೆ ನೇರವಾಗಿ ಉಪಯೋಗವಾಗುವಂತೆ ಮಾಡುವುದು. ಬಿಪಿಎಲ್ ವರ್ಗದ ಮಹಿಳೆಯರಿಗೆ ಶುದ್ಧ ಅಡುಗೆ ಇಂಧನ ಒದಗಿಸುವುದನ್ನು ಇದರಡಿಯಲ್ಲಿ ತರಲಾಯಿತು. ಮಲೇರಿಯಾಗಿಂತ ಹೆಚ್ಚಾಗಿ ಮಹಿಳೆಯರು, ಮಕ್ಕಳು ಅಡಿಗೆ ಇಂಧನವನ್ನು ತರಲು ಬಹಳ ದೂರ ಪ್ರದೇಶಗಳಿಗೆ ಹೋಗುವುದರಿಂದ ಹಾಗೂ ಅಶುದ್ಧ ಅನಿಲ ಉಂಟುಮಾಡುವ ವಾಯುಮಾಲಿನ್ಯದಿಂದ ಸಾವನ್ನಪ್ಪುತ್ತಿದ್ದಾರೆ. ಭಾರತೀಯ ಸಂಖ್ಯಾಶಾಸ್ತ್ರ ಆಯೋಗವು ಈ ಕುರಿತು ಅಧ್ಯಯನವನ್ನು ಕೈಗೊಂಡಿತ್ತು (ಚಕ್ರವರ್ತಿ 2016 ಮತ್ತು 2014). ಲಹೋತಿ ಗುರುತಿಸಿದಂತೆ ನಗರಗಳಲ್ಲಿ ಎಲ್‌ಪಿಜಿ ಬಳಕೆ ಪಹಲ್‌ಗೆ ಮೊದಲು ಹೆಚ್ಚಾಗಿದ್ದದ್ದು ಸಾಮಾಜಿಕ – ಆರ್ಥಿಕವಾಗಿ ಉತ್ತಮವಾಗಿದ್ದ ಮನೆಗಳಲ್ಲಿ ಮಾತ್ರ. ಎಲ್‌ಪಿಜಿ ಸುರಕ್ಷಿತ ಶುದ್ಧ ಅನಿಲವಾಗಿದ್ದರೂ ಇಂದಿಗೂ ದೇಶದಲ್ಲಿ ಅನೇಕ ಮನೆಗಳಲ್ಲಿ ಅನ್ಯ ವಿಧದ ಅನಿಲಗಳನ್ನೇ ಅಡುಗೆಗೆ ಬಳಸಲಾಗುತ್ತಿದೆ. ಅವು ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನುಂಟುಮಾಡುತ್ತದೆ. ಎಲ್‌ಪಿಜಿ ಸಬ್ಸಿಡಿಯ ಮುಖ್ಯ ಉದ್ದೇಶವೇ ಬಡಮನೆಗಳಲ್ಲೂ ಅನ್ಯ ಇಂಧನಕ್ಕೆ ಬದಲಾಗಿ ಎಲ್‌ಪಿಜಿಯನ್ನು ಬಳಸುವಂತೆ ಮಾಡುವುದು. ಆದರಿನ್ನೂ ಇದನ್ನು ಸಂಪೂರ್ಣವಾಗಿ ಸಾಧಿಸಲಾಗಿಲ್ಲ – (ಲಹೋಟಿ 2012). ಆಧಾರ್ ಮೂಲಕ ಪಾವತಿ ಮಾಡುವ ವ್ಯವಸ್ಥೆ ಪಹಲ್ ಯೋಜನೆಯ ಯಶಸ್ವಿಯಾಗುವಲ್ಲಿ

ಬಹುಮುಖ್ಯವಾದ ಪಾತ್ರ ವಹಿಸಿದೆ. ಈ ಯೋಜನೆಯಡಿ ಗ್ರಾಹಕರು ಮಾರುಕಟ್ಟೆ ದರದಲ್ಲಿ ಸಿಲಿಂಡರ್‌ಗಳನ್ನು ಪಡೆಯುತ್ತಾರೆ. ಬಿಪಿಎಲ್ ಗ್ರಾಹಕರಿಗೆ ಎಲ್‌ಪಿಜಿ ಸಬ್ಸಿಡಿಯು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆಯಾಗುತ್ತದೆ. ಈ ಸಬ್ಸಿಡಿಯನ್ನು ಪಡೆಯಲು ಗ್ರಾಹಕರು ತಮ್ಮ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಯೊಂದಿಗೆ ಜೋಡಿಸಬೇಕು ಅಥವ ತಮ್ಮ ಬ್ಯಾಂಕ್ ಖಾತೆಯನ್ನು ತಮ್ಮ ಎಲ್‌ಪಿಜಿಯ ಗ್ರಾಹಕ ಸಂಖ್ಯೆಯೊಂದಿಗೆ ಬೆಸೆದಿರಬೇಕು. ಈ ಯೋಜನೆಯು ದೇಶದ 676 ಜಿಲ್ಲೆಗಳಲ್ಲಿನ 15.3 ಕೋಟಿ ಗ್ರಾಹಕರನ್ನು ಒಳಗೊಳ್ಳುವ ಉದ್ದೇಶವನ್ನು ಹೊಂದಿದ್ದು ಕ್ರಮೇಣ ದೇಶದಾದ್ಯಂತ ಅಳವಡಿಸಲಾಗುವುದು (ಭಾರತ ಸರ್ಕಾರ 2014). (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ಭಾರತ ಸರ್ಕಾರ, 2014).

### ಜನ್‌ಧನ್ – ಆಧಾರ್ – ಮೊಬೈಲ್

ಜಾಮ್ ತ್ರಿವಳಿ ಬಳಕೆಯಿಂದಾಗಿ ಕೇಂದ್ರ ಸರ್ಕಾರದ ಹಲವು ವಲಯಗಳಲ್ಲಿ ಅಂದರೆ ಎಲ್ಲೆಲ್ಲಿ ಹೆಚ್ಚಿನ ಸೋರಿಕೆಯಿದ್ದು ಆರ್ಥಿಕ ಸೇರ್ಪಡೆಗೆ ತೊಂದರೆಯಾಗಿದೆಯೊ ಅಂತಹ ಕಡೆ ಹಣವನ್ನು ಹೆಚ್ಚಾಗಿ ಉಳಿಸಬಹುದಾಗಿದೆ. ರಾಸಾಯನಿಕಗಳ ಮೇಲೆ ಕೇಂದ್ರ ಸರ್ಕಾರ ನೀಡುವ ಸಬ್ಸಿಡಿಯಲ್ಲಿ 40% ಸೋರಿಕೆಯಿದೆ ಇಂತಹ ಕಡೆ ಇದನ್ನು ಬಳಸಬಹುದಾಗಿದೆ. ಅದೇ ರೀತಿ ಕೇಂದ್ರ ಸರ್ಕಾರದೊಂದಿಗಿನ ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು, ವ್ಯಾಪಾರ ವಹಿವಾಟುಗಳನ್ನು ಇದೇ ರೀತಿಯಲ್ಲಿ ನಿರ್ವಹಿಸಬಹುದು. ಜಾಮ್ ವರ್ಗಾವಣೆಯಲ್ಲಿಯ ಕ್ಷಮತೆಯನ್ನು ಹೆಚ್ಚಿಸಿದ್ದು, ಸೋರಿಕೆಗಳನ್ನು ನಿಯಂತ್ರಿಸಿದೆ. ಜೊತೆಗೆ ತಡವಾಗುವುದನ್ನು ತಪ್ಪಿಸಿ ಆಡಳಿತದ ಮೇಲಿನ ಹೊರೆಯನ್ನು ಕಡಿಮೆಗೊಳಿಸಿದೆ. ಹಾಗಾಗಿ ಜಾಮ್ ಅನ್ನು ಸರ್ಕಾರಗಳ ನಡುವಿನ ವರ್ಗಾವಣೆಯಲ್ಲಿ ಇದನ್ನು ಬಳಸುವುದರಿಂದ ಖರ್ಚು ಕಡಿಮೆಯಾಗಿ ಹೆಚ್ಚಿನ ಕಾರ್ಯಕ್ಷಮತೆಯನ್ನು ಸಾಧಿಸಬಹುದಾಗಿದೆ. ಆದರೂ ಇಂತಹ ಕಲ್ಯಾಣ ಕಾರ್ಯಕ್ರಮಗಳಲ್ಲಿ ಇಂತಹ ಕ್ರಾಂತಿಕಾರಕ ಬದಲಾವಣೆಗಳನ್ನು ಅಳವಡಿಸಿದರೂ ಹಲವು ತೊಂದರೆಗಳು ಉಳಿದಿವೆ. ಈ ಯೋಜನೆಗಳಡಿಯಲ್ಲಿ ಹಣ ವರ್ಗಾವಣೆ ಮಾಡುವಲ್ಲಿದ್ದ ಕೆಲವು ತೊಂದರೆಗಳು ಕಡಿಮೆಯಾಗಿದ್ದು,




ಸೋರಿಕೆ, ಪೋಲಾಗುವಿಕೆ ಮತ್ತು ವಿತರಣೆಯ ಪ್ರಕ್ರಿಯೆಯಲ್ಲಿನ ಭ್ರಷ್ಟಾಚಾರವು ಕಡಿಮೆಯಾಗಿದೆ. ಈ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಹೆಚ್ಚಿನ ಸಂಪನ್ಮೂಲ ಹಾಗೂ ಮಾನವಶಕ್ತಿಯನ್ನು ಬಳಸಲಾಗುವುದು. 2015–16ರ ಆರ್ಥಿಕ ಸಮೀಕ್ಷೆಯು ಸಂಪನ್ಮೂಲ ಸಬ್ಸಿಡಿಗೆ ಸಂಬಂಧಿಸಿದಂತೆ ಭಾರತದಲ್ಲಿ ಬಡತನ ರೇಖೆಗಿಂತ ಮೇಲ್ಪಟ್ಟವರು ಎಷ್ಟು ಮಂದಿ ಪಡೆಯುತ್ತಿದ್ದಾರೆ ಎನ್ನುವುದನ್ನು ಗುರುತಿಸಿದೆ. ಅದೇ ರೀತಿ ಎಲ್‌ಪಿಜಿ ಸಬ್ಸಿಡಿಯನ್ನು ಪಡೆಯುತ್ತಿರುವ ಗ್ರಾಹಕರ ಸಂಖ್ಯೆ 36%ರಷ್ಟಿದೆ. ಅದರಲ್ಲಿ 9%ರಷ್ಟು ಬಡತನ ರೇಖೆಯ ಖಾತೆ. ಇದರಿಂದ 91%ರಷ್ಟು ಸಬ್ಸಿಡಿ ಪಡೆಯುತ್ತಿರುವುದು ಉತ್ತಮ ಪರಿಸ್ಥಿತಿಯಲ್ಲಿರುವಂತಹವರು. ಅಂತಿಮವಾಗಿ ಈ ಬಗೆಯ ವರ್ಗಾವಣೆಯಲ್ಲೂ ಮೂಲಭೂತ ಸಮಸ್ಯೆಯಿದೆ. ಇದರಲ್ಲಿ ಸ್ವೀಕರಿಸುವವರು ತಮ್ಮ ನಿರ್ದಿಷ್ಟ ಅಗತ್ಯಗಳ ವಿಷಯವಾಗಿ ನಿರ್ಧರಿಸುವಂತಿಲ್ಲ[2]. ಹಾಗಾಗಿ ಪ್ರಸ್ತುತ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರಲು ಅರ್ಥಶಾಸ್ತ್ರಜ್ಞರು ಸಾರ್ವತ್ರಿಕ ಮೂಲ ವರಮಾನ ಯೋಜನೆಯನ್ನು ಅನುಷ್ಠಾನಗೊಳಿಸುವುದರ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ಇದರಿಂದಾಗಿ ಸರ್ಕಾರವು ಬಡವ ಶ್ರೀಮಂತ ಭೇಧವಿಲ್ಲದೆ ಒಂದೇ ತೆರನಾದ ಮೊತ್ತವನ್ನು ಎಲ್ಲ ಜನರಿಗೆ ವರ್ಗಾಯಿಸುತ್ತದೆ. 2016–17ರ ಭಾರತೀಯ ಆರ್ಥಿಕ ಸಮೀಕ್ಷೆಯ ಪ್ರಕಾರ UBI ಅನುಷ್ಠಾನಗೊಳಿಸುವುದರಿಂದ ಹಣವನ್ನು ಅನಪೇಕ್ಷಿತರಿಗೆ ನಿಗದಿಗೊಳಿಸುವುದು, ಸೋರಿಕೆ ಮೊದಲಾದ ಭ್ರಷ್ಟಾಚಾರಗಳನ್ನು ತಡೆಗಟ್ಟಬಹುದು. ಫಲಾನುಭವಿಗಳ ಖಾತೆಗೆ ಹಣವನ್ನು ನೇರವಾಗಿ ವರ್ಗಾಯಿಸಬಹುದು.

ಬರಧಾನ್ (2016) ಪ್ರಕಾರ ಮೂಲ ವರಮಾನವು ಬಡತನ ರೇಖೆಯ 75%ರಷ್ಟು ಮಾತ್ರ ಒಳಗೊಳ್ಳುತ್ತದೆ ಇದರಿಂದ ಕೆಲವು ಕಾರ್ಯಕ್ರಮಗಳನ್ನು ಬದಲಿಸಬಹುದೇ ವಿನಃ ಎಲ್ಲವನ್ನೂ ಅಲ್ಲ. ಅವರ ಪ್ರಕಾರ ಸಾರ್ವಜನಿಕ ಶಿಕ್ಷಣ, ಆರೋಗ್ಯ, ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಿಕೆ ಕಾರ್ಯಕ್ರಮ, ಸಾರ್ವಜನಿಕ ಉದ್ಯೋಗ ಖಾತ್ರಿಯಂತಹ ಕಾರ್ಯಕ್ರಮಗಳನ್ನು ಉಳಿಸಿಕೊಳ್ಳಬೇಕು. ಒಂದು ವೇಳೆ ಮೂಲ ವರಮಾನವನ್ನು 2014–15ರ ಅನ್ವಯ ಪ್ರತಿ ವ್ಯಕ್ತಿಗೆ ವಾರ್ಷಿಕ ರೂ.ಹತ್ತು ಸಾವಿರ ಎಂದು ನಿಗದಿಪಡಿಸಿದರೆ ಆಗ ಅದು ವಾರ್ಷಿಕ ಜಿಡಿಪಿ 10% ಆಗುತ್ತದೆ. ಇದನ್ನು ಸಬ್ಸಿಡಿಗಳು ಹಾಗೂ ಅಸಮರ್ಥ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಭರಿಸಬಹುದು. ಬ್ಯಾನರ್ಜಿ (2016) ಮತ್ತು ಘಾತಕ್ (2016) ಗುರುತಿಸುವಂತೆ ಮನರೇಗಾ ಮತ್ತು ಸಾರ್ವಜನಿಕ ಪಡಿತರ ವಿತರಣೆ ಯೋಜನೆಯಂತಹ ಯೋಜನೆಗಳ ಗುರಿ ಸ್ಪಷ್ಟವಿಲ್ಲ. ಭಾರತವು ಸಬ್ಸಿಡಿಗಳನ್ನು ಕಡಿಮೆಗೊಳಿಸುವುದರಿಂದ, ಅನಗತ್ಯ ಖರ್ಚುಗಳನ್ನು ತಡೆಗಟ್ಟುವುದರಿಂದ ಹಾಗೂ ತೆರಿಗೆ ನೀತಿಯನ್ನು ಪರಿಷ್ಕರಿಸುವುದರಿಂದ ಮೂಲವರಮಾನವನ್ನು ಗಳಿಸಿಕೊಳ್ಳಬಹುದು. ರೇ (2016)ರಲ್ಲಿ ಗುರುತಿಸಿದ್ದು ದೇಶವು ಪ್ರಜೆಗಳಿಗೆ ನೀಡಬೇಕಾದ ಮೂಲಭೂತ ವರಮಾನವನ್ನು ತನ್ನ ಜಿಡಿಪಿಯಲ್ಲಿ ಶೇಕಡಾವಾರನ್ನು ಅದಕ್ಕೆ ನಿಗದಿಪಡಿಸಿಕೊಳ್ಳುವ ಮೂಲಕ ನೀಡಬಹುದು. ಇದನ್ನು ವಿದ್ಯುನ್ಮಾನ ಪಾವತಿಗಳ ಸೌಕರ್ಯಗಳ ನೆರವಿನಿಂದ ಮಾಡಬಹುದು. ಇದು ಭಾರತದಲ್ಲಿ ನಿಧಾನವಾಗಿ ಅಭಿವೃದ್ಧಿಗೊಳ್ಳುತ್ತಿದೆ. ಆಧಾರ್ ಆಧರಿತ ಬಯೊಮೆಟ್ರಿಕ್ ಕಾರ್ಯಕ್ರಮವು ಈ ನಿಟ್ಟಿನಲ್ಲಿ ಸಹಕಾರಿ. ಮೂಲವರಮಾನವು ಭಾರತಕ್ಕೆ ಬಡತನ ನಿರ್ಮೂಲನೆ ಮಾಡಲು ನೆರವಾಗುತ್ತದೆ. ಈ ನಿಟ್ಟಿನಲ್ಲಿನ ಭ್ರಷ್ಟಾಚಾರವನ್ನು ಕೂಡ ತಡೆಯಲು ನೆರವಾಗುತ್ತದೆ. ಯುಬಿಐನ ಮುಖ್ಯ ಅನುಕೂಲವೆಂದರೆ ಸಾರ್ವತ್ರಿಕವಾಗಿ ವರ್ಗಾವಣೆಯ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ. ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ನೆರವಾಗುತ್ತದೆ. ಆರ್ಥಿಕ ಬಲವರ್ಧನೆ, ಆರ್ಥಿಕ ನೀತಿಗಳ ಹಿನ್ನೆಲೆಯಲ್ಲಿ ಭಾರತವು ಒಟ್ಟು ಜಿಡಿಪಿಯಲ್ಲಿ ಆರ್ಥಿಕ ಕೊರತೆಯನ್ನು 3%ಗಿಂತ ಕಡಿಮೆಯಿರುವ ಹಾಗೆ ನೋಡಿಕೊಳ್ಳಬೇಕು (ಚಕ್ರವರ್ತಿ 2016). ಅಂಕೀಕರಣ ಪ್ರಕ್ರಿಯೆಯು ಸಬ್ಸಿಡಿ ನಿರ್ವಹಣಾ ವ್ಯವಸ್ಥೆಯನ್ನು ಸರಳಗೊಳಿಸುತ್ತದೆ. ಹಣಕಾಸು ಸೇರ್ಪಡೆಗೆ ಉತ್ತೇಜನ ನೀಡುತ್ತದೆ. ಇದರಿಂದಾಗಿ ಸಂಪನ್ಮೂಲಗಳು ಸರಿಯಾದ ರೀತಿಯಲ್ಲಿ ಬಳಸಲ್ಪಡುತ್ತದೆ. ❑

# ಕೌಶಲ್ಯಾಭಿವೃದ್ಧಿ ಮತ್ತು ಯುವ ಸಶಕ್ತೀಕರಣ



* ಡಾ. ಜಿತೇಂದರ್ ಸಿಂಗ್

> ಯುವ ಸಮುದಾಯದ ಆಶೋತ್ತರಗಳನ್ನು ಈಡೇರಿಸುವ ಹಾದಿಯಲ್ಲಿ ಭಾರತ ಸಾಗಿದೆ. ಯುವಕರ ಮಹತ್ವಾಕಾಂಕ್ಷಿ ಶಕ್ತಿ ಮತ್ತು ಉತ್ತಮ ಗುಣಮಟ್ಟದ ಜೀವನದ ಬಯಕೆಯನ್ನು ಅಭಿವೃದ್ಧಿ ಪಡಿಸುವುದು ಭಾರತದ ಆಶಯವಾಗಿದೆ.

ಯುವ ಸಮುದಾಯದವರು ಬದಲಾವಣೆಯ ಹರಿಕಾರರು, ಪ್ರಯೋಗಶೀಲತೆಗೆ ಮುಕ್ತರಾಗಿರುತ್ತಾರೆ. ಹೊಸ ಪರಿಕಲ್ಪನೆಯ ಸೃಷ್ಟಿಕರ್ತರಾಗಿರುತ್ತಾರೆ; ಎಲ್ಲಕ್ಕಿಂತ ವಿಶೇಷವಾಗಿ, ಅವರು ಪ್ರಗತಿಯ ಪ್ರವರ್ತಕರಾಗಿ ಹೊರಹೊಮ್ಮಿದ್ದಾರೆ. ಯುವಜನತೆ ಕೇವಲ ದೇಶದ ಭವಿಷ್ಯ ಮಾತ್ರವಲ್ಲದೆ, ಪ್ರಗತಿಯ ಯಶೋಗಾಥೆಯ ಪಾಲುದಾರರೂ ಆಗಿದ್ದೇವೆ ಎಂದು ಗುರುತಿಸಿಕೊಂಡು ಇರುವುದನ್ನು ದೃಢಪಡಿಸಿದ್ದಾರೆ.

ದೇಶವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯಲು ಯುವ ಸಮುದಾಯದ ಸಬಲೀಕರಣಕ್ಕೆ ಅಗತ್ಯವಿರುವ ಕೌಶಲ್ಯ ಮತ್ತು ಜ್ಞಾನವನ್ನು ಪರಿಣಾಮಕಾರಿಯಾಗಿ ನೀಡುವುದು ಅತ್ಯಾವಶ್ಯಕವಾಗಿದೆ. ಪ್ರಸ್ತುತ ಭಾರತ, ಇತಿಹಾಸದ ಉತ್ತಮ ಕಾಲಘಟ್ಟದಲ್ಲಿದ್ದು ಒಟ್ಟು ಜನಸಂಖ್ಯೆಯ ಶೇಕಡ 50 ಕ್ಕಿಂತ ಹೆಚ್ಚು ಜನರು 25 ವರ್ಷ ವಯಸ್ಸಿನ ಕೆಳಗಿನವರು. 2020ರ ವೇಳೆಗೆ ಆ ಸರಾಸರಿ ವಯೋಮಾನ 29 ಆಗಲಿದ್ದು, 47 ದಶಲಕ್ಷ ಜನ ಹೆಚ್ಚುವರಿಯಾಗಿ ಉದ್ಯೋಗ ಮಾಡುವ ವಯೋಮಾನದವರಾಗುತ್ತಾರೆ. ಇದು ಐತಿಹಾಸಿಕ ಸಂಖ್ಯೆ. ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆಯತ್ತ ಯುವ ಸಮುದಾಯವನ್ನು ಕೇಂದ್ರೀಕರಿಸಿ, ಅವರಿಗೆ ಮಾರ್ಗದರ್ಶನ ನೀಡುವ ತೀವ್ರ ಅಗತ್ಯವಿದೆ. ಕೆಲಸ ಮಾಡುವ ವಯೋಮಾನದವರ ಸಂಖ್ಯೆ 2040ರವರೆಗೂ ಮುಂದುವರಿಯಲಿದ್ದು, 'ಮುಂದುವರಿಯುತ್ತಿರುವ ರಾಷ್ಟ್ರ' ದಿಂದ 'ಮುಂದುವರಿದ ರಾಷ್ಟ್ರ'ಕ್ಕೆ ಚಿಮ್ಮಬಹುದು ಎಂದು ವಿಶ್ವ ಬ್ಯಾಂಕ್ ವರದಿ ತಿಳಿಸುತ್ತದೆ.

ಆರ್ಥಿಕ ಪ್ರಗತಿಯೊಂದಿಗೆ ಯುವಜನತೆಯ ಆಶೋತ್ತರಗಳನ್ನು ಈಡೇರಿಸುವುದು ಬೆಳವಣಿಗೆ ಧ್ಯೇಯಕ್ಕೆ ಪ್ರಧಾನವಾಗಿದೆ. ಪರೋಕ್ಷ ಚಿಂತನೆ, ಅನ್ವೇಷಣೆಗೆ ಪ್ರೋತ್ಸಾಹಿಸಿ, ಸಾಂಪ್ರದಾಯಿಕ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಯುವಕರನ್ನು ತೊಡಗಿಸಿಕೊಳ್ಳುವುದರಿಂದ ರಾಷ್ಟ್ರದ ಬೆಳವಣಿಗೆ ಮತ್ತು ಸಮೃದ್ಧಿಗೆ ಪೂರಕ ವಾತಾವರಣ ನಿರ್ಮಿಸಲು ನೆರವಾಗುತ್ತದೆ.

ಉದ್ಯೋಗದ ಬೇಡಿಕೆ ಮತ್ತು ಪೂರೈಕೆ ನಡುವೆ ಯಾವುದೇ ಹೊಂದಾಣಿಕೆ ಇಲ್ಲದಿರುವುದನ್ನು ತೊಡೆದುಹಾಕಲು ಔದ್ಯೋಗಿಕ ಕೌಶಲ್ಯಗಳೊಂದಿಗೆ ಯುವಕರನ್ನು ಸಜ್ಜುಗೊಳಿಸುವ ತೀವ್ರ ಅಗತ್ಯವನ್ನು ಇದು ಪ್ರತಿಪಾದಿಸುತ್ತದೆ. ಈ ಅಂತರವನ್ನು ಹೋಗಲಾಡಿಸಲು 'ಮೇಕ್ ಇನ್ ಇಂಡಿಯಾ (ಭಾರತದಲ್ಲಿ ತಯಾರಿಸಿ)', 'ಸ್ಕಿಲ್ ಇಂಡಿಯಾ ಮಿಷನ್' (ಕೌಶಲ್ಯ ಉತ್ತೇಜನ), 'ಸ್ಟಾರ್ಟ್ ಅಪ್ ಇಂಡಿಯಾ' (ಭಾರತದಲ್ಲಿ ಆರಂಭಿಸಿ – ನವೋದ್ಯಮ), 'ಸ್ಟಾಂಡ್ ಅಪ್ ಇಂಡಿಯಾ' ಮತ್ತು 'ಡಿಜಿಟಲ್ ಇಂಡಿಯಾ'ದಂತಹ ಅನೇಕ ಕಾರ್ಯತಂತ್ರ ಉಪಕ್ರಮಗಳನ್ನು ಭಾರತ ಸರ್ಕಾರ ಜಾರಿಗೊಳಿಸಿದೆ. ಈ ಉಪಕ್ರಮಗಳು ಉದ್ಯೋಗ ಸೃಷ್ಟಿ ಮತ್ತು ಯುವಜನರ ಉದ್ಯಮಶೀಲತೆ ಉತ್ತೇಜಿಸುವ ಗುರಿ ಹೊಂದಿದೆ.

ಪ್ರಮುಖ ಕಾರ್ಯಕ್ರಮವಾದ ಮೇಕ್ ಇನ್ ಇಂಡಿಯಾ ಬಂಡವಾಳ ಹೂಡಿಕೆ ಆಕರ್ಷಿಸಿ, ಅನ್ವೇಷಣೆ ಪ್ರೋತ್ಸಾಹಿಸಿ, ಬೌದ್ಧಿಕ ಆಸ್ತಿ ರಕ್ಷಿಸಿ ವಿವಿಧ ವಲಯಗಳಲ್ಲಿ

* ಹಿರಿಯ ಕಾರ್ಯದರ್ಶಿ, ಪಿಹೆಚ್‌ಡಿ ವಾಣಿಜ್ಯೋದ್ಯಮ ಸಂಘ, ನವದೆಹಲಿ. E-mail : jatinder@phdcci.in

ತಯಾರಿಕಾ ಚಟುವಟಿಕೆ ಉತ್ತೇಜಿಸುವ ನಿರೀಕ್ಷೆ ಇದ್ದು 2022 ರ ವೇಳೆಗೆ ಸುಮಾರು ಹತ್ತು ಕೋಟಿ ಹೊಸ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಉದ್ದೇಶಿಸಲಾಗಿದೆ. 'ಮೇಕ್ ಇನ್ ಇಂಡಿಯಾ' ಅಭಿಯಾನ ಯುವಕರಿಗೆ ಜೀವನೋಪಾಯದ ಅವಕಾಶಗಳನ್ನು ದ್ವಿಗುಣಗೊಳಿಸುವ ಬಲವರ್ಧಕವಾಗಿದೆ. ಭಾರತವನ್ನು ಜಾಗತಿಕ ತಯಾರಿಕಾ ವಲಯವಾಗಿ ಪರಿವರ್ತಿಸಿ, ಜಿಡಿಪಿಯಲ್ಲಿ ತನ್ನ ಪಾಲು 2022ರ ವೇಳೆಗೆ ಶೇಕಡ 25ಕ್ಕೆ ಏರಬಹುದಾಗಿದೆ. ನಿರ್ಮಾಣ, ಉಡುಪು, ಆಹಾರ ಸಂಸ್ಕರಣೆ, ವಿಮಾನಯಾನ, ರಕ್ಷಣಾ ಉಪಕರಣ ತಯಾರಿಕೆ ಮತ್ತು ಎಲೆಕ್ಟ್ರಾನಿಕ್ಸ್ ಸೇರಿದಂತೆ ಸುಮಾರು 25 ವಲಯಗಳಲ್ಲಿ ವಿಭಿನ್ನ ಕೌಶಲ್ಯ ಅವಶ್ಯವಿದೆ ಎಂದು ಗುರುತಿಸಲಾಗಿದೆ. ಸ್ಥಳೀಯ ಹಾಗೂ ಅಂತಾರಾಷ್ಟ್ರೀಯ ಕಂಪೆನಿಗಳು ಭಾರತದಲ್ಲಿ ತಯಾರಿಸಿ, ತಮ್ಮ ಉತ್ಪನ್ನಗಳನ್ನು ಜಾಗತಿಕವಾಗಿ ಮಾರುವಂತಾಗಲು ವಿದೇಶಿ ನೇರ ಬಂಡವಾಳ ಹೂಡಿಕೆ ನಿಯಮಗಳನ್ನು ಸರ್ಕಾರ ಸಡಿಲಿಸಿದೆ. ಮೇಕ್ ಇನ್ ಇಂಡಿಯಾ ಫಲವಾಗಿ ಕಾರ್ಯಸ್ಥಳದಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ಹೆಚ್ಚಿಸಲಿದೆ. ಈ ಸಂದರ್ಭದಲ್ಲಿ, ಪ್ರಸ್ತುತ ಇರುವ ಮತ್ತು ಭವಿಷ್ಯದ ನೌಕರರಿಗೆ ಉನ್ನತ ಕೌಶಲ್ಯ ತರಬೇತಿ ಅಗತ್ಯವಾಗಿ ಬೇಕಾಗಿದೆ. ಬುಡಮಟ್ಟದ ತಂತ್ರಜ್ಞರು, ವಿನ್ಯಾಸಕರು, ಕಾರ್ಯಕ್ರಮ ನಿರ್ವಾಹಕರು, ಯೋಜನಾ ತಯಾರಕರು ಸೇರಿದಂತೆ ವಿಭಿನ್ನ ಕೌಶಲ್ಯ ಕಾರ್ಯಪಡೆಗೆ ಅಗಾಧ ಉದ್ಯೋಗಾವಕಾಶಗಳು ದೊರೆಯುತ್ತವೆ. ಸೌರ ಶಕ್ತಿ ಉತ್ಪಾದನೆ, ಹಸಿರು ಕಟ್ಟಡ, ಚತುರ ನಗರ ಮೊದಲಾದ ವಲಯಗಳಲ್ಲಿ ಹೊಸ ಬಗೆಯ ಕೆಲಸಗಳು ಹೊರಹೊಮ್ಮಲಿವೆ. ಇದರೊಂದಿಗೆ ದೃಢ ಪೂರೈಕೆ ಸರಪಳಿ ಮತ್ತು ಸಂಪರ್ಕದ ವಿಶಾಲ ವ್ಯವಸ್ಥೆ ಅನೇಕ ಬಗೆಯ ವಿವಿಧ ಕೆಲಸಗಳನ್ನು ಸೃಷ್ಟಿಸುತ್ತದೆ. ಇದು ಭಾರತವನ್ನು ಸ್ಪರ್ಧಾತ್ಮಕ ಮಾರುಕಟ್ಟೆ ಮತ್ತು ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ ಮಾಡುತ್ತದೆ.

### ಸ್ಕಿಲ್ ಇಂಡಿಯಾ

ಭೌಗೋಳಿಕ ಲಾಭ ಭಾರತಕ್ಕಿದೆಯಾದರೂ, ಮಾರುಕಟ್ಟೆಗೆ ಅವಶ್ಯಕವಾದ ಗುಣಮಟ್ಟ ಒಂದು ಸವಾಲು. ಪ್ರತಿವರ್ಷ ಉದ್ಯೋಗಕ್ಕೆ ಸೇರ್ಪಡೆಯಾಗುವ 12 ದಶಲಕ್ಷ ಜನರ ಪೈಕಿ ಕೇವಲ ಶೇಕಡ 2



ರಷ್ಟು ಜನರಿಗೆ ಮಾತ್ರ ಔಪಚಾರಿಕ ತರಬೇತಿ ದೊರೆಯುತ್ತದೆ. ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆಗಾಗಿ ಹೊಸ ಸಚಿವಾಲಯದ ಸ್ಥಾಪನೆಯಿಂದಾಗಿ, ಕೌಶಲ್ಯದ ರೂಪುರೇಷೆ ವೇಗವಾಗಿ ವಿಕಸನಗೊಳ್ಳುತ್ತಿದೆ. ಭಾರತದಲ್ಲಿ ತಯಾರಿಸಿ ಅಭಿಯಾನಕ್ಕೆ ಮತ್ತು 100 ಚತುರ ನಗರ ನಿರ್ಮಾಣ ಯೋಜನೆಗಳು ಹೆಚ್ಚು ಆಕರ್ಷಿತವಾಗಿದೆ.

ಮೊದಲ ಸಮಗ್ರ ರಾಷ್ಟ್ರೀಯ ನೀತಿ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ 2015, ಉದ್ಯಮಿಗಳನ್ನು ಪ್ರೋತ್ಸಾಹಿಸಿ ಯುವಕರನ್ನು ಉನ್ನತ ತಂತ್ರಜ್ಞಾನದ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು ಅವಶ್ಯವಿರುವ ಕೌಶಲಗಳೊಂದಿಗೆ ತಯಾರಿಸುವುದರ ಜತೆಗೆ ಯಶಸ್ವಿ ಕೌಶಲ್ಯದ ಕೀಲಿಯ ಮಾರ್ಗದರ್ಶಿಯಂತಿದೆ.

'ದೇಶದ ಎಲ್ಲ ನಾಗರಿಕರಿಗೆ ಸುಸ್ಥಿರ ಜೀವನ ಖಾತ್ರಿಪಡಿಸಲು ಹಣ ಮತ್ತು ಉದ್ಯೋಗ ಸೃಷ್ಟಿಗೆ ಪುಷ್ಟಿ ನೀಡಲು ಅನ್ವೇಷಣೆ ಆಧಾರಿತ ಉದ್ಯಮ ಸಂಸ್ಕೃತಿ ಪ್ರೋತ್ಸಾಹಿಸಿ ಮತ್ತು ಉನ್ನತ ಗುಣಮಟ್ಟದ ವೇಗದ ಕೌಶಲ್ಯಾಭಿವೃದ್ಧಿ ಸಬಲೀಕರಣದ ವ್ಯವಸ್ಥೆ ದೊಡ್ಡ ಪ್ರಮಾಣದಲ್ಲಿ ನಿರ್ಮಿಸುವ ದೃಷ್ಟಿಕೋನ' ಹೊಂದಿದೆ. ಈ ಉಪಕ್ರಮದಡಿ ತರಬೇತಿ ನಂತರ ಉದ್ಯೋಗಕ್ಕೆ ಆದ್ಯತೆ ನೀಡುವ ಬಹುವಲಯಗಳ ಅನೇಕ ಕೌಶಲ್ಯಾಭಿವೃದ್ಧಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ತಂತ್ರಜ್ಞಾನ ಮತ್ತು ಉದ್ಯಮ ರಂಗದಲ್ಲಿರುವ ಅಡಚಣೆಗಳಿಂದಾಗಿ ಉದ್ಯೋಗ ರಂಗದ ಮೇಲೆ ಪ್ರಭಾವ ಬೀರುತ್ತಿದೆ. ಇಂತಹ ಸನ್ನಿವೇಶದಲ್ಲಿ, ಸುಸ್ಥಿರ ಉದ್ಯೋಗ ಸೃಷ್ಟಿ ಆಗಬೇಕಾದ್ದು ಅತ್ಯಗತ್ಯ. ಬ್ಲ್ಯೂ ಕಾಲರ್ ಅಥವಾ ವೈಟ್ ಕಾಲರ್ ಉದ್ಯೋಗಗಳು ಎನ್ನುವುದಕ್ಕಿಂತ ಹೊಸ ಉದ್ಯೋಗಗಳ ಸೃಷ್ಟಿ ಮಾತ್ರ ಇಂದಿನ ಅಗತ್ಯವಾಗಿದೆ. ಕೃತಕ ಬೌದ್ಧಿಕತೆ(ಆರ್ಟಿಫಿಷಿಯಲ್ ಇಂಟೆಲಿಜೆನ್ಸ್), ಯಾಂತ್ರೀಕರಣ (ಆಟೊಮೇಷನ್), ವಿಷಯಗಳ ಜಾಲ (ಇಂಟರ್‌ನೆಟ್ ಆಫ್ ಥಿಂಗ್ಸ್), ಮಾಹಿತಿ ವಿಶ್ಲೇಷಣೆ(ಡೇಟಾ ಅನಾಲಿಟಿಕ್ಸ್) ಮೊದಲಾದ ಉನ್ನತ ತಂತ್ರಜ್ಞಾನ ಉದ್ಯೋಗಗಳಲ್ಲಿ ಉನ್ನತ ದರ್ಜೆಯ ಕೌಶಲ್ಯ ತರಬೇತಿ ಅಗತ್ಯ. ಕೌಶಲ್ಯಕ್ಕೆ ಹೊಸ ಆಯಾಮ ನೀಡುವ ಕುಶಲತೆಗಳನ್ನು ಸಂಸ್ಥೆಗಳು ಬಯಸುತ್ತವೆ. ಬದಲಾಗುತ್ತಿರುವ ಉದ್ಯೋಗ ವಿನ್ಯಾಸಗಳಿಗೆ ತಕ್ಕಂತೆ ಯುವಜನತೆಯನ್ನು ಸೂಕ್ತವಾಗಿ ತರಬೇತುಗೊಳಿಸುವ ತುರ್ತು ಅಗತ್ಯವಿದೆ. ಭಾರತವನ್ನು ವಿಶ್ವದ ಕೌಶಲ್ಯ ರಾಜಧಾನಿಯಾಗಿಸುವ ನಿಟ್ಟಿನಲ್ಲಿ, ಅಂತಾರಾಷ್ಟ್ರೀಯಮಟ್ಟದಲ್ಲಿ ಪರಿಣತಿ ಹೊಂದಿರಬೇಕಿದೆ.

ರಾಷ್ಟ್ರೀಯ ಔದ್ಯೋಗಿಕ ಮಾನದಂಡ (ಎನ್‌ಓಎಸ್) ರೂಪಿಸಲು ಕೈಗಾರಿಕೆ ಆಧಾರಿತ ವಲಯ ಕೌಶಲ್ಯ ಮಂಡಳಿಗಳನ್ನು ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮ ರಚಿಸಿದೆ. ಕಾರ್ಯಸ್ಥಳದಲ್ಲಿ ಸಾಧಿಸಬೇಕಾದ ಪ್ರದರ್ಶನ ಮಾನದಂಡವನ್ನು ಇವು ಸೂಚಿಸುತ್ತವೆ. ಕೌಶಲ್ಯ ತರಬೇತಿ ಪ್ರಮಾಣಪತ್ರ ನೀಡುವ ಸಂಬಂಧ ಎಲ್ಲ ತರಬೇತುದಾರರು ಈ ಎನ್‌ಓಎಸ್‌ಗಳಿಗೆ ಬದ್ಧವಾಗಿರಬೇಕು.

ಭಾರತಕ್ಕಾಗಿನ ರಾಷ್ಟ್ರೀಯ ಕೌಶಲ್ಯ ವಿದ್ಯಾರ್ಹತೆ ಚೌಕಟ್ಟು (ಎನ್‌ಎಸ್‌ಕ್ಯೂಎಫ್) ಸಮಗ್ರವಾಗಿದ್ದು, ಔದ್ಯೋಗಿಕ ಶಿಕ್ಷಣ ಮತ್ತು ಸಾಮಾನ್ಯ ಶಿಕ್ಷಣದ ನಡುವೆ ಕೊಂಡಿ ಕಲ್ಪಿಸುತ್ತದೆ. ಪ್ರತಿ ಹಂತವನ್ನೂ ಸ್ಪರ್ಧಾತ್ಮಕ ಮಟ್ಟದಿಂದ ವ್ಯಕ್ತಪಡಿಸುವ ಫಲಿತಾಂಶ ಆಧಾರಿತ ವಿಧಾನವನ್ನು ಇದು ಅನುಸರಿಸುತ್ತದೆ. ಯುವಜನತೆಯು ಜಾಗತಿಕ ಪ್ರತಿವಾದಿಗಳೊಂದಿಗೆ ಸ್ಪರ್ಧಾತ್ಮಕಗೊಳಿಸಲು ಇದು ಮುನ್ಸೂಚಕ.

### ಅನ್ವೇಷಣೆ, ಪೋಷಣಾ ಕೇಂದ್ರ(ಇನ್‌ಕ್ಯುಬೇಟರ್ಸ್), ನವೋದ್ಯಮ ಮತ್ತು ಸ್ಟ್ಯಾಂಡಪ್ ಪರಿಸರ

ಭಾರತ ಯಾವಾಗಲೂ ಉನ್ನತ ಅನ್ವೇಷಣೆಗಳ ಮೂಲಸ್ಥಾನವಾಗಿದೆ. ಮಂಗಳ ಗ್ರಹ ತಲುಪಲು ಪ್ರತಿಕಿಲೋಮೀಟರ್‌ಗೆ ಏಳು ರೂಪಾಯಿ ವೆಚ್ಚದಲ್ಲಿ 650 ದಶಲಕ್ಷ ಕಿಲೋಮೀಟರ್ ಕ್ರಮಿಸಿದ ದೇಶೀಯ ನಿರ್ಮಿತ ಮಂಗಳ ಯಾನದ ಯಶಸ್ಸು, ಉತ್ಕೃಷ್ಟ ಮಿತವ್ಯಯ ನಾವಿನ್ಯತೆಯ ಬಗ್ಗೆ

ತಿಳಿಸುತ್ತದೆ. ನವೀನ ತಂತ್ರಜ್ಞಾನ ಮತ್ತು ನಾಯಕತ್ವದಲ್ಲಿ ಭಾರತದ ದೂರದೃಷ್ಟಿಯನ್ನು ಇದು ಪ್ರದರ್ಶಿಸುತ್ತದೆ. 'ವಿವಿಧತೆಯಲ್ಲಿ ನಾವಿನ್ಯತೆಯನ್ನು ಹುಟ್ಟುಹಾಕುತ್ತದೆ', ಮತ್ತು ಭಾರತ ವಿವಿಧತೆ ಮಾಪನದಲ್ಲಿ ವಿಶಿಷ್ಟ ಸ್ಥಾನದಲ್ಲಿದೆ. ವಿವಿಧ ಭೌಗೋಳಿಕ ಭಾಗಗಳಲ್ಲಿನ ನಮ್ಮ ಯುವಜನತೆ ಪ್ರಕಾಶಮಾನ ಕಲ್ಪನೆಗಳನ್ನು ಹೊಂದಿದ್ದು, ಅವರ ಆಲೋಚನೆಗಳಿಗೆ ಬೆಂಬಲ ಮತ್ತು ಸಹಾಯಹಸ್ತ ಬೇಕಿದೆ. ನಾವಿನ್ಯತೆ ರೂಪಿಸುವ ಸಂಸ್ಕೃತಿ ಶಾಲೆಯಿಂದಲೇ ಆರಂಭವಾಗಬೇಕು. ನಮ್ಮ ದೇಶದಲ್ಲಿ ಶೈಕ್ಷಣಿಕ ಸಂಸ್ಥೆಗಳು ಮತ್ತು ಆರಂಭಿಕ ಹಂತದ ಹಣಕಾಸು ಸಂಸ್ಥೆಗಳಿಂದಲೇ ವಿಕಸನಗೊಂಡಿರುವ ಅನೇಕ ಉದ್ಯಮಗಳಿವೆ, ಕೆಲವಕ್ಕೆ ಬೃಹತ್ ಕೈಗಾರಿಕ ಸಂಘಟಿತ ವ್ಯಾಪಾರಿಗಳ ಬೆಂಬಲ ಇದೆ. ಅನ್ವೇಷಣೆ ಉತ್ತೇಜಿಸಲು ಮತ್ತು ಪೋಷಿಸಲು ಶೈಶವ ಉದ್ಯಮಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ (ಡಿಎಸ್‌ಟಿ) ಇಲಾಖೆ ಬೆಂಬಲ ನೀಡುತ್ತಿದೆ. ಅಪೂರ್ವ ಆಲೋಚನೆಗಳು ಹೊರಹೊಮ್ಮುವ ಗ್ರಾಮೀಣ ಯುವ ಅನ್ವೇಷಕರು ಮತ್ತು ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ಯಮಿಗಳತ್ತ ಸಂಶೋಧನೆ ಮತ್ತು ಅಭಿವೃದ್ಧಿ, ಕ್ಷೇತ್ರದೃಷ್ಟಿ ಹರಿಸಬೇಕಾಗಿದೆ. ಡಿಎಸ್‌ಐಆರ್, ಸಿಎಸ್‌ಐಆರ್, ಡಿಎಸ್‌ಟಿ, ಎನ್‌ಎಸ್‌ಟಿಇಡಿಬಿ, ಡಿಬಿಟಿ ಮೊದಲಾದ ಸರ್ಕಾರಿ ಇಲಾಖೆಗಳು ಹಾಗೂ ಅನೇಕ ಖಾಸಗಿ ಸಂಸ್ಥೆಗಳು ಭಾರತದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಅನ್ವೇಷಣೆಗೆ ಹಣಕಾಸು ನೆರವು ನೀಡುತ್ತಿವೆ. ಅನೇಕ ಉದ್ಯಮ ಬಂಡವಾಳ, ಖಾಸಗಿ ಈಕ್ವಿಟಿ ಮತ್ತು ಬಂಡವಾಳದಾರರು ಅನ್ವೇಷಣೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಯುವಜನತೆ ತಂತ್ರಜ್ಞಾನಕ್ಕೆ ಪ್ರವೇಶ ಪಡೆಯುವಂತಾಗಲು, ಹಣಕಾಸು ನೆರವು ಮತ್ತು ಬೆಂಬಲ ನೀಡುತ್ತಿದ್ದಾರೆ.

ಸ್ಟಾರ್ಟ್ ಅಪ್‌ಗಳು ತಮ್ಮ ಕುಟುಂಬ ಮತ್ತು ಸ್ನೇಹಿತರಿಂದ ನೆರವು ಪಡೆಯುವ ಆರಂಭಿಕ ಹಂತದಲ್ಲಿ (ಇನ್ಕ್ಯುಬೇಟರ್‌ಗಳು) ಪೋಷಕ ಕೇಂದ್ರಗಳು ನೆರವಾಗುತ್ತವೆ. ಧನಸಹಾಯದ ಜತೆಗೆ ಕೆಲಸ ನಿರ್ವಹಿಸಲು ಸ್ಥಳ ನೀಡಿ ಸಂಪರ್ಕ ವೇದಿಕೆ ಕಲ್ಪಿಸುವ ಇನ್‌ಕ್ಯುಬೇಟರ್‌ಗಳು ಅತಿ ಮುಖ್ಯ. ಬಂಡವಾಳ ಕ್ರೋಢೀಕರಣ ಮತ್ತು ಬಂಡವಾಳ ಮಾರುಕಟ್ಟೆ ಪ್ರವೇಶಕ್ಕೆ




ನೆರವಾಗುವುದಲ್ಲದೇ ಅವು ಗ್ರಾಹಕರೊಂದಿಗೆ ಸಂಪರ್ಕ ಕಲ್ಪಿಸುವುದು, ಸಲಹೆ ನೀಡಿ, ಮಾರುಕಟ್ಟೆ ಬೇಡಿಕೆಗೆ ತಕ್ಕಂತೆ ತಮ್ಮ ಉತ್ಪನ್ನಗಳು ಮತ್ತು ಪರಿಹಾರಗಳನ್ನು ರೂಢಿಸಿಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡುತ್ತವೆ.

ಭಾರತದಲ್ಲಿ ಬಹುತೇಕ ಇನ್‌ಕ್ಯುಬೇಟರ್‌ಗಳು ಶೈಕ್ಷಣಿಕ ಸಂಸ್ಥೆಗಳಲ್ಲಿದ್ದು, ಅವುಗಳ ಪೈಕಿ 118 ಸ್ಟಾರ್ಟ್ ಅಪ್ ಯೋಜನೆಯಡಿ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಮಾನ್ಯತೆ ಪಡೆದಿವೆ. ನವೋದ್ಯಮ (ಸ್ಟಾರ್ಟ್ ಅಪ್) ಯುವಕರ ಒಲವಿನ ಆಯ್ಕೆ. ಭಾರತದಲ್ಲಿ ಹತ್ತು ಸಾವಿರಕ್ಕೂ ಅಧಿಕ ನವೋದ್ಯಮಗಳಿದ್ದು 2020ರ ವೇಳೆಗೆ ಅದು 11,500 ದಾಟುವ ನಿರೀಕ್ಷೆ ಇದೆ. ವಿಶ್ವದಲ್ಲಿ ಮೂರನೇ ಬೃಹತ್ ನವೋದ್ಯಮ ವ್ಯವಸ್ಥೆ ಭಾರತದಲ್ಲಿದೆ. ಶಾಲೆ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಇ–ಕ್ಲಬ್ ಮತ್ತು ಸಂಘಗಳನ್ನು ರಚಿಸಿದ್ದು ಮೊದಲಾದವು ಸಹಕಾರ ಸ್ಥಳಗಳಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ಅನ್ವೇಷಣಾ ಸಂಸ್ಕೃತಿ ಯುವ ಉದ್ಯಮಿಗಳಲ್ಲಿ ವ್ಯಾಪಕವಾಗಿದೆ. ಉದ್ಯಮದ ಸ್ಫೂರ್ತಿ ಸಡಿಸಿಲಿ, ವ್ಯಾಪಾರ ಕುಶಾಗ್ರಮತಿಯನ್ನು ಬೆಳೆಸಿಕೊಳ್ಳಲು ಈ ಕ್ಲಬ್‌ಗಳು ಮತ್ತು ಸಹಸಂಘಗಳು ನೆರವಾಗುತ್ತವೆ. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನಿಧಿ (ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ–ಸಿಎಸ್‌ಆರ್) ಕೈಗಾರಿಕೆ ಮತ್ತು ತಂತ್ರಜ್ಞಾನ ವ್ಯಾಪಾರ ಪೋಷಕ ಕೇಂದ್ರಗಳ ನಡುವೆ ಸಂಪರ್ಕ ಉತ್ತೇಜಿಸುವ ಸಾಮರ್ಥ್ಯ ಹೊಂದಿದೆ. ಭಾರತೀಯ ಕಂಪೆನಿಗಳ ಕಾಯ್ದೆ ಇಂಡಿಯನ್ ಕಂಪನೀಸ್ ಆ್ಯಕ್ಟ್ 2013ರ ಸೆಕ್ಷನ್ 135ರ ಷೆಡ್ಯೂಲ್ ಗಿಖಿಖ ರ ಅನ್ವಯ ಭಾರತೀಯ ಕಂಪೆನಿಗಳು ಇನ್‌ಕ್ಯುಬೇಟರ್‌ಗಳ ಅಭಿವೃದ್ಧಿಗೆ ತಮ್ಮ ಸಿಎಸ್‌ಆರ್‌ನ ಶೇಕಡ 2 ರಷ್ಟನ್ನು ನೀಡಬಹುದಾಗಿದೆ.

ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆ ಮಹಿಳೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಉದ್ಯಮ ಉತ್ತೇಜನಕ್ಕೆ ಮೀಸಲಾಗಿದೆ. ಈ ಯೋಜನೆಯಡಿ ಮಹಿಳೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯಮಿಗಳಿಗೆ ಏಳು ವರ್ಷದೊಳಗೆ ಮರುಪಾವತಿಸಬೇಕಾದ ಒಂದು ಲಕ್ಷ ರೂಪಾಯಿಯಿಂದ ಒಂದು ಕೋಟಿ ರೂಪಾಯಿವರೆಗೆ ಸಾಲ ನೀಡಲಾಗುವುದು. ಸೇವೆ, ಇ–ಮಾರುಕಟ್ಟೆ ಮತ್ತು ಆನ್‌ಲೈನ್ ವೇದಿಕೆ ನೊಂದಣಿ ಮಾಡುವವರಿಗೆ ಈ ಯೋಜನೆ.

**ಯುವ ಸಮುದಾಯದ ಶಕ್ತಿ ಅನಾವರಣ**

ಯುವ ಸಮುದಾಯದ ಆಶೋತ್ತರಗಳನ್ನು ಈಡೇರಿಸುವ ಹಾದಿಯಲ್ಲಿ ಭಾರತ ಸಾಗಿದೆ. ಯುವಕರ ಮಹತ್ವಾಕಾಂಕ್ಷಿ ಶಕ್ತಿ ಮತ್ತು ಉತ್ತಮ ಗುಣಮಟ್ಟದ ಜೀವನದ ಬಯಕೆಯನ್ನು ಅಭಿವೃದ್ಧಿ ಪಡಿಸುವುದು ಭಾರತದ ಆಶಯವಾಗಿದೆ. ಮುಂದಿನ 20 ವರ್ಷಗಳಲ್ಲಿ ಕೈಗಾರಿಕೆ ಮತ್ತು ಆರ್ಥಿಕ ರಂಗದ ಕಾರ್ಮಿಕ ಪಡೆ ಶೇಕಡ 4 ರಷ್ಟು ಕುಸಿಯಲಿದೆ, ಜಾಗತಿಕ ತಯಾರಿಕಾ ವಲಯ ಮತ್ತು ಕೌಶಲ್ಯ ರಾಜಧಾನಿಯನ್ನಾಗಿಸುವ ಭಾರತ ಸರ್ಕಾರದ ಪ್ರಶಂಸನೀಯ ಉಪಕ್ರಮಗಳಲ್ಲಿ ಯುವಕರ ಸಬಲೀಕರಣ ಮತ್ತು ಸಾಮರ್ಥ್ಯ ಬಲವರ್ಧನೆ ಪ್ರಮುಖವಾಗಿದೆ. ನಾವೀನ್ಯ ಮನಸ್ಥಿತಿಯನ್ನು ಪೋಷಿಸುವುದರೊಂದಿಗೆ ಶಿಕ್ಷಣದಿಂದ ಉದ್ಯೋಗಕ್ಕೆ ಯುವಕರನ್ನು ಪರಿವರ್ತಿಸಲು ಸ್ಕಿಲ್ ಇಂಡಿಯಾ ಮತ್ತು ಸ್ಟಾರ್ಟಪ್ ಇಂಡಿಯಾ ಅಭಿಯಾನಗಳ ದಾರಿ ಸುಲಭವಾಗಿಸುತ್ತವೆ.

ಕೌಶಲ್ಯಗಳ ವೈಭವೀಕರಣ ಮತ್ತು ಯುವಕರ ಮನಸ್ಥಿತಿಯನ್ನು ಕೆಲಸ ನೀಡುವತ್ತ ಬದಲಿಸುವುದು ಸುಸ್ಥಿರ ಬೆಳವಣಿಗೆಗೆ ಪ್ರಮುಖ. ಯುವಕರಲ್ಲಿ ಉದ್ಯಮಶೀಲತೆ ಮೂಲಭೂತ ಅಗತ್ಯ. ಇದಕ್ಕೆ ಸುಸ್ಥಿರ ಜಂಟಿ ಪ್ರಯತ್ನ ಮತ್ತು ದೂರದೃಷ್ಟಿ ನಾಯಕತ್ವ ಅಗತ್ಯ. ಕೇವಲ ಸರ್ಕಾರವಲ್ಲದೆ, ಖಾಸಗಿ ವಲಯ ಮತ್ತು ಶಿಕ್ಷಣ ಜತೆಜತೆಯಲ್ಲಿ ಕಾರ್ಯ ನಿರ್ವಹಿಸಿ ಜಾಗತಿಕ ಸವಾಲುಗಳನ್ನು ಎದುರಿಸಲು ವಿಶ್ವಾಸಯುತ, ಪ್ರತಿಭಾಶೀಲ 'ನವ ಭಾರತ'ದ ನಿರ್ಮಾಣದ ದಾರಿಯಲ್ಲಿ ಮೇಲೇರಬೇಕು. ❑

ವಿಶೇಷ ಲೇಖನ



# ಸ್ವಚ್ಛ ಭಾರತ; ಪ್ರತಿಯೊಬ್ಬರ ಕರ್ತವ್ಯ

* ಪರಮೇಶ್ವರನ್ ಅಯ್ಯರ್



**ಪ್ರಧಾನಮಂತ್ರಿಗಳ ನಾಯಕತ್ವದಲ್ಲಿ, ರಾಜಕೀಯ ನಾಯಕರು, ಸರ್ಕಾರಿ ಅಧಿಕಾರಿ ಸಿಬ್ಬಂದಿಗಳು ಮತ್ತು ಅತ್ಯಂತ ಮುಖ್ಯವಾಗಿ, ಸರಪಂಚರಂತಹ (ವಿಶೇಷವಾಗಿ ಮಹಿಳಾ ಸರಪಂಚರು) ಬುಡಮಟ್ಟದ ನಾಯಕರ ಬೆಂಬಲದಿಂದ ಸ್ವಚ್ಛ ಭಾರತ್ ಮಿಷನ್ ಜನ ಆಂದೋಲನವು ಇಡಿ ದೇಶದಲ್ಲಿ ಯಶಸ್ಸನ್ನು ಕಾಣುತ್ತದೆಂದು ನಿಚ್ಚಳವಾಗಿ ಕಾಣಿಸುತ್ತಿದೆ.**

ಸ್ವಚ್ಛ ಭಾರತ ಮಿಷನ್ನಿನ (ಎಸ್‌ಬಿಎಮ್) ಅನುಷ್ಠಾನದಲ್ಲಿ ಬಹಳಷ್ಟು ಸಾಧನೆಯಾಗಿದೆ ಮತ್ತು ಗಮನಾರ್ಹ ಪ್ರಗತಿ ಕಂಡು ಬಂದಿದೆ. ದೆಹಲಿ ಕೆಂಪು ಕೋಟೆಯ ಬತೇರಿಯಿಂದ ಗೌರವಾನ್ವಿತ ಪ್ರಧಾನಮಂತ್ರಿಯವರು ಮೊದಲ ಬಾರಿ ಮಾತನಾಡಿ ಯೋಜನೆಯ ಬಗ್ಗೆ ತಮ್ಮ ವಿಚಾರವನ್ನು ಮುಂದಿಟ್ಟ ದಿಕ್ಕಿನಲ್ಲಿಯೇ ಈಗ ಸ್ವಚ್ಛ ಭಾರತ ಮಿಷನ್ ಒಂದು ಜನಾಂದೋಲನವಾಗಿ ಪರಿವರ್ತನೆಯಾಗುತ್ತಲಿದೆ.

ಈ ಕಾರ್ಯಕ್ರಮವು ಅಕ್ಟೋಬರ್ 2014ರಲ್ಲಿ ಆರಂಭವಾಗಿದ್ದು ಇಲ್ಲಿಯವರೆಗೆ ಗ್ರಾಮೀಣ ಭಾರತದಲ್ಲಿ ನೈರ್ಮಲ್ಯೀಕರಣ ವ್ಯಾಪ್ತಿಯು 42%ರಿಂದ 63%ರವರೆಗೆ ಏರಿದೆ. ಇಂದು ಗ್ರಾಮೀಣ ಭಾರತದಲ್ಲಿ ಬಯಲಿನಲ್ಲಿ ಮಲವಿಸರ್ಜನೆ ಮಾಡುವವರ ಸಂಖ್ಯೆಯು 550 ಮಿಲಿಯನ್ನಿನಿಂದ 350 ಮಿಲಿಯನ್‌ಗೆ ಇಳಿದಿದೆ. ದೇಶದ 190,000ಹಳ್ಳಿಗಳು, 130 ಜಿಲ್ಲೆಗಳು ಮತ್ತು ಮೂರು ರಾಜ್ಯಗಳು ಬಯಲು ಮಲವಿಸರ್ಜನೆ ಮುಕ್ತ ಸ್ಥಳವಾಗಿವೆ. ಅಕ್ಟೋಬರ್ 2, 2019ರ ವೇಳೆಗೆ ಭಾರತವು ಬಯಲು ವಿಸರ್ಜನೆ ಮುಕ್ತ ದೇಶವಾಗುವ ಹಾದಿಯಲ್ಲಿ ಖಚಿತವಾಗಿ ಮುನ್ನಡೆಯುತ್ತಿದೆ.

ಹಲವಾರು ಕಾರಣಗಳಿಂದಾಗಿ ನೈರ್ಮಲ್ಯ ಕಾರ್ಯಕ್ರಮಕ್ಕೆ ಆದ್ಯತೆ ನೀಡುವುದು ಬಹು ಮುಖ್ಯ. ಸ್ವಚ್ಛತೆ ಹಾಗೂ ನೈರ್ಮಲ್ಯತೆ ಅಭಾವದಿಂದಾಗಿ ಪ್ರಮುಖವಾಗಿ ಐದು ವರ್ಷಕ್ಕಿಂತ ಕೆಳಗಿನ ಮಕ್ಕಳಲ್ಲಿ ಭೇದಿ, ಕುಂಠಿತ ಬೆಳವಣಿಗೆ ಕಂಡು ಬರುತ್ತಿದ್ದು ಇದು ತಡೆಯಲು ಸಾಧ್ಯವಾಗುವ ಮಕ್ಕಳ ಸಾವು ಹೆಚ್ಚಾಗುವುದಕ್ಕೆ ಕಾರಣವಾಗುತ್ತಿದೆ.

ನೈರ್ಮಲ್ಯ ನಿರ್ವಹಣೆಯು ಮಹಿಳೆಯರ ಸುರಕ್ಷತೆ ಹಾಗೂ ಘನತೆಯನ್ನು ಕಾಪಾಡಲು ಕೂಡ ಬಹುಮುಖ್ಯ. ಇಂದು ಭಾರತವು ಒಂದು ಆರ್ಥಿಕ ಬೃಹತ್ ಶಕ್ತಿಯಾಗುವ ನಿಟ್ಟಿನಲ್ಲಿ ಅಸಾಧಾರಣ ಪ್ರಗತಿಯನ್ನು ಸಾಧಿಸುತ್ತಿರುವಾಗ ಬಯಲಿನಲ್ಲಿ ಮಲವಿಸರ್ಜನೆ ಮಾಡುವ ಅಭ್ಯಾಸವನ್ನು ಸಂಪೂರ್ಣವಾಗಿ ಕೊನೆಗೊಳಿಸುವುದು ಅತ್ಯಗತ್ಯ.

ಹಿಂದಿನ ನೈರ್ಮಲ್ಯ ಕಾರ್ಯಕ್ರಮಗಳ ಬದಲಿಗೆ ಈಗಿನ ಸ್ವಚ್ಛ ಭಾರತ ಮಿಷನ್ ಕೇವಲ ಶೌಚಾಲಯ ನಿರ್ಮಾಣ ಕಾರ್ಯಕ್ರಮವಾಗಿ ಉಳಿದಿಲ್ಲ. ಇದು ಜನರ ಅಭ್ಯಾಸ ಬದಲಾವಣೆಯ ಸಮುದಾಯ ಚಳವಳಿಯಾಗಿ ಬೆಳೆಯುತ್ತಿದೆ.

ಒಂದು ರಸ್ತೆಯನ್ನು ನಿರ್ಮಿಸುವುದು, ಸೇತುವೆಯನ್ನು ಕಟ್ಟುವುದು ಅಥವಾ ವಿಮಾನ ನಿಲ್ದಾಣವನ್ನು ನಿರ್ಮಿಸುವುದು ಬಹಳ ಕಷ್ಟವಲ್ಲ, ಆದರೆ ತಮ್ಮ ಇಡಿ ಜೀವಿತಕಾಲದಲ್ಲಿ ಒಗ್ಗಿ ಕೊಂಡಿರುವಂತಹ ಬಯಲಿನಲ್ಲಿ ವಿಸರ್ಜನೆ ಮಾಡುವಂತಹ ಒಂದು ಅಭ್ಯಾಸವನ್ನು ನಿಲ್ಲಿಸಲು ದೀರ್ಘಕಾಲೀನ ವರ್ತನೆಯಲ್ಲಿ ಬದಲಾವಣೆ ತರಲು ಮತ್ತು ಶೌಚಾಲಯಗಳನ್ನು ಬಳಸಲು ಪ್ರೇರೇಪಿಸುವುದು ಬಹಳ ಕಷ್ಟವಾದ ಕೆಲಸ. ಇದಲ್ಲದೆ ಭಾರತದಂತಹ ದೊಡ್ಡ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಇಂತಹ ಕಾರ್ಯ ನಿರ್ವಹಿಸುವುದು ಒಂದು ಬೃಹತ್ತಾದ ಕೆಲಸವೇ ಆಗಿದೆ. ಸಮೂಹ ಮಾಧ್ಯಮಗಳ ಪ್ರಚಾರಗಳು ಸಹಾಯಕಾರಿಯಾದರೂ ಒಂದು ಸಮುದಾಯದ ವರ್ತನೆಯಲ್ಲಿ ಬದಲಾವಣೆಯನ್ನು ತರಬೇಕೆಂದರೆ ಹಳ್ಳಿಗಳು

* ಕಾರ್ಯದರ್ಶಿ, ಕುಡಿಯುವ ನೀರು ಮತ್ತು ಶೌಚ ಸೌಲಭ್ಯ ಇಲಾಖೆ, ದೆಹಲಿ. E-mail : param.iyer@gov.in

ಮತ್ತು ಕುಟುಂಬಗಳಲ್ಲಿ ಶೌಚಾಲಯಗಳ ಮತ್ತು ಶುಚಿತ್ವದ ಬೇಡಿಕೆಯನ್ನು ಉದ್ದೀಪಿಸಲು, ಅಲ್ಲಿನ ಜನರೊಂದಿಗೆ ಅಂತರ ವೈಯಕ್ತಿಕ ಸಂಪರ್ಕವನ್ನು ಹೊಂದಿರುವ ಬುಡಮಟ್ಟದ ಹಂತದಲ್ಲಿ ಉತ್ತಮ ತರಬೇತಿ ಹೊಂದಿದವರು ಮತ್ತು ಪ್ರಲೋಭನೆ ಪ್ರೇರಿತರನ್ನು ಹೊಂದಿರುವುದು ಬಹಳ ಮುಖ್ಯ.

ದೇಶದಾದ್ಯಂತ ವಿವಿಧ ರಾಜ್ಯಗಳು ಮತ್ತು ಜಿಲ್ಲೆಗಳಲ್ಲಿ ಇಂತಹ ಪ್ರೇರಕರ ಸಂಖ್ಯೆಯು ತೀವ್ರವಾಗಿ ಹೆಚ್ಚುತ್ತಿದೆ. ಆದರೆ ಇದು ಇನ್ನೂ ತೀವ್ರಗತಿಯಲ್ಲಿ ಹೆಚ್ಚಬೇಕು. ಏಕೆಂದರೆ ಯೋಜನೆಯ ಪ್ರಕಾರ ದೇಶದಲ್ಲಿ ಸರಾಸರಿ ಒಂದು ಹಳ್ಳಿಗೆ ಒಬ್ಬರಂತೆ ಐದು ಲಕ್ಷ ಪ್ರೇರಕ ಕಾರ್ಯಕರ್ತರ ಅಗತ್ಯವಿದೆ.

ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯವು ಸ್ವಚ್ಛ ಭಾರತ್ ಮಿಷನ್ನಿನ ಅನುಷ್ಠಾನಕ್ಕೆ ಎಲ್ಲ ರಾಜ್ಯಗಳಿಗೆ ಸಾಮರ್ಥ್ಯ ರಚನೆ, ಮಾನವ ಸಂಪನ್ಮೂಲಗಳು, ವರ್ತನೆ ಬದಲಾವಣೆ ಸಂಪರ್ಕ ಕಾರ್ಯಕ್ರಮ, ಜ್ಞಾನ ಹಂಚಿಕೆ ಮತ್ತು ನಿಯಂತ್ರಣ ಹಾಗೂ ಮೌಲ್ಯೀಕರಣಗಳ ಮೂಲಕ ಬೆಂಬಲ ನೀಡುತ್ತಿದೆ. ಸ್ವಚ್ಛ ಭಾರತ ಮಿಷನ್ ಜಿಲ್ಲೆಗಳು ಮತ್ತು ರಾಜ್ಯಗಳಿಗೆ ಅತ್ಯುತ್ತಮವಾದ ಅಭ್ಯಾಸಗಳನ್ನು ಹಂಚಿಕೊಳ್ಳಲು ಸ್ವಚ್ಛ ಭಾರತ್ ಮಿಷನ್ನಿನ ಸ್ವಚ್ಛ ಸಂಗ್ರಹ್ ಜ್ಞಾನಜಾಲ ರೂಪಿಸಿದೆ. ಮುಂದೊಡಗುಗಳು ಮತ್ತು ಹಲವಾರು ಸ್ಥಳಗಳಲ್ಲಿ ನೂರಾರು ಪ್ರೇರಕರ ತರಬೇತಿಗೆಂದು ಆನ್ ಲೈನ್ ತರಗತಿಗಳನ್ನು ನಡೆಸುತ್ತಿರುವುದು ಈ ಕಾರ್ಯಕ್ರಮದಲ್ಲಿ ವ್ಯವಸ್ಥಿತವಾಗಿ ತಂತ್ರಜ್ಞಾನದ ಅಳವಡಿಕೆ ಮಾಡಿರುವುದರ ನಿದರ್ಶನಗಳಾಗಿವೆ.

ಇದರೊಂದಿಗೆ ಎಲ್ಲ ಪಾಲುದಾರರನ್ನು ಒಟ್ಟಿಗೆ ಸೇರಿಸಲು, ಪರಸ್ಪರ ಕಲಿಯಲು ಮತ್ತು ಪ್ರೇರೇಪಿಸಲು ಹಲವಾರು ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಶಿಬಿರಗಳು ಮತ್ತು ಕಾರ್ಯಕ್ರಮಗಳನ್ನು ನಿಯತವಾಗಿ ಆಯೋಜಿಸಲಾಗಿದೆ.






ಸರಪಂಚರಂತಹ ಬುಡಮಟ್ಟದ ನಾಯಕರು ಅದರಲ್ಲೂ ವಿಶೇಷವಾಗಿ ಮಹಿಳೆಯರು ಈ ಯೋಜನೆಯ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಬಹುಮುಖ್ಯ ಪಾತ್ರವನ್ನು ವಹಿಸುತ್ತಿದ್ದಾರೆ. ಇತ್ತೀಚೆಗೆ ಮಾರ್ಚ್ 8 ರ ಮಹಿಳಾ ದಿನದ ಅಂಗವಾಗಿ ಆಯೋಜಿಸಿದ ಸ್ವಚ್ಛ ಶಕ್ತಿ ಕಾರ್ಯಕ್ರಮದಲ್ಲಿ ಸ್ವಚ್ಛ ಭಾರತ್ ಮಿಷನ್‌ನಲ್ಲಿ ತಮ್ಮ ಯಶಸ್ಸನ್ನು ಆಚರಿಸಲು ಭಾರತದ 6000 ಮಹಿಳಾ ಸರಪಂಚರನ್ನು ಒಟ್ಟಿಗೆ ಸೇರಿಸಲಾಯಿತು.

ಗಾಂಧಿನಗರದಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿಗಳು ಸ್ವಚ್ಛ ಭಾರತ್ ಮಿಷನ್‌ನಲ್ಲಿ ಹಾಗೂ ಇತರೆ ಯೋಜನೆಗಳಾದ ಬೇಟಿ ಬಚಾವೊ, ಬೇಟಿ ಪಡಾವೊಗಳಂತಹ ಕಾರ್ಯಕ್ರಮಗಳಲ್ಲಿ ಮಹಿಳಾ ಸರಪಂಚರ ನಾಯಕತ್ವದ ಪಾತ್ರವನ್ನು ಶ್ಲಾಘಿಸಿದರು. ತಮ್ಮ ಸಮುದಾಯಗಳ ಸದಸ್ಯರಿಗೆ ಪ್ರೇರಣೆಯಾದ. ಸ್ವಚ್ಛತಾ ನಾಯಕಿಯರಾದ ಮಹಿಳೆಯರಿಗೆ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಸ್ವಚ್ಛ ಭಾರತ್ ಮಿಷನನ್ನು ಜನಾಂದೋಳನವನ್ನಾಗಿ ಮಾಡುವುದರ ಜೊತೆಗೆ, ಮಲವಿಸರ್ಜನೆ ತಂತ್ರಜ್ಞಾನವನ್ನು ಮತ್ತು ಅಭ್ಯಾಸಗಳನ್ನು ಸಂಭವನೀಯವಾಗಿ ಮಾಡುವುದು ಬಹುಮುಖ್ಯ. ಇದಕ್ಕೆ ಒದಗುವ ಖರ್ಚು, ನಿರಂತರತೆ ಹಾಗೂ ಮರುಬಳಕೆಗೆ ಸಂಬಂಧಿಸಿದಂತೆ ಎರಡು ಗುಂಡಿ ನಮೂನೆಯು ಗ್ರಾಮೀಣ ಪ್ರದೇಶಗಳಿಗೆ ಅತ್ಯಂತ ಸೂಕ್ತ ತಂತ್ರಜ್ಞಾನ. ಈ ನಮೂನೆಯು ಗ್ರಾಮೀಣ ಭಾರತದಲ್ಲಿ ಪ್ರಬಲವಾಗಿದ್ದು, ಬಹಳಷ್ಟು ಕಡೆಗಳಲ್ಲಿ ಪರಿಣಾಮಕಾರಿಯಾಗಿದೆ. ಗ್ರಾಮೀಣ ಕುಟುಂಬಗಳು ಇದನ್ನು ಅಳವಡಿಸಿಕೊಳ್ಳುವಂತೆ ಮನವೊಲಿಸುವ ಹೆಚ್ಚು ಪ್ರಯತ್ನಗಳು ಮತ್ತು ಮಾರಾಟಗಾರಿಕೆ ತಂತ್ರಗಳು ಬೇಕಾಗಿವೆ.

ಕುಟುಂಬದವರೇ ಸ್ವತಃ ಎರಡು ಶೌಚಾಲಯ ಗುಂಡಿಗಳ ಪೈಕಿ (ಅದು ಮುಚ್ಚಿದ್ದಾಗ) ಒಂದನ್ನು ಬರಿದು ಮಾಡುವ ವಿಧಾನವು ಬಹಳ ಸರಳ, ಸುರಕ್ಷಿತ ಮತ್ತು ಪರಿಸರಪರ ಕಾರ್ಯ. ಇದರಿಂದ ಉಂಟಾಗುವ ಸಾವಯವ ಗೊಬ್ಬರವು ಕೃಷಿ ಕಾರ್ಯಗಳಿಗೆ ಅತ್ಯುತ್ತಮ.

ಇತರರಿಗೆ ಮಾದರಿಯಾಗಲು ಕಾಲಕಾಲಕ್ಕೆ ಹಿರಿಯ ಅಧಿಕಾರಿಗಳು ಮತ್ತು ಗಣ್ಯ ವ್ಯಕ್ತಿಗಳು ತಾವೇ ಶೌಚಾಲಯ ಗುಂಡಿಯನ್ನು ಬರಿದು ಮಾಡಿದರೆ, ಗ್ರಾಮೀಣ ಕುಟುಂಬಗಳು ತಾವೇ ಖುದ್ದಾಗಿ ಇದನ್ನು ಮಾಡುವ ಪ್ರಯತ್ನಗಳಿಗೆ ಮತ್ತು ಎರಡು ಗುಂಡಿ ತಂತ್ರಜ್ಞಾನವನ್ನು ಶೀಘ್ರವಾಗಿ ಅಂಗೀಕರಿಸುವುದಕ್ಕೆ ಪ್ರೇರಣೆ ಸಿಗುವಂತಾಗುತ್ತದೆ. ವರ್ತನೆ ಬದಲಾವಣೆ ಮತ್ತು ಸೂಕ್ತ ತಂತ್ರಜ್ಞಾನ ಅಭ್ಯಾಸಗಳಿಗೂ ಮೀರಿ, ಸ್ವಚ್ಛತಾ ಕಾರ್ಯಕ್ರಮವು ಎಲ್ಲರ ಕೆಲಸವಾಗಬೇಕಾಗಿರುವುದು ಬಹಳ ಜರೂರು. ಈ ನಿಟ್ಟಿನಲ್ಲಿ ಖಾಸಗಿ ವಲಯವನ್ನೂ ಸೇರಿದಂತೆ ಎಲ್ಲ ವಲಯಗಳು ತಮ್ಮ ಪ್ರಮುಖ ಕಾರ್ಯದಲ್ಲಿ ನೈರ್ಮಲ್ಯ ಕಾರ್ಯಕ್ರಮವನ್ನು ಸೇರಿಸಿಕೊಂಡು ಹೆಚ್ಚು ಹೆಚ್ಚಾಗಿ ನಿರತರಾಗುತ್ತಿವೆ. ಈ ನಿಟ್ಟಿನಲ್ಲಿ ಕಾರ್ಯ ನಿರತವಾಗಲು ಖಾಸಗಿ ವಲಯವು ಮುನ್ನೆಜ್ಜೆ ಹಾಕುತ್ತಿದೆ. ಉದಾಹರಣೆಗೆ, ಸ್ವಚ್ಛ ಭಾರತ್ ಮಿಷನ್‌ನಲ್ಲಿ ಕಲೆಕ್ಟರುಗಳಿಗೆ ಬೆಂಬಲ ನೀಡುವ ಸಲುವಾಗಿ ಭಾರತದ ಒಂದು ಜಿಲ್ಲೆ ಒಬ್ಬರಂತೆ 600 ಯುವ ವೃತ್ತಿಪರರ ನೇಮಕಾತಿ ಮಾಡಲು ಮತ್ತು ಹಣಕಾಸು ಒದಗಿಸಲು ಟಾಟಾ ಟ್ರಸ್ಟ್ ಮುಂದೆ ಬಂದಿದೆ.

ಪ್ರಧಾನ ಮಂತ್ರಿಗಳ ಮುಂದೊಡಗಿನ ಫಲವಾಗಿ, ಸಾರ್ವಜನಿಕ ವಲಯದಲ್ಲಿ, "ಸ್ವಚ್ಛತಾ ಪಾಕ್ಷಿಕವನ್ನು" ಆಚರಿಸುವುದರೊಂದಿಗೆ, ಪ್ರತಿಯೊಂದು ಕೇಂದ್ರ ಸಚಿವಾಲಯವು ತನ್ನ ಮುಖ್ಯ ಕಾರ್ಯದಲ್ಲಿ ನೈರ್ಮಲ್ಯವನ್ನು ಸಮಗ್ರೀಕರಿಸಿಕೊಳ್ಳಲಿರುವ ಸ್ವಚ್ಛತಾ ಕ್ರಿಯಾ



ಯೋಜನೆಯನ್ನು ಸಿದ್ಧ ಪಡಿಸಿದೆ. ಇದಕ್ಕಾಗಿ ಬೇಕಾಗುವ ಹಣಕಾಸನ್ನು ಸೇರಿಸುವ ಬಜೆಟ್ ಕೂಡ ಈ ಯೋಜನೆಯಲ್ಲಿ ಸೇರಿದೆ.

ಸ್ವಚ್ಛತಾ ಸಂಬಂಧಿ ಚಟುವಟಿಕೆಗಳಿಗಾಗಿ 2017–18ರ ವರ್ಷದಲ್ಲಿ ಎಲ್ಲ ಸಚಿವಾಲಯಗಳು ಅಂದಾಜಾಗಿ 500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುವರ್ಣ ದೇವಾಲಯ ಮತ್ತು ತಿರುಪತಿ ದೇವಸ್ಥಾನಗಳಂತಹ ಖ್ಯಾತ ಸ್ಥಳಗಳ ಮತ್ತು ಗಂಗಾ ದಡದಲ್ಲಿ ಬರುವ ಗ್ರಾಮ ಪಂಚಾಯತ್‌ಗಳ ಶುಚೀಕರಣ ಕಾರ್ಯಕ್ರಮಗಳು ಇತರೆ ವಲಯ ಮತ್ತು ಸ್ಥಳಗಳಲ್ಲೂ ಕೂಡ ಸ್ವಚ್ಛತಾ ಕಾರ್ಯಕ್ಕೆ ಗಮನ ಕೇಂದ್ರೀಕರಿಸಲಾಗಿದೆಯೆಂಬುದಕ್ಕೆ ಸಾಕ್ಷಿಗಳು. ಸ್ವಚ್ ಭಾರತ್ ಮಿಷನ್‌ನ ಅತ್ಯಂತ ನಿರ್ಣಾಯಕ ಅಂಶವೆಂದರೆ ಪರಿಶೀಲನೆ ಮತ್ತು ಫಲಿತಾಂಶಗಳ ನಿರಂತರತೆಯನ್ನು ಖಚಿತಗೊಳಿಸುವುದು. ವಿಶೇಷವಾಗಿ ಕಾರ್ಯಕ್ರಮದ ವಿಶ್ವಾಸಾರ್ಹತೆಗೆ ಇದು ಬಹಳ ಮುಖ್ಯ, ಈಗಾಗಲೇ ಜಿಲ್ಲಾ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ತೃತೀಯ ಪಕ್ಷವು ಪರಿಶೀಲನೆಯನ್ನು ನಡೆಸುವ ಮೂಲಕ ಬಹುಸ್ತರ ಪ್ರಕ್ರಿಯೆಯನ್ನು ಅನುಸರಿಸಲಾಗಿದೆ.

ಈ ಪ್ರಯತ್ನಗಳನ್ನು ಬಲಪಡಿಸಬೇಕು ಮತ್ತು ಮುಂದಿನ ದಿನಗಳಲ್ಲಿ ಅವುಗಳನ್ನು ಮುಖ್ಯವಾಹಿನಿಗೆ ತರಬೇಕು. ಇದರೊಂದಿಗೆ, ಬಯಲು ವಿಸರ್ಜನೆ ಮುಕ್ತ ಸ್ಥಿತಿಯನ್ನು ಮುಂದುವರೆಸಿ ಉಳಿಸುವುದೂ ಕೂಡ ಬಹಳ ಮುಖ್ಯ. ಏಕೆಂದರೆ ಹಿಂದಿನ ಸರ್ಕಾರದ ಕಾರ್ಯಕ್ರಮದಂತೆ ಹಲವಾರು ಕಾರ್ಯಕ್ರಮಗಳಲ್ಲಿ ಒಂದು ಎಂಬಂತೆ ಇದನ್ನು ಪರಿಗಣಿಸಿಲ್ಲ. ಬಯಲು ವಿಸರ್ಜನೆ ಮುಕ್ತ ಸ್ಥಿತಿಯನ್ನು ಸಾಧಿಸುವುದು ಒಂದು ಅಂಶವಾದರೆ, ಸ್ಥಳೀಯ ಯಂತ್ರಗಾರಿಕೆ ಮೂಲಕ ಮತ್ತು ಪ್ರಲೋಭಗಳನ್ನು ನೀಡುವ ಮೂಲಕ ಅದನ್ನು ಉಳಿಸಿಕೊಂಡು ನಿರ್ವಹಿಸುವುದು ಬಹಳ ಮುಖ್ಯ. ರಾಜ್ಯಗಳ ಜೊತೆಗೆ ಸೇರಿ ಸಚಿವಾಲಯ ಒಂದು ನಿರಂತರತೆ ಕಾರ್ಯ ಸೂಚಿಯನ್ನು ಅಭಿವೃದ್ಧಿಗೊಳಿಸಿದೆ. ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಾಗಿರುವುದು ಅನಿವಾರ್ಯ. ಕುಟುಂಬ ಮಟ್ಟದಲ್ಲಿ ಇದರ ಪ್ರಗತಿಯ ಬಗ್ಗೆ ನಿಗಾ ಇಡುವ ಒಂದು ಬಲಿಷ್ಠವಾದ ಎಂಐಎಸ್ ಅನ್ನು ಕೂಡ ಸಚಿವಾಲಯವು ಹೊಂದಿದೆ. ಸ್ವಚ್ಛ್ ಆಪ್ ಜೊತೆಗೆ ಈ ಎಂಐಎಸ್ ಈಗ ಸಾರ್ವಜನಿಕ ಕ್ಷೇತ್ರದಲ್ಲಿದೆ. ಪರಿಣಾಮಕಾರಿಯಾದ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕೂಡ ಮಿಷನ್ನಿನ ಒಂದು ಬಹಳ ಮುಖ್ಯ ಭಾಗ. ಈಗಾಗಲೇ ದೇಶದ ಹಲವಾರು ಹಳ್ಳಿಗಳಲ್ಲಿ ಪರಿಣಾಮಕಾರಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕುರಿತ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ಇಲ್ಲಿ ಈಗಾಗಲೇ ಬಯಲು ವಿಸರ್ಜನೆ ಮುಕ್ತ ಸ್ಥಾನವನ್ನು ಗಳಿಸಿರುವ ಪ್ರದೇಶಗಳಿಗೆ ಒತ್ತು ನೀಡಲಾಗಿದೆ. ಈಗ ಸಚಿವಾಲಯ ಒಂದು ಗ್ರಾಮ ಸ್ವಚ್ಛತಾ ಮಾನದಂಡವನ್ನು ಅಭಿವೃದ್ಧಿಗೊಳಿಸಿದ್ದು, ಇದರ ಮೂಲಕ ಹಳ್ಳಿಗಳು ಖುದ್ದಾಗಿ ಅಂಕಿಗಳ ಮೂಲಕ ತಮ್ಮ ಹಳ್ಳಿಯ ಒಟ್ಟು ಶುಚಿತ್ವದ ಮಟ್ಟದ ಬಗ್ಗೆ ತೀರ್ಮಾನಿಸಬಹುದು. ಈ ಅಂಕಿಗಳ ಆಧಾರದಲ್ಲಿ ತಮ್ಮ ಪ್ರಗತಿಯನ್ನು




ತಿಳಿದುಕೊಂಡು ಇದನ್ನು ಮುನ್ನಡೆಸಲು ಕ್ರಮವನ್ನು ವಹಿಸಬಹುದು. ಬಯಲು ವಿಸರ್ಜನೆ ಮುಕ್ತ ಸ್ಥಿತಿ, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಸ್ಥಿತಿ ಮತ್ತು ಸಾಮಾನ್ಯ ಪರಿಸರ (ದೃಶ್ಯ) ಶುಚಿತ್ವಗಳನ್ನು ಒಳಗೊಂಡ ಈ ಮಾನದಂಡವು ಒಂದು ಹಳ್ಳಿಯು ವಿಸರ್ಜನೆ ಮುಕ್ತ ಸ್ಥಿತಿಯ ನಂತರ ಬಯಲು ವಿಸರ್ಜನೆ ಮುಕ್ತ ಸ್ಥಿತಿಗೆ ಹೋಗಲು ನೆರವು ನೀಡುತ್ತದೆ. ಸಾಧನೆಯ ಮಧ್ಯಭಾಗವನ್ನು ತಲುಪಿರುವ ಸ್ವಚ್ಛ ಭಾರತ ಮಿಷನ್ ಉತ್ತಮ ಪ್ರಗತಿಯನ್ನು ಸಾಧಿಸುತ್ತಿದ್ದರೂ ಕೇಂದ್ರ ಹಾಗೂ ರಾಜ್ಯಗಳ ತಂಡಗಳು ಅಂತಿಮ ಗುರಿಯನ್ನು ತಲುಪಲು ದೀರ್ಘವಾದ ಹಾಗೂ ಸವಾಲುಗಳನ್ನು ತಂದೊಡ್ಡುವ ಹಾದಿಯು ಇನ್ನೂ ಮುಂದಿದೆಯೆಂಬುದರ ಬಗ್ಗೆ ಅರಿತಿವೆ. ಪ್ರಧಾನಮಂತ್ರಿಗಳ ನಾಯಕತ್ವದಲ್ಲಿ, ರಾಜ್ಯಗಳ ರಾಜಕೀಯ ನಾಯಕರು, ಸರ್ಕಾರಿ ಅಧಿಕಾರಿ ಸಿಬ್ಬಂದಿಗಳು ಮತ್ತು ಅತ್ಯಂತ ಮುಖ್ಯವಾಗಿ, ಸರಪಂಚರಂತಹ (ವಿಶೇಷವಾಗಿ ಮಹಿಳಾ ಸರಪಂಚರು) ಬುಡಮಟ್ಟದ ನಾಯಕರ ಬೆಂಬಲದಿಂದ ಸ್ವಚ್ಛಭಾರತ್ ಮಿಷನ್ ಜನ ಆಂದೋಲನವು ಇಡಿ ದೇಶದಲ್ಲಿ ಯಶಸ್ಸನ್ನು ಕಾಣುತ್ತದೆಂದು ನಿಚ್ಚಳವಾಗಿ ಕಾಣಿಸುತ್ತಿದೆ. ❑

## ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ತಮ್ಮ **ಇ–ಮೇಲ್, ಫೋನ್ ನಂಬರ್ ಸೇರಿದಂತೆ, ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಒಳಗೊಂಡ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು**. ಚಂದಾದಾರರು, ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಸರಿ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ**. ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ–ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)

# ಪರಿಶುದ್ಧ, ಪಾರದರ್ಶಕ ಆರ್ಥಿಕತೆಯತ್ತ

* ಎಂ. ವಿ. ಭಾನುಮತಿ
** ರೋಹಿತ್ ದೇವ್ ಝಾ



ಒಬ್ಬ ಶ್ರೀಮಂತ ರಾಜನಾದವನು ಉತ್ತಮವಾಗಿ ರಾಜ್ಯಭಾರ ಮಾಡುತ್ತಾನೆ, ಪ್ರಜೆಗಳಿಗಾಗಿ ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳುತ್ತಾನೆ ಮತ್ತು ಭವಿಷ್ಯದಲ್ಲಿ ಜನರನ್ನೂ ಸಮೃದ್ಧ-ಸಂಪನ್ನಗೊಳಿಸುವಂತಹ ವಾಣಿಜ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಾನೆ.

– ಚಾಣಕ್ಯ

ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಸ್ಥಾನಮಾನ ಅತ್ಯಂತ ಕೆಳ ಮಟ್ಟದಲ್ಲೇ ಮುಂದುವರೆದಿದೆ. ಕಳೆದ ವರ್ಷ (ಹೆಚ್‌ಡಿಐ–2016), ಭಾರತ 188 ರಾಷ್ಟ್ರಗಳ ಪಟ್ಟಿಯಲ್ಲಿ 131ನೇ ಸ್ಥಾನ ಗಳಿಸಿದೆ.

ಇದುವರೆಗೂ ಆರ್ಥಿಕ ಪ್ರಗತಿಯ ಅಂಚಿನಲ್ಲೇ ಉಳಿದಿರುವವರ ಅನುಕೂಲಕ್ಕಾಗಿ ಸುಧಾರಣೆಗಳನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲು ಗಂಭೀರ ಪ್ರಯತ್ನಗಳನ್ನು ಮಾಡಲಾಗಿದೆ. ಈ ಕಾರ್ಯತಂತ್ರದ ಪ್ರಮುಖ ಆಧಾರ ಸ್ತಂಭಗಳೆಂದರೆ, ಎಲ್ಲರ ಒಳಗೊಳ್ಳುವಿಕೆ, ಪಾರದರ್ಶಕತೆ ಮತ್ತು ವಿಕೇಂದ್ರೀಕರಣ. ಈ ಆಧಾರಸ್ತಂಭಗಳ ದಕ್ಷ ಅನುಷ್ಠಾನವು, ಇದೇ ಮೊದಲ ಬಾರಿಗೆ ಪ್ರಗತಿಯ ಲಾಭಗಳನ್ನು ನೇರವಾಗಿ ಜನರಿಗೆ ತಲುಪಿಸುತ್ತದೆ. ಈ ಮೂರು ವಿಭಾಗಗಳ ಪೈಕಿ, ಜಾತ್ಯತೀತ ಆರ್ಥಿಕ ಪ್ರಗತಿಗಾಗಿ ಪಾರದರ್ಶಕತೆಯು ಅತ್ಯಂತ ಮಹತ್ವದ ಪೂರ್ವಾಗತ್ಯವೆನಿಸಿದೆ. ಸದುದ್ದೇಶಪೂರ್ವಕ ಯೋಜನೆಗಳು ವಿಫಲವಾಗಲು ಭ್ರಷ್ಟಾಚಾರವೇ ಮೂಲ ಕಾರಣ ಎಂಬುದು ನಿಷ್ಪಕ್ಷಪಾತ ಪರಿಶೀಲನೆಯಿಂದ ಸ್ಪಷ್ಟವಾಗುತ್ತದೆ. ಭ್ರಷ್ಟಾಚಾರವು ಕಪ್ಪು ಹಣವನ್ನು ಸೃಷ್ಟಿಸುವುದಲ್ಲದೆ, ಜನಕಲ್ಯಾಣ ಯೋಜನೆಗಳನ್ನು ಬುಡಮೇಲು ಮಾಡುತ್ತದೆ, ಸರ್ಕಾರದ ಬೊಕ್ಕಸಕ್ಕೆ ಹಣದ ಹರಿವನ್ನು ತಡೆಯುತ್ತದೆ ಮತ್ತು ಆ ಮೂಲಕ ಯೋಜನೆಗಳ ಅನುಷ್ಠಾನಗೊಳಿಸುವ ಸರ್ಕಾರದ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ; ಜೊತೆಗೆ ಆರ್ಥಿಕ ಅಭಿವೃದ್ಧಿಗೆ ಅಗತ್ಯವಾದ ವಿದೇಶಿ ಹೂಡಿಕೆ ಮತ್ತು ವಿದೇಶಿ ತಂತ್ರಜ್ಞಾನದ ಹರಿವಿಗೆ ತಡೆಯೊಡ್ಡುತ್ತದೆ. ಅಲ್ಲದೆ, ಯುವ ಜನತೆಗೆ ಉದ್ಯೋಗಾವಕಾಶ ಒದಗಿಸಲು ಒದ್ದಾಡುತ್ತಿರುವ ಭಾರತದಂತಹ ದೇಶದಲ್ಲಿ ಉದ್ಯೋಗ ಸೃಷ್ಟಿಗೆ ಭ್ರಷ್ಟಾಚಾರ ತೊಡಕಾಗುತ್ತದೆ.

ವಿಶ್ವಬ್ಯಾಂಕ್ ಪ್ರಕಾರ, ಅಭಿವೃದ್ಧಿಶೀಲ ದೇಶಗಳ ಪಾಲಿಗೆ ಭ್ರಷ್ಟಾಚಾರವು ಮೊಟ್ಟ ಮೊದಲ ಶತ್ರುವಾಗಿದೆ ಮತ್ತು ಬಡಜನರು ತಮ್ಮ ಆದಾಯದ ಗರಿಷ್ಠ ಭಾಗವನ್ನು ಲಂಚ ನೀಡಿಕೆಯಲ್ಲಿ ಕಳೆದುಕೊಳ್ಳುತ್ತಾರೆ. ಭಾರತವೂ ಇದಕ್ಕೆ ಹೊರತಾಗಿಲ್ಲ. ಆಸಕ್ತಿಕರ ವಿಷಯವೆಂದರೆ, ಸರ್ಕಾರ ಕಾಳಧನಿಕರ ಮೇಲೆ ಸಮರ ಸಾರುವುದರ ಜೊತೆಗೆ, ಹೊಸ ವಿತರಣೆ ವ್ಯವಸ್ಥೆಯನ್ನು ಕಂಡುಕೊಳ್ಳುವ ಮೂಲಕ ಬಡಜನರನ್ನು ಭ್ರಷ್ಟಾಚಾರ ಮತ್ತು ಲಂಚಗುಳಿತನದಿಂದ ರಕ್ಷಿಸುವ ಉಪಕ್ರಮಗಳನ್ನೂ ಕೈಗೊಂಡಿದೆ.

### ಸ್ವಚ್ಛ ಆರ್ಥಿಕತೆಯತ್ತ

ಭಾರತದ ಒಟ್ಟು ದೇಶೀಯ ಆದಾಯದಲ್ಲಿ (ಜಿಡಿಪಿ) ತೆರಿಗೆಯ ಅನುಪಾತ 16.6% ಮಾತ್ರವಾಗಿದ್ದು, ಕೇವಲ 5.5 ಕೋಟಿ ಮಂದಿ ಮಾತ್ರ ತೆರಿಗೆ ಜಾಲದಲ್ಲಿದ್ದಾರೆ. ವ್ಯಕ್ತಿಗಳು, ಕಂಪನಿಗಳು, ವ್ಯಾಪಾರಿಗಳೂ ಇದರಲ್ಲಿ ಸೇರಿದ್ದಾರೆ. 2016–17ರ ಆರ್ಥಿಕ ಸಮೀಕ್ಷೆಯ ಪ್ರಕಾರ, ಪ್ರತಿ 100 ಮತದಾರರಿಗೆ ಭಾರತದಲ್ಲಿ ಕೇವಲ 7 ಜನರು ಮಾತ್ರ ತೆರಿಗೆ ಪಾವತಿಸುತ್ತಾರೆ. ಕಳೆದ 5 ವರ್ಷಗಳಲ್ಲಿ 1.25 ಕೋಟಿ ಕಾರುಗಳು ಮಾರಾಟವಾಗಿದ್ದು,

* ಪ್ರಧಾನ ನಿರ್ದೇಶಕಿ ** ಸಹಾಯಕ ನಿರ್ದೇಶಕರು, ಆದಾಯ ತೆರಿಗೆ (ತನಿಖೆ) ಇಲಾಖೆ.
E-mail : * bhanumathi@incometax.gov.in ** rohit.d.jha@incometax.gov.in

# ಸ್ವಚ್ಛ ಆರ್ಥಿಕತೆಗಾಗಿ ತೆರಿಗೆ ಆಡಳಿತ

ಕಪ್ಪುಹಣದ ಪಿಡುಗನ್ನು ತೊಲಗಿಸಲು ಕೆಳಗಿನ ಕ್ರಾಂತಿಕಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ:

* ಕಪ್ಪು ಹಣದ ತನಿಖೆಗಾಗಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಾದ ಎಂ ಬಿ ಶಾ ಅಧ್ಯಕ್ಷತೆಯಲ್ಲಿ ವಿಶೇಷ ತನಿಖಾ ತಂಡ ರಚನೆ.

* ವಿದೇಶದಲ್ಲಿ ಕಾಳಧನ ಸಂಗ್ರಹದ ವಿರುದ್ಧ ಕ್ರಮಕ್ಕಾಗಿ ತಪ್ಪಿತಸ್ಥರಿಗೆ 3-10 ವರ್ಷಗಳ ಕಠಿಣ ಶಿಕ್ಷೆಗೆ ಅವಕಾಶ ಒದಗಿಸುವ 'ಕಪ್ಪು ಹಣ (ಅಘೋಷಿತ ವಿದೇಶಿ ಆದಾಯ ಮತ್ತು ಆಸ್ತಿಗಳು) ಮತ್ತು ತೆರಿಗೆ ಹೇರುವಿಕೆ ಕಾಯ್ದೆ, 2015ರ ಪರಿಣಾಮಕಾರಿ ಅನುಷ್ಠಾನ. ಅಕ್ರಮ ಹಣ ಲೇವಾದೇವಿ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ತೆರಿಗೆ ವಂಚನೆಗೆ ಗಂಭೀರ ಅಪರಾಧದ ರೂಪ ನೀಡಲಾಗಿದೆ.

* ಹಲವು ಮಿತಿಗಳ ಹೊರತಾಗಿಯೂ ಭಾರತೀಯರು ವಿದೇಶದಲ್ಲಿ ಅಕ್ರಮವಾಗಿ ಅಡಗಿಸಿದ್ದ 8,186 ರೂ.ಗಳನ್ನು ತೆರಿಗೆ ವ್ಯಾಪ್ತಿಗೆ ತರಲಾಗಿದೆ;

* ಪನಾಮಾ ಪೇಪರ್ಸ್ ಲೀಕ್ ಪ್ರಕರಣದಲ್ಲಿ ತ್ವರಿತ ಮತ್ತು ಸಹಯೋಜಿತ ತನಿಖೆಗಾಗಿ 'ಮಲ್ಟಿ ಏಜೆನ್ಸಿ ಗ್ರೂಪ್ (ಎಂಎಜಿ)' ರಚನೆ ಮಾಡಲಾಗಿದೆ;

* ಇತರ ದೇಶಗಳೊಂದಿಗೆ ದ್ವಂದ್ವ ತೆರಿಗೆ ತಪ್ಪಿಸುವ ಒಪ್ಪಂದಗಳು (ಡಿಟಿಎಎ)/ತೆರಿಗೆ ಮಾಹಿತಿ ವಿನಿಮಯ ಒಪ್ಪಂದಗಳು (ಟಿಐಇಎ)/ದ್ವಿಪಕ್ಷೀಯ ಒಪ್ಪಂದಗಳು ಇತ್ಯಾದಿ.

* ಕಾಳಧನದ ವಿರುದ್ಧ ಜಾಗತಿಕ ಸಮರದ ಭಾಗವಾಗಿ, ಮಾಹಿತಿಯ ಸ್ವಯಂಚಾಲಿತ ವಿನಿಮಯಕ್ಕಾಗಿ (ಆಟೋಮ್ಯಾಟಿಕ್ ಎಕ್ಸ್‌ಚೇಂಜ್) ದ್ವಿಪಕ್ಷೀಯ ಅಧಿಕಾರಯುತ ಒಪ್ಪಂದಕ್ಕೆ ಸೇರ್ಪಡೆಗೊಂಡಿರುವುದು

* ಅಮೆರಿಕದ ಜೊತೆ ಮಾಹಿತಿ ವಿನಿಮಯ ಒಪ್ಪಂದವಾದ 'ವಿದೇಶಿ ಖಾತೆ ತೆರಿಗೆ ಅನುಸರಣೆ ಕಾಯ್ದೆ' ಗೆ (ಎಫ್ಎಟಿಸಿಎ) ಸಹಿ ಹಾಕಿರುವುದು.

* ಒಪ್ಪಂದಗಳ ದುರ್ಬಳಕೆ, ತೆರಿಗೆ ವಂಚನೆ ಮತ್ತು ರೌಂಡ್ ಟ್ರಿಪ್ಪಿಂಗ್ ತಪ್ಪಿಸಲು ಮಾರಿಷಸ್, ಸಿಂಗಪುರ ಮತ್ತು ಸೈಪ್ರಸ್ ಜೊತೆಗೆ "ಡಿಟಿಎಎ" ಮರುಒಪ್ಪಂದ.

* ಪಾರ್ಟಿಸಿಪೇಟರಿ ನೋಟುಗಳು (ಪಿಎನ್) ವಿದೇಶಿ ಹೂಡಿಕೆಯನ್ನು ಆಕರ್ಷಿಸಿದರೂ, ವಿದೇಶದಿಂದ ಕಪ್ಪುಹಣವನ್ನು ದೇಶದೊಳಗೆ ತರಲು ಇವುಗಳನ್ನು ವಾಮ ಮಾರ್ಗವಾಗಿ ಬಳಸುತ್ತಿರುವ ಬಗ್ಗೆ ಕಾಳಧನ ಕುರಿತಾದ ವಿಶೇಷ ತನಿಖಾ ತಂಡವು ಗಮನ ಸೆಳೆದಿದೆ. ಇದರಿಂದ ಮಾಹಿತಿ ಘೋಷಣೆಯನ್ನು ಸೆಬಿ ಕಡ್ಡಾಯಗೊಳಿಸಿದ್ದಲ್ಲದೆ, ಅಕ್ರಮ ಹಣ ವಿಲೇವಾರಿಯನ್ನು ತಡೆಯಲು 'ಪಿಎನ್'ಗಳ ವರ್ಗಾವಣೆಗೆ ನಿರ್ಬಂಧ ಹೇರಿದೆ, ಆ ಮೂಲಕ ಫಲಾನುಭವಿ ಮಾಲೀಕರ ಮೇಲೆ ನಿಗಾ ಇರಿಸಿದೆ.

* 'ಬೇನಾಮಿ ವ್ಯವಹಾರಗಳ (ನಿಷೇಧ) ತಿದ್ದುಪಡಿ ಕಾಯ್ದೆ-2016'ಯ ಅನುಷ್ಠಾನ. ಈ ಕಾಯ್ದೆಯು, ನಕಲಿ ಹೆಸರಿನಲ್ಲಿ, ಅಥವಾ ಬೇರೊಬ್ಬರ ಹೆಸರಿನಲ್ಲಿ ಮಾಡಲಾಗಿರುವ ಬೇನಾಮಿ ಆಸ್ತಿಗಳನ್ನು (ಯಾವುದೇ ಪರಿಹಾರ ನೀಡದೆ) ವಶಪಡಿಸಿಕೊಳ್ಳಲು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. ಈ ಕಾಯ್ದೆಯು ಏಳು ವರ್ಷದವರೆಗೂ ಶಿಕ್ಷೆಗೆ ಅವಕಾಶ ನೀಡುತ್ತದೆ. ಕಂದಾಯ ಇಲಾಖೆಯ ಪ್ರಕಾರ, ಈಗಾಗಲೇ 245ಕ್ಕೂ ಹೆಚ್ಚು ಬೇನಾಮಿ ವ್ಯವಹಾರಗಳನ್ನು ಗುರುತಿಸಲಾಗಿದೆ ಮತ್ತು 124 ಪ್ರಕರಣಗಳಲ್ಲಿ ಆಸ್ತಿಗಳ ತಾತ್ಕಾಲಿಕ ಜಪ್ತಿ ಮಾಡಲಾಗಿದೆ.

* 1.37 ಲಕ್ಷ ಕೋಟಿ ರೂ.ಗಿಂತಲೂ ಹೆಚ್ಚಿನ (ಆದಾಯ ತೆರಿಗೆ 69434; ಸೀಮಾ ಸುಂಕ 11405; ಕೇಂದ್ರೀಯ ಅಬಕಾರಿ 13952; ಸೇವಾ ತೆರಿಗೆ 42727) ತೆರಿಗೆ ವಂಚನೆಯನ್ನು ತಡೆಯಲು 23064 ಶೋಧಗಳು/ ಸರ್ವೇಗಳನ್ನು ಮಾಡಲಾಗಿದೆ (ಆದಾಯ ತೆರಿಗೆ 17525; ಸೀಮಾ ಸುಂಕ 2509; ಕೇಂದ್ರೀಯ ಅಬಕಾರಿ 1913; ಸೇವಾ ತೆರಿಗೆ 1120)

* 2814 ಪ್ರಕರಣಗಳಲ್ಲಿ ವಿಚಾರಣೆ ಆರಂಭಿಸುವ ಮೂಲಕ 3893 ಜನರ ಬಂಧನ

* ಜಾರಿ ನಿರ್ದೇಶನಾಲಯವು (ಇ.ಡಿ) 396 ಶೋಧಗಳನ್ನು ನಡೆಸಿ, 519 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದು, 79 ಪ್ರಕರಣಗಳ ಆಧಾರದ ಮೇಲೆ 14,933 ಕೋಟಿ ರೂ. ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಳ್ಳಲಾಗಿದೆ.

* ದೇಶೀಯ ಕಾಳಧನಿಕರಿಗೆ ಅಕ್ರಮ ಹಣ ಸಕ್ರಮಕ್ಕೆ 2016ರಲ್ಲಿ ಜಾರಿಗೊಳಿಸಲಾದ 'ಆದಾಯ ಘೋಷಣೆ ಯೋಜನೆ' (ಐಡಿಎಸ್) ಅಡಿಯಲ್ಲಿ 64,275 ವ್ಯಕ್ತಿಗಳು 65,250 ಕೋಟಿ ರೂ.ಗಳ ಅಕ್ರಮ ಸಂಪತ್ತನ್ನು ಘೋಷಿಸಿದ್ದಾರೆ.

# ಆಯವ್ಯಯ 2017-18 – 'ಭಾರತದ ಪರಿವರ್ತನೆ, ಸಶಕ್ತೀಕರಣ ಮತ್ತು ಶುದ್ಧೀಕರಣ'

ಕಾಳಧನದ ವಿರುದ್ಧದ ಸಮರವನ್ನು ಮುಂದುವರಿಸಿದ ಹಣಕಾಸು ಸಚಿವರು ಕೆಳಕಂಡ ಮಹತ್ವದ ಸುಧಾರಣೆಗಳನ್ನು ಪ್ರಸ್ತಾಪಿಸಿದ್ದಾರೆ:

* ವ್ಯಾಪಾರ ಆದಾಯದಲ್ಲಿ ದೈನಂದಿನ ನಗದು ವೆಚ್ಚವನ್ನು ಗರಿಷ್ಠ 10,000 ರೂ.ಗೆ ಇಳಿಸಲಾಗಿದೆ.
* ದತ್ತಿ ಸಂಸ್ಥೆಗಳು ಒಂದು ಮೂಲದಿಂದ ನಗದು ರೂಪದಲ್ಲಿ ಸ್ವೀಕರಿಸುವ ದೇಣಿಗೆಗೆ ಗರಿಷ್ಠ 2,000 ರೂ. ಮಿತಿ ನಿಗದಿಪಡಿಸಲಾಗಿದೆ
* ಒಂದು ವಹಿವಾಟಿಗೆ ನಗದು ಪಾವತಿ ಮಿತಿಯನ್ನು ಗರಿಷ್ಠ 2 ಲಕ್ಷ ರೂ.ಗೆ ನಿಗದಿಪಡಿಸಲಾಗಿದ್ದು, ಈ ನಿಯಮದ ಉಲ್ಲಂಘನೆಗಾಗಿ ಅಷ್ಟೇ ಪ್ರಮಾಣದ ದಂಡ ವಿಧಿಸಲಾಗುವುದು
* ಕಾಳಧನ ಸಂಗ್ರಹ ಉದ್ದೇಶಕ್ಕೆ ಖಾತೆಗಳ ದುರುಪಯೋಗ ಸಾಧ್ಯತೆ ಇರುವ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಕಂಪ್ಯೂಟರೀಕರಣಗೊಳ್ಳಬೇಕು ಮತ್ತು ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕ್‌ಗಳ ಕೋರ್ ಬ್ಯಾಂಕಿಂಗ್ ಜೊತೆ ವಿಲೀನಗೊಳ್ಳಬೇಕು.
* ಷೇರುಗಳ ಖರೀದಿ ಮೇಲಿನ ದೀರ್ಘಾವಧಿ ಬಂಡವಾಳ ಆದಾಯ ತೆರಿಗೆಯ ವಿನಾಯಿತಿಗೆ ನಿರ್ಬಂಧ ಹೇರಲಾಗಿದ್ದು, ಷೇರುಗಳ ಖರೀದಿ ಮೇಲೆ "ಸೆಕ್ಯೂರಿಟಿ ವಹಿವಾಟು ತೆರಿಗೆ"ಯನ್ನು ಪಾವತಿಸಬೇಕು (ಸಾರ್ವಜನಿಕ ಆಫರ್‌ಗಳಂತಹ "ಪ್ರಮಾಣಿಕ ಪ್ರಕರಣಗಳೂ" ಸೇರಿದಂತೆ). ಈ ಕ್ರಮವು, "ಕಪಟ ವಹಿವಾಟುಗಳ" ಮೂಲಕ ತೆರಿಗೆ ವಂಚನೆಯನ್ನು ತಡೆಯುತ್ತದೆ.
* ದೇಶದಲ್ಲಿರುವ ತಪ್ಪಿತಸ್ಥರ ಅಕ್ರಮ ಆಸ್ತಿಗಳನ್ನು ವಶಪಡಿಸಿಕೊಳ್ಳಲು ರೂಪಿಸಲಾಗಿರುವ ಉದ್ದೇಶಿತ ಶಾಸನವು, ದೇಶ ತೊರೆದು ತಲಮರೆಸಿಕೊಂಡಿರುವ ಆರ್ಥಿಕ ಅಪರಾಧಿಗಳಿಗೂ ಅನ್ವಯಿಸುತ್ತದೆ.
* ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲು ಮತ್ತು ಪ್ಯಾನ್ ಪಡೆಯಲು, ಉಳಿಸಿಕೊಳ್ಳಲು ಸಹ ಆಧಾರ್ ಕಡ್ಡಾಯಗೊಳಿಸಲಾಗಿದೆ. ಇದು ಬಹು ಮತ್ತು ನಕಲಿ ಪ್ಯಾನ್‌ಗಳ ಸಮಸ್ಯೆಯನ್ನು ನಿವಾರಿಸುತ್ತದೆ ಮತ್ತು ಬ್ಯಾಂಕ್ ಖಾತೆ ತೆರೆಯುವುದು ಸೇರಿದಂತೆ ವಿವಿಧ ವಹಿವಾಟುಗಳ ಕೆವೈಸಿ ಪರಿಶೀಲನೆ ಪ್ರಕ್ರಿಯೆಯನ್ನು ಮತ್ತಷ್ಟು ಸಮರ್ಥಗೊಳಿಸುತ್ತದೆ.
* ಪ್ರಾಮಾಣಿಕ ತೆರಿಗೆ ಪಾವತಿದಾರರಿಗೆ ಬಹುಮಾನ

  ತೆರಿಗೆ ಜಾಲವನ್ನು ವಿಸ್ತರಿಸುವ ಗುರಿ ಹೊಂದಿರುವ ಸರ್ಕಾರ, ನಿರೀಕ್ಷಿತ, ಸುಸ್ಥಿರ, ಹೂಡಿಕೆದಾರ ಸ್ನೇಹಿ ಮತ್ತು ಪ್ರಗತಿ ಪ್ರೋತ್ಸಾಹಕ ತೆರಿಗೆ ನೀತಿಯನ್ನು ರೂಪಿಸಲು ಉತ್ಸುಕತೆ ತೋರುತ್ತಿದೆ. ಉತ್ತಮ ತೆರಿಗೆ ಆಡಳಿತಕ್ಕೆ ನೆರವಾಗುವ ಗಮನಾರ್ಹ ಕ್ರಮಗಳು/ನೀತಿ ಬದಲಾವಣೆಗಳು ಮುಂದಿನಂತಿವೆ:

* ಪೂರ್ವಾನ್ವಯವಾಗುವ ಶಾಸನವನ್ನು ಜಾರಿಗೊಳಿಸುವ ತನ್ನ ಸಾರ್ವಭೌಮ ಅಧಿಕಾರವನ್ನು ಉಪಯೋಗಿಸುವ ಬದಲು, ಈ ವಿಚಾರದಲ್ಲಿ ಅತ್ಯಂತ ಎಚ್ಚರಿಕೆ ಮತ್ತು ನ್ಯಾಯಸಮ್ಮತವಾಗಿ ವ್ಯವಹರಿಸುವುದಾಗಿ ಸರ್ಕಾರ ಸ್ಪಷ್ಟಪಡಿಸಿದೆ.
* ತೆರಿಗೆ ಪಾವತಿದಾರ ಮತ್ತು ಇಲಾಖೆಯ ನಡುವಿನ ಭೌತಿಕ ವ್ಯವಹಾರವನ್ನು ತಪ್ಪಿಸಲು 7 ನಗರಗಳಲ್ಲಿ ಇ-ಅಸೆಸ್‌ಮೆಂಟ್ ಜಾರಿಗಳಿಸಲಾಗಿದೆ. ಇದರಿಂದ ತೆರಿಗೆ ನಿರ್ಧರಣೆಯ ವೆಚ್ಚ ಮತ್ತು ಸಮಯವೂ ಉಳಿತಾಯವಾಗಲಿದೆ.
* ವ್ಯಾಪಾರಿಗಳು ಮತ್ತು ಉದ್ಯಮದ ಜೊತೆ ಸಮಾಲೋಚನೆಗೆ ರಚಿಸಲಾಗಿರುವ ಉನ್ನತ ಮಟ್ಟದ ಸಮಿತಿಯ ಶಿಫಾರಸುಗಳ ಮೇರೆಗೆ 'ಸಿಬಿಟಿಡಿ' ಮತ್ತು 'ಸಿಬಿಇಸಿ' ತೆರಿಗೆ ನೀತಿಗಳ ಮೇಲೆ ಕಾಲಕಾಲಕ್ಕೆ ಸ್ಪಷ್ಟನೆಗಳನ್ನು ನೀಡುತ್ತವೆ
* ದೇಶೀಯ ತೆರಿಗೆ ಪಾವತಿದಾರರು, ನಿಗದಿತ ವ್ಯಾಪ್ತಿಯನ್ನು ಮೀರಿದ ತಮ್ಮ ತೆರಿಗೆ ಹೊಣೆಗಾರಿಕೆಯ ಬಗ್ಗೆ ಮುಂಗಡವಾಗಿ ಆದೇಶ ಪಡೆಯಬಹುದು.
* ಆದಾಯ ತೆರಿಗೆ ಇತ್ಯರ್ಥ ಆಯೋಗವನ್ನು ವಿಸ್ತರಿಸಲಾಗಿದ್ದು, ಇದರಿಂದ ಹೆಚ್ಚು ತೆರಿಗೆದಾತರು ಈ ಅವಕಾಶ ಪಡೆಯಲು ಸಾಧ್ಯವಾಗಲಿದೆ.
* ಪ್ರಧಾನ ಮಂತ್ರಿ ಕಚೇರಿಯಿಂದ ನಿರ್ವಹಿಸಲಾಗುವ 'ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣೆ ಮತ್ತು ನಿಗಾ ವ್ಯವಸ್ಥೆ (ಸಿಪಿಜಿಆರ್‌ಎಎಂಎಸ್) ಮತ್ತು 'ಇ-ನಿವಾರಣ' ಪೋರ್ಟಲ್ ಮೂಲಕ ಆದಾಯ ತೆರಿಗೆ ಕುರಿತಾದ ಕುಂದುಕೊರತೆಗಳ ಸಮಯಬದ್ಧ ನಿವಾರಣೆ.
* ಆಯ್ದ ತೆರಿಗೆ ಪಾವತಿದಾರರಿಗೆ ಒಂದು ಪುಟದ 'ಸಹಜ್' ಐಟಿಆರ್ ನಮೂನೆ
* ತೆರಿಗೆ ನಿರ್ಧಾರಣೆ ಮತ್ತು ಕ್ಷಿಪ್ರ ತನಿಖೆಗಾಗಿ ಹೇರುವಿಕೆ ಮುಕ್ತವಾದ, ಮಾಹಿತಿ ಆಧರಿತ 'ಪ್ರಾಜೆಕ್ಟ್ ಇನ್‌ಸೈಟ್' ಹೆಸರಿನ ಯೋಜನೆಯನ್ನು ಆದಾಯ ತೆರಿಗೆ ಇಲಾಖೆ ಸಿದ್ಧಪಡಿಸುತ್ತಿದೆ.

2015ರ ಒಂದೇ ವರ್ಷದಲ್ಲಿ 2 ಕೋಟಗಿಂತಲೂ ಹೆಚ್ಚು ಜನರು ವಿದೇಶಿ ಪ್ರವಾಸ ಕೈಗೊಂಡಿದ್ದಾರೆ. ಇಷ್ಟಾದರೂ ಕೇವಲ 1.72 ಲಕ್ಷ ಮಂದಿ ಮಾತ್ರ ತೆರಿಗೆ ಉದ್ದೇಶಕ್ಕಾಗಿ ತಮ್ಮ ಆದಾಯ 50 ಲಕ್ಷ ರೂ.ಗಿಂತಲೂ ಹೆಚ್ಚೆಂದು ತೋರಿಸಿದ್ದಾರೆ. ಈ ಅಂಕಿ ಅಂಶಗಳನ್ನು ಗಮನಿಸಿದರೆ ತೆರಿಗೆ ವಂಚನೆಯು ಕಣ್ಣಿಗೆ ರಾಚುತ್ತದೆ.

ತೆರಿಗೆ ವಂಚನೆ ಮೂಲಕ ಸೃಷ್ಟಿಯಾದ ಕಪ್ಪುಹಣವು ಒಂದು ಆರ್ಥಿಕ ಸವಾಲು ಮಾತ್ರವಲ್ಲದೆ, ಸಾಮಾಜಿಕ ಪಿಡುಗೂ ಹೌದು. ಇದು ಭ್ರಷ್ಟಾಚಾರ, ಚುನಾವಣಾ ಅಕ್ರಮ, ಸಂಘಟಿತ ಅಪರಾಧ ಮತ್ತು ಆಡಂಬರದ ಅನುಭೋಗಕ್ಕೆ ಇಂಬು ಕೊಡುವುದಲ್ಲದೆ, ದೇಶದ ಆರ್ಥಿಕ ಯೋಜನೆ ಮತ್ತು ಹಣಕಾಸು ಸಮಗ್ರತೆಯನ್ನು ಇದು ಹಾಳುಗೆಡವುತ್ತದೆ. ಒಟ್ಟಾರೆಯಾಗಿ, ಇದು ಆರ್ಥಿಕ ಅಸಮಾನಾತೆಯನ್ನು ಹೆಚ್ಚಿಸುತ್ತದೆ ಮತ್ತು ದೇಶದ ಸಾಮಾಜಿಕ ತಂತನ್ನು ನಾಶಪಡಿಸುತ್ತದೆ. ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಹತ್ತಾರು ಕ್ರಮಗಳನ್ನು ಕೈಗೊಳ್ಳುವ ಮೂಲಕ ಕಾಳಧನದ ವಿರುದ್ಧ ಬಹುತೇಕ ರಣಕಹಳೆಯನ್ನೇ ಮೊಳಗಿಸಿದೆ. ಶಾಸನಾತ್ಮಕ ಮತ್ತು ಆಡಳಿತಾತ್ಮಕ ಉಪಕ್ರಮಗಳ ಮೂಲಕ ನೀತಿ-ಮಟ್ಟದ ಸುಧಾರಣೆಗಳು, ಪರಿಣಾಮಕಾರಿ ಅನುಷ್ಠಾನ, ಸಾಮರ್ಥ್ಯ ಹೆಚ್ಚಳ ಮತ್ತು ದತ್ತಾಂಶ ಪರಿಶೀಲನೆ ಮೂಲಕ ಗೌಪ್ಯ ಮಾಹಿತಿ ಸಂಗ್ರಹ ಇವುಗಳಲ್ಲಿ ಸೇರಿವೆ.

### ನೋಟು ಅಮಾನ್ಯೀಕರಣ

ಅಧಿಕ ಮುಖಬೆಲೆಯ 500 ರೂ. ಮತ್ತು 1000 ರೂ. ನೋಟುಗಳ ಅಮಾನ್ಯೀಕರಣವು ತೆರಿಗೆ ವಂಚನೆಗೆ ತೆರಬೇಕಾದ ಬೆಲೆಯನ್ನು ಹೆಚ್ಚಿಸುವುದರ ಜೊತೆಗೆ, ಭ್ರಷ್ಟಾಚಾರದ ಬುಡಕ್ಕೇ ಪೆಟ್ಟು ನೀಡುವ ಮೂಲಕ ಕ್ರಾಂತಿಕಾರಿ ಬದಲಾವಣೆಗೆ ದಾರಿ ಮಾಡಿತು. ನಕಲಿ ನೋಟು, ಆರ್ಥಿಕತೆಯ ಹೆಚ್ಚು ಹೆಚ್ಚು ಡಿಜಿಟಲೀಕರಣ, ಹಣಕಾಸು ಉಳಿತಾಯ ಹರಿವು ಹೆಚ್ಚಳ ಮತ್ತು ಆರ್ಥಿಕತೆ ಮತ್ತಷ್ಟು ನಿಯಮಬದ್ಧಗೊಳಿಸುವಿಕೆಗೂ ಇದು ದಾರಿ ಮಾಡುತ್ತದೆ. ಆ ಮೂಲಕ ಅಂತಿಮವಾಗಿ ಹೆಚ್ಚಿದ ರಾಷ್ಟ್ರೀಯ ಆದಾಯ, ಉತ್ತಮ ತೆರಿಗೆ ನೀತಿ ಅನುಸರಣೆ ಮತ್ತು ಹೆಚ್ಚಿದ ಆದಾಯಕ್ಕೆ ಇದು ಕಾರಣವಾಗುತ್ತದೆ.



ಅಮಾನ್ಯೀಕರಣದ ಬಳಿಕ ಬಹುತೇಕ ಎಲ್ಲಾ ನಗದು ಬ್ಯಾಂಕಿಂಗ್ ವ್ಯವಸ್ಥೆಗೆ ಸೇರ್ಪಡೆಗೊಂಡಿದ್ದು, ಹಣದ ವಹಿವಾಟಿನ ಮೇಲೆ ನಿಗಾ ಇಡಲು ಕಾನೂನು ಜಾರಿ ಇಲಾಖೆಗಳಿಗೆ ಅವಕಾಶ ದೊರೆತಿದೆ. ನಗದು ಜಮೆ ಕುರಿತಾದ ತನಿಖೆ ವೇಳೆ ಹಲವು ಅಕ್ರಮಗಳು ಬೆಳಕಿಗೆ ಬಂದಿವೆ. ಮಾರಾಟ ರಸೀದಿಯನ್ನು ಹಿಂದಿನ ದಿನಾಂಕಕ್ಕೆ ಬದಲಾಯಿಸುವುದು, ಬೇನಾಮಿ ಹೆಸರಲ್ಲಿ ಜಮೆ, ಅಪರಿಚಿತ ವ್ಯಕ್ತಿಗಳಿಗೆ (ಪ್ಯಾನ್ ಇಲ್ಲದವರಿಗೆ) ಚಿನ್ನ-ಆಭರಣಗಳು, ಐಷಾರಾಮಿ ವಸ್ತುಗಳ ಮಾರಾಟ ಮತ್ತು ವಿದೇಶಿ ವಿನಿಮಯ, ಪ್ಯಾನ್ ಗುರುತಿಸುವಿಕೆಯನ್ನು ತಪ್ಪಿಸಲು ಬಿಲ್ಲುಗಳ ವಿಭಜನೆ, ಸಹಕಾರಿ ಬ್ಯಾಂಕ್‌ಗಳಲ್ಲಿ ಹಣ ಜಮೆ (ಕಠಿಣ ಕೆವೈಸಿ ನಿಯಮಗಳು ಇಲ್ಲದ ಕಡೆ), ಒಂದೇ ಪ್ಯಾನ್ ಸಂಖ್ಯೆಯಡಿ ವಿವಿಧ ಖಾತೆಗಳಿಗೆ ಜಮೆ ಮುಂತಾದವು ಇದರಲ್ಲಿ ಸೇರಿವೆ.

ನಗದು ಅಮಾನ್ಯೀಕರಣದ ವೇಳೆ, 2 ಲಕ್ಷದಿಂದ 80 ಲಕ್ಷ ರೂ.ವರೆಗಿನ ಒಟ್ಟು 5.48 ಲಕ್ಷ ಕೋಟಿ ರೂ.ಗಳ ಹಣವನ್ನು 1.09 ಕೋಟಿ ಖಾತೆಗಳಿಗೆ ಜಮೆ ಮಾಡಿರುವುದು ಅಂಕಿ-ಅಂಶಗಳಿಂದ ಬಯಲಾಗಿದೆ. 80 ಲಕ್ಷ ರೂಪಾಯಿಗಿಂತಲೂ ಮಿಗಿಲಾದ ಜಮೆಗಳನ್ನು ಒಳಗೊಂಡಂತೆ ಒಟ್ಟು 4. 89 ಲಕ್ಷ ಕೋಟಿ ಹಣವು 1.48 ಲಕ್ಷ ಖಾತೆಗಳಿಗೆ ಹರಿದುಬಂದಿದೆ. 'ಆಪರೇಷನ್ ಕ್ಲೀನ್ ಮನಿ' ಭಾಗವಾಗಿ, ಮೊದಲ ಹಂತದಲ್ಲಿ ಆದಾಯ ತೆರಿಗೆ ಇಲಾಖೆಯು 18 ಲಕ್ಷ ಮಂದಿಗೆ ಇ-ಮೇಲ್‌ಗಳನ್ನು ಕಳುಹಿಸಿದೆ. ಈ ಪೈಕಿ 12 ಲಕ್ಷ ಖಾತೆಗಳಿಂದ ಇಲಾಖೆಯ ಇ-ಫೈಲಿಂಗ್ ವೆಬ್‌ಸೈಟ್‌ಗೆ ಪ್ರತಿಕ್ರಿಯೆ ಬಂದಿದೆ. ಇದರಿಂದ ನೈಜ ಪ್ರಕರಣಗಳನ್ನು ಮುಂದಿನ ತನಿಖೆಯಿಂದ ಕೈ ಬಿಡಲು ಇಲಾಖೆಗೆ ನೆರವಾಗಲಿದೆ. ಅಮಾನ್ಯೀಕರಣದ ಬಳಿಕ ತೆರಿಗೆ ಇಲಖೆ 1,100 ಶೋಧಗಳು ಮತ್ತು ಸರ್ವೆ ಕಾರ್ಯಗಳ ಮೂಲಕ ಒಟ್ಟಾರೆ 600 ಕೋಟಿ ರೂ. ಮೌಲ್ಯದ ನಗದು ಮತ್ತು ಮೌಲ್ಯಯುತ ವಸ್ತುಗಳನ್ನು ವಶಪಡಿಸಿಕೊಂಡಿದೆ ಎಂದು ಹಣಕಾಸು ಸಚಿವರು ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ.

ಅಕ್ರಮ ಸಂಪತ್ತನ್ನು ಸಕ್ರಮಗೊಳಿಸುವ ಮೂಲಕ "ಶುದ್ಧ"ರಾಗಲು ಸರ್ಕಾರ "ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನಾ" ಎಂಬ ಅಭಿಯಾನವನ್ನು ಘೋಷಿಸಿತು. ಇದರ ಅಡಿಯಲ್ಲಿ ನಗದು ಜಮೆ ಘೋಷಿಸಿದವರು (ಮಾ 31, 2017) 50% ತೆರಿಗೆ ಪಾವತಿಸಬೇಕು ಹಾಗೂ ಖಾತೆಯಲ್ಲಿರುವ ಹಣದಲ್ಲಿ ಶೇ. 25ರಷ್ಟನ್ನು ಬಡ್ಡಿರಹಿತವಾಗಿ "ಪಿಎಂಜಿಕೆ ಡಿಪಾಸಿಟ್ ಸ್ಕೀಮ್" ಅಡಿಯಲ್ಲಿ ಬ್ಯಾಂಕ್‌ನಲ್ಲೆ ಕಡ್ಡಾಯವಾಗಿ ಠೇವಣಿ ಇರಿಸಬೇಕು. ಸಂಖ್ಯೆಗಳ ಹೊರತಾಗಿಯೂ, ಈ ಯೋಜನೆಯು ಅಕ್ರಮವಾಗಿ ಸಂಪತ್ತು ಹೊಂದಿದ್ದ ಜನಸಾಮಾನ್ಯರಿಗೆ ತಮ್ಮ ಹಣವನ್ನು ಸಕ್ರಮಗೊಳಿಸಿಕೊಳ್ಳುವ ಅವಕಾಶ ನೀಡಿದ್ದು ಮುಖ್ಯವಾದ ವಿಚಾರ.

### ಡಿಜಿಟಲ್ ಆರ್ಥಿಕತೆ

ಆರ್ಥಿಕ ವ್ಯವಸ್ಥೆಯಲ್ಲಿ ಅತ್ಯಧಿಕ ಪ್ರಮಾಣದ ನಗದು ಚಲಾವಣೆಯೇ ದೊಡ್ಡ ಮಟ್ಟದ ತೆರಿಗೆ ವಂಚನೆಗೆ ಕಾರಣ. 'ಪಿಡಬ್ಲ್ಯೂಸಿ'ನ 2015ರ ವರದಿ ಪ್ರಕಾರ, ದೇಶದಲ್ಲಿನ ಒಟ್ಟು ವ್ಯವಹಾರಗಳಲ್ಲಿ ಶೇ. 98 ಪ್ರಮಾಣದ ಮತ್ತು ಶೇ. 68ರಷ್ಟು ಮೌಲ್ಯದ ವ್ಯವಹಾರಗಳು ನಗದು ರೂಪದಲ್ಲೇ ನಡೆಯುತ್ತವೆ. ಅಮಾನ್ಯೀಕರಣವು ಡಿಜಿಟಲ್ ವ್ಯವಹಾರಗಳಿಗೆ ಉತ್ತಮವಾದ ಇಂಬು ನೀಡಿದೆ. ಡಿಜಿಟಲ್ ಆರ್ಥಿಕತೆಯು ಹಲವು ಅನುಕೂಲಗಳನ್ನು ಹೊಂದಿರುವುದರ ಜೊತೆಗೆ ಅದು ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ. ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್‌ನ ಭ್ರಷ್ಟಾಚಾರ ಗ್ರಹಿಕೆ ಸೂಚ್ಯಂಕದ ಪ್ರಕಾರ, ಈ ಪಟ್ಟಿಯಲ್ಲಿ ಶ್ರೇಷ್ಠ ಸ್ಥಾನ ಪಡೆದ ದೇಶಗಳಲ್ಲಿನ ಶೇ. 10ಕ್ಕಿಂತಲೂ ಕಡಿಮೆ ವ್ಯವಹಾರಗಳು ನಗದು ರೂಪದಲ್ಲಿ ನಡೆಯುತ್ತವೆ. ಈ ರ‍್ಯಾಂಕಿಂಗ್ ಪಟ್ಟಿಯಲ್ಲಿ ಭಾರತ 79ನೇ ಸ್ಥಾನದಲ್ಲಿದೆ.

ಡಿಜಿಟಲ್ ವ್ಯವಹಾರಗಳಿಗೆ ವೇದಿಕೆಯಾದ "ಯೂನಿಫೈಡ್ ಪೇಮೆಂಟ್ಸ್ ಇಂಟರ್‌ಫೇರೆನ್ಸ್" ವ್ಯವಸ್ಥೆಯನ್ನು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಯಶಸ್ವಿಯಾಗಿ




ಅನುಷ್ಠಾನಗೊಳಿಸಿದೆ; ಭೀಮ್ ಆ್ಯಪ್ (196 ಲಕ್ಷ ಜನರು ಡೌನ್‌ಲೋಡ್ ಮಾಡಿಕೊಂಡಿದ್ದಾರೆ) ವ್ಯಕ್ತಿಯಿಂದ–ವ್ಯಕ್ತಿಗೆ ಹಣ ಪಾವತಿ ಮತ್ತು ವ್ಯವಹಾರಕ್ಕೆ ನೆರವಾದರೆ, "ಆಧಾರ್ ಪೇ" ವ್ಯವಸ್ಥೆಯು ಅಂಗಡಿ–ಮುಂಗಟ್ಟುಗಳ ಕೌಂಟರ್‌ನಲ್ಲಿ ಡಿಜಿಟಲ್ ಪೇಮೆಂಟ್‌ಗೆ ಅವಕಾಶ ನೀಡುತ್ತದೆ. ದೀರ್ಘಕಾಲೀನ ಅನುಕೂಲಗಳ ಸೂಚನೆಯು ಈಗಾಗಲೇ ಆರ್‌ಬಿಐ ಅಂಕಿ–ಅಂಶಗಳಲ್ಲಿ ಕಂಡುಬಂದಿದ್ದು, 2017ರ ಮಾರ್ಚ್‌ನಲ್ಲಿ "ಯುಪಿಐ" ಆಧರಿತ ವ್ಯವಹಾರಗಳ ಪ್ರಮಾಣ ಶೇ. 20ರಷ್ಟು ಏರಿಕೆ ಕಂಡಿದೆ. ಡಿಜಿಟಲ್ ವ್ಯವಹಾರಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ, 2 ಕೋಟಿ ರೂ. ವರೆಗಿನ ವಾರ್ಷಿಕ ನಗದೇತರ ವಹಿವಾಟು ಹೊಂದಿರುವ ಸಣ್ಣ ಮತ್ತು ಮಧ್ಯಮ ಗಾತ್ರದ ವ್ಯಾಪಾರಿಗಳ ತೆರಿಗೆ ದರವನ್ನು ಶೇ. 8ರಿಂದ ಶೇ. 6ಕ್ಕೆ ಇಳಿಸಲಾಗಿದೆ. ಅಲ್ಲದೆ, ಸರ್ಕಾರ, ಪಿಓಎಸ್ ಯಂತ್ರಗಳು ಮತ್ತು ಮೈಕ್ರೋ ಎಟಿಎಂಗಳ ಮೇಲಿನ 'ಬಿಸಿಡಿ, ಅಬಕಾರಿ/ಸಿವಿ ಸುಂಕ ಮತ್ತು 'ಎಸ್‌ಎಡಿ'ಗೆ ವಿನಾಯಿತಿ ನೀಡಿದೆ. ಸರ್ಕಾರ ಪ್ಯಾನ್ ಜೊತೆ ಆಧಾರ್ ಲಿಂಕ್ ಮಾಡುವುದನ್ನು ಕಡ್ಡಾಯಗೊಳಿಸಿದೆ. ಮುಂದೆ 50,000 ರೂ. ಗಿಂತಲೂ ಮಿಗಿಲಾದ ನಗದು ವ್ಯವಹಾರಕ್ಕೂ ಆಧಾರ್ ಕಡ್ಡಾಯಗೊಳಿಸುವ ಕ್ರಮವನ್ನು ಪರಿಗಣಿಸುವ ಸಾಧ್ಯತೆಯಿದೆ.

### ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ)

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜಿಎಸ್‌ಟಿ ಅತಿದೊಡ್ಡ ತೆರಿಗೆ ಸುಧಾರಣೆ ಎನಿಸಿದ್ದು, ಸಂಕೀರ್ಣವಾಗಿರುವ ಪರೋಕ್ಷ ತೆರಿಗೆ ನೀತಿಯನ್ನು ಸರಳೀಕರಣಗೊಳಿಸುವುದು ಇದರ ಉದ್ದೇಶವಾಗಿದೆ. ಇದು ದೇಶಾದ್ಯಂತ ಒಂದೇ ಮಾರುಕಟ್ಟೆಯನ್ನು ನಿರ್ಮಿಸುತ್ತದೆ, ತೆರಿಗೆ ಆಡಳಿತವನ್ನು ವಿಧಿಬದ್ಧಗೊಳಿಸುತ್ತದೆ, ತೆರಿಗೆ ನೀತಿ ಅನುಷ್ಠಾನ ಸುಧಾರಿಸುತ್ತದೆ, ಹೂಡಿಕೆ ಮತ್ತು ಪ್ರಗತಿಯನ್ನು ಉತ್ತೇಜಿಸುತ್ತದೆ. ಅಲ್ಲದೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸುವ ಇತರ ಎಲ್ಲಾ ಪರೋಕ್ಷ ತೆರಿಗೆಗಳನ್ನು (ಸೀಮಾ ಸುಂಕ ಹೊರತುಪಡಿಸಿ) ಸಂಯೋಜಿಸುವ ಮೂಲಕ ಅಧಿಕ ಆದಾಯ ಸಂಗ್ರಹಕ್ಕೆ ಇದು ದಾರಿ ಮಾಡುತ್ತದೆ. ಸಂಸತ್ತಿನಲ್ಲಿ ಜಿಎಸ್‌ಟಿಗೆ ಸಂಬಂಧಿಸಿದ ಎಲ್ಲಾ ಮಸೂದೆಗಳು ಅನುಮೋದನೆಗೊಳ್ಳುವುದರ ಮೂಲಕ, ಜುಲೈ 1ರ ಅನುಷ್ಠಾನ ಗುರಿಗೆ ಈ ಹೊಸ ತೆರಿಗೆ ನೀತಿ ಮತ್ತಷ್ಟು ಹತ್ತಿರವಾಗಿದೆ. ಅತ್ಯಾಧುನಿಕ ಮಾಹಿತಿ ತಂತ್ರಜ್ಞಾನ ಮತ್ತು ತೆರಿಗೆ ವಂಚನೆಗೆ ಕಠಿಣ ಶಿಕ್ಷೆ ಹಾಗೂ ದಂಡಗಳನ್ನು ಒಳಗೊಂಡಿರುವ ಜಿಎಸ್‌ಟಿ ಜಾರಿಯಿಂದ ಭಾರತದ ರಾಷ್ಟ್ರೀಯ ಆದಾಯ ಹಾಗೂ ಜಿಡಿಪಿ ಅನುಪಾತ ಮಧ್ಯಮಾವಧಿ ಅಥವಾ ದೀರ್ಘಾವಧಿಯಲ್ಲಿ ಹೆಚ್ಚಳವಾಗಬಹುದು. ಅಲ್ಲದೆ, ವ್ಯವಹಾರಗಳ ಸರಿಯಾದ ವರದಿಯಿಂದಾಗಿ, ಈ ವ್ಯವಸ್ಥೆಯು ಸಹಜವಾಗಿಯೇ ನೇರ ತೆರಿಗೆ ಸಂಗ್ರಹ ಹೆಚ್ಚಳಕ್ಕೆ ದಾರಿ ಮಾಡುತ್ತದೆ.

### ಚುನಾವಣಾ ನಿಧಿ ಸುಧಾರಣೆ

ಚಿಂತಕರ ಸಂಸ್ಥೆ 'ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರಮ್ಸ್'ನ ವರದಿಯ ಪ್ರಕಾರ, ರಾಜಕೀಯ ಪಕ್ಷಗಳು 2004–105 ಮತ್ತು 2014–15ರ ಅವಧಿಯಲ್ಲಿ ಅಪರಿಚಿತ ಮೂಲಗಳಿಂದ 7,833 ಕೋಟಿ ರೂ. ಹಣವನ್ನು ಪಡೆದಿದ್ದು, ಇದು ಈ ಪಕ್ಷಗಳ ಒಟ್ಟು ಆದಾಯದ ಶೇ. 69ರಷ್ಟಾಗಿದೆ. ಇಲ್ಲಿ ಅಪರಿಚಿತ ಮೂಲಗಳು ಎಂದರೆ ಯಾವುವೆಂಬುದು ನಮ್ಮ ಊಹೆಗೆ ಬಿಟ್ಟ ವಿಚಾರವಾಗಿದೆ. ಕೈಗಾರಿಕೆಗಳು ಮತ್ತು ಉದ್ಯಮ ಸಂಸ್ಥೆಗಳು ಗುಪ್ತವಾಗಿ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿದರೆ, ಅದು ಸ್ವಜನ ಹಿತಾಸಕ್ತಿ ಉಗಮದ ಮೂಲವಾಗಿರುತ್ತದೆ. ಇದು ರಾಜಕೀಯ ಮತ್ತು ಉದ್ಯಮದ ನಡುವೆ ಅಕ್ರಮ ನಂಟನ್ನು ಬೆಳೆಸುತ್ತದೆ. ತಾವು ಪಡೆದಿದ್ದಕ್ಕೆ ಪ್ರತಿಯಾಗಿ ದೇಣಿಗೆ ನೀಡಿದವರಿಗೆ ಅನುಕೂಲ ಒದಗಿಸಬೇಕಾದ ಮರ್ಜಿಗೆ ರಾಜಕೀಯ ಪಕ್ಷಗಳು ಸಿಲುಕುತ್ತವೆ. ಇದರಿಂದ ಪ್ರಜಾಪ್ರಭುತ್ವ ಮತ್ತು ಜನಾದೇಶವೇ ಬುಡಮೇಲಾಗುತ್ತದೆ. ಆದ್ದರಿಂದ ಸ್ವಚ್ಛ ಆರ್ಥಿಕತೆಗೆ ಪಾರದರ್ಶಕ ರಾಜಕೀಯ ದೇಣಿಗೆ ಅತ್ಯಗತ್ಯವಾಗಿದೆ.

ಒಂದು ಮೂಲದಿಂದ ರಾಜಕೀಯ ಪಕ್ಷಗಳಿಗೆ 2,000 ರೂ. ಗರಿಷ್ಠ ದೇಣಿಗೆ ನಿಗದಿಪಡಿಸುವ ಮೂಲಕ ಈ ನಿಟ್ಟಿನಲ್ಲಿ 2017ರ ಆಯವ್ಯಯದಲ್ಲಿ ಮೊದಲ ಹೆಜ್ಜೆ ಇರಿಸಲಾಗಿದೆ. ಎಲೆಕ್ಟ್ರಾಲ್ ಬಾಂಡ್ ಎಂಬ ಹೊಸ ಪರಿಕಲ್ಪನೆಯನ್ನು ಪರಿಚಯಿಸಲಾಗಿದ್ದು, ಇದರ ಅಡಿಯಲ್ಲಿ ಕಾರ್ಪೊರೇಟ್ ದಾನಿಗಳು ಯಾರೆಂಬುದನ್ನು ಗುಪ್ತವಾಗಿರಿಸುವ ಮೂಲಕ ಅವರ ಹಿತಾಸಕ್ತಿ ಕಾಯ್ದುಕೊಳ್ಳಲಾಗುತ್ತದೆ, ಆದರೆ, ಹಣದ ಮೂಲವನ್ನು ಪತ್ತೆ ಮಾಡಲು ಅವಕಾಶವಿದೆ.

### ಭ್ರಷ್ಟಾಚಾರಕ್ಕೆ ಸೆಡ್ಡು

ಸ್ವಾತಂತ್ರ್ಯದ ಬಳಿಕ ಅಭಿವೃದ್ಧಿಯ ಫಲವನ್ನು ಬಡ ಮತ್ತು ಅರ್ಹರಿಗೆ ತಲುಪಿಸುವ ಉದ್ದೇಶದಿಂದ ಎಲ್ಲಾ ಜನಕಲ್ಯಾಣ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಆದರೆ, ಕಳೆದ ಹಲವು ವರ್ಷಗಳಲ್ಲಿ ಈ ಯೋಜನೆಗಳ ಉದ್ದಗಲಕ್ಕೂ ಹಬ್ಬಿದ ಭ್ರಷ್ಟಾಚಾರದ ಪಿಡುಗು, ಈ ಯೋಜನೆಗಳ ಹಣದ ಸೋರಿಕೆಗೆ ದಾರಿ ಮಾಡಿದ್ದು, ಅದು ಅನರ್ಹ ವ್ಯಕ್ತಿಗಳ ಕಿಸೆಗೆ ಸೇರುತ್ತಿದೆ. ಉದಾಹರಣೆಗೆ, 2015–16ರ ಆರ್ಥಿಕ ಸಮೀಕ್ಷೆಯ ಪ್ರಕಾರ, ಸರ್ಕಾರದ ಮಹತ್ವಾಕಾಂಕ್ಷೆಯ ಸಾರ್ವಜನಿಕ ವಿತರಣಾ ವ್ಯವಸ್ಥೆ ಯೋಜನೆಯ ಶೇ. 40–50% ರಷ್ಟು ಫಲವು ಸೋರಿಕೆಯಾಗುತ್ತಿದೆ. ಸರ್ಕಾರ, ಫಲಾನುಭವಿಗಳ ಖಾತೆಗೆ ನೇರ ಜಮೆ (ಡಿಬಿಟಿ) ಎಂಬ ವಿನೂತನ ಯೋಜನೆ ಮೂಲಕ ಸರ್ಕಾರ, ಈ ಫಲಗಳ ಮೌಲ್ಯಕ್ಕೆ ಸರಿದೂಗುವ ಹಣವನ್ನು ನೇರವಾಗಿ ಫಲಾನುಭವಿಗಳ, ಅರ್ಹ ಬಡಜನರ ಖಾತೆಗೆ ಜಮೆ ಮಾಡುವ ವ್ಯವಸ್ಥೆ ರೂಪಿಸಿದ್ದು, ಆ ಮೂಲಕ ಭ್ರಷ್ಟಾಚಾರ ಅವಕಾಶವನ್ನು ತಪ್ಪಿಸಿದೆ. 2014ರಲ್ಲಿ ಬಡವರು ಮತ್ತು ಹಿಂದುಳಿದವರನ್ನು ಬ್ಯಾಂಕಿಂಗ್ ವ್ಯವಸ್ಥೆಗೆ ಸೇರ್ಪಡೆಗೊಳಿಸುವ ಬೃಹತ್ ಆಂದೋಲನ ಕೈಗೊಳ್ಳಲಾಯಿತು ಮತ್ತು ಅದರ ಅಡಿಪಾಯದ ಮೇಲೆಯೇ ಖಾತೆಗೆ ನೇರ ಜಮೆ (ಡಿಬಿಟಿ) ಯೋಜನೆಯನ್ನು ರೂಪಿಸಲಾಯಿತು. 'ಜನಧನ' (ಸುಮಾರು 25.7 ಕೋಟಿ ಖಾತೆಗಳನ್ನು ತೆರೆಯಲಾಯಿತು), ಆಧಾರ್ (112 ಕೋಟಿ ನೋಂದಣಿ ದಾಟಿದೆ) ಮತ್ತು ಮೊಬೈಲ್ ಎಂಬ ಅಂಶಗಳು ಪಾರದರ್ಶಕತೆ ಮತ್ತು ಒಳಗೊಳ್ಳುವಿಕೆಗೆ ಮೂರು ಆಧಾರ ಸ್ತಂಭಗಳಾಗಿ ನಿಂತಿವೆ. ಪ್ರಸ್ತುತ 17 ಸಚಿವಾಲಯಗಳ 84 ಯೋಜನೆಗಳು 'ಡಿಬಿಟಿ' ವ್ಯಾಪ್ತಿಗೆ ಒಳಪಟ್ಟಿದ್ದು, ಕಳೆದ ಮೂರು ವರ್ಷಗಳಲ್ಲಿ ಇದರಿಂದ ಸರ್ಕಾರದ ಬೊಕ್ಕಸಕ್ಕೆ 50,000 ಕೋಟಿ ರೂ. ಉಳಿತಾಯವಾಗಿದೆ. ಯಾವುದೇ ವ್ಯಕ್ತಿಯ ಪರಿಶೀಲನೆಗಾಗಿ ಫಲಾನುಭವಿಗಳ




ಹೆಸರುಗಳನ್ನು ಅಪ್‌ಲೋಡ್ ಮಾಡುವ ಮೂಲಕ ಪಾರದರ್ಶಕತೆ ಹೆಚ್ಚಿಸುವತ್ತ ಮತ್ತೊಂದು ಹೆಜ್ಜೆ ಇರಿಸಬಹುದಾಗಿದೆ.

ಪ್ರಾಕೃತಿಕ ಸಂಪನ್ಮೂಲಗಳ ಹಂಚಿಕೆಗೆ ಹರಾಜನ್ನು ಏಕೈಕ ಮಾರ್ಗವಾಗಿ ಕಡ್ಡಾಯಗೊಳಿಸುವ ಮೂಲಕ ಸರ್ಕಾರ ಮತ್ತೊಂದು ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಭ್ರಷ್ಟಾಚಾರ ಅವಕಾಶವನ್ನು ತಡೆಗಟ್ಟಿದೆ. ಹಣಿ ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆಯ ತಿದ್ದುಪಡಿ ಮತ್ತು ಸರ್ಕಾರಿ ಇ–ಮಾರುಕಟ್ಟೆ (ಜಿಇಎಂ) ಆರಂಭಿಸುವ ಮೂಲಕ ಇದು ಸಾಧ್ಯವಾಗಿದೆ. ಸರ್ಕಾರಿ ಇಲಾಖೆಗಳು, ಸಚಿವಾಲಯಗಳು, ಸಾರ್ವಜನಿಕ ಉದ್ದಿಮೆಗಳು ಮತ್ತು ಸ್ವಾಯುತ್ತ ಸಂಸ್ಥೆಗಳು ಸರಕು/ಸೇವೆಗಳನ್ನು ಪಡೆಯಲು ಇ–ಮಾರುಕಟ್ಟೆ ವ್ಯವಸ್ಥೆಯನ್ನೇ ಬಳಸುವುದು ಕಡ್ಡಾಯವಾಗಿರುವುದರಿಂದ, ಈ ಕ್ರಮವು ಭ್ರಷ್ಟಾಚಾರದ ಮೂಲಕ್ಕೇ ಪೆಟ್ಟು ನೀಡಿದ್ದು, ದೇಶದ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಪನ್ಮೂಲ ಹೆಚ್ಚಳಕ್ಕೂ ಇದು ನೆರವಾಗಿದೆ.

**ಮುಗಿಯದ ಕಾರ್ಯಸೂಚಿ**

'ಸ್ವಚ್ಛ ಭಾರತ'ದ ನಿರ್ಮಾಣಕ್ಕೆ ಸರ್ಕಾರ ತೋರಿರುವ ಧೈರ್ಯ ಮತ್ತು ಬದ್ಧತೆ ಶ್ಲಾಘನೀಯವಾದರೂ, ಸುಸ್ಥಿರ ಮತ್ತು ವ್ಯವಸ್ಥಿತ ಪರಿಹಾರಗಳಿಗಾಗಿ ಮುಂದಿನ ಕೆಲ ಕ್ರಮಗಳನ್ನು ಅನುಸರಿಸುವುದು ಅಗತ್ಯವಾಗಿದೆ. ಈ ಕ್ರಮಗಳು ವಿವರಣಾತ್ಮಕವಾದವೇ ಹೊರತು, ಆದ್ಯಂತವಾದವಲ್ಲ.

* ತೆರಿಗೆ ನೀತಿ, ನಿಯಮಗಳ ಸರಳೀಕರಣವು ಪರಿಣಾಮಕಾರಿ ಹಾಗೂ ಭ್ರಷ್ಟಾಚಾರ ರಹಿತ ತೆರಿಗೆ ಆಡಳಿತಕ್ಕೆ ಅತ್ಯಗತ್ಯವಾಗಿದೆ. ಇದು ನಿರ್ಧಾರಸ್ವಾತಂತ್ರ್ಯ ಮತ್ತು ದಾವೆಗಳಿಗೆ ಅಲ್ಲಿ ಅವಕಾಶವಿರಬಾರದು. ಮೊದಲನೇ ಮೇಲ್ಮನವಿ ಪ್ರಾಧಿಕಾರದ ಮುಂದೆ 5.5 ಲಕ್ಷ ಕೋಟಿ ಮೌಲ್ಯದ 3 ಲಕ್ಷ ಪ್ರಕರಣಗಳು ಬಾಕಿ ಇವೆ ಎಂದು 2016–17ರ ಆಯವ್ಯಯ ಭಾಷಣದಲ್ಲಿ ತಿಳಿಸಲಾಗಿದೆ.

* ಕಾನೂನು ತಜ್ಞರ ದುರ್ಬಳಕೆಯನ್ನು ತಡೆಯುವುದು, ಇಲ್ಲಿ ಬಲವರ್ಧನೆ ಅಗತ್ಯವಿರುವ ಮತ್ತೊಂದು ಅಂಶವಾಗಿದೆ. ಸರಳ ಕಾರ್ಪೊರೇಟ್ ಪ್ರಕ್ರಿಯೆಗಳನ್ನು ದುರ್ಬಳಕೆ ಮಾಡಿಕೊಂಡು ನಕಲಿ ಕಂಪನಿಗಳು ನಾಯಿ ಕೊಡೆಗಳಂತೆ ತಲೆಯೆತ್ತಿವೆ. ಒಂದೇ ವಿಳಾಸದಲ್ಲಿ ನೂರಾರು ಕಂಪನಿಗಳನ್ನು ನೊಂದಣಿ ಮಾಡಲಾಗಿದೆ. ಸಾಮಾನ್ಯವಾಗಿ ಅವೆಲ್ಲವೂ ಕಡಿಮೆ ಬಂಡವಾಳದ, ಒಬ್ಬರೇ ಅಥವಾ ನೌಕರರೇ ಇಲ್ಲದ ಮತ್ತು ಆದಾಯವೇ ಇಲ್ಲದ ವ್ಯಕ್ತಿಯನ್ನು ನಿರ್ದೇಶಕರಾಗಿ ಹೊಂದಿರುವ ಕಂಪನಿಗಳಾಗಿರುತ್ತವೆ. ಕಳೆದ ಹಲವು ವರ್ಷಗಳಲ್ಲಿ ಈ ಕಂಪನಿಗಳು ನಕಲಿ ಬಿಲ್‌ಗಳನ್ನು ತಯಾರಿಸುವ, ನಕಲಿ ಷೇರು ಬಂಡವಾಳ ಒದಗಿಸುವ, ನಕಲಿ ಸಾಲ ತೋರಿಸುವ ಅಥವಾ ಆ ವಿಷಯಕ್ಕೆ ಬಂದರೆ, ಯಾವುದೇ ಹಣಕಾಸು ವ್ಯವಹಾರವನ್ನು ನಕಲು ಮಾಡುವ ವ್ಯವಸ್ಥೆಯೊಂದನ್ನು ರೂಪಿಸಿಕೊಂಡಿವೆ. ಸಂಖ್ಯಾ ಬಾಹುಳ್ಯದಿಂದಾಗಿ ಇವುಗಳನ್ನು ಪತ್ತೆ ಮಾಡುವುದು ಕಷ್ಟ ಮತ್ತು ಈಗ ಇರುವ ಕಾನೂನುಗಳ ಪ್ರಕಾರ ಇವುಗಳನ್ನು ನಿರೂಪಿಸುವುದೂ ಕಷ್ಟ. 2013–14ರಿಂದ 2015–16ರ ಅವಧಿಯಲ್ಲಿ, 1155 ನಕಲಿ ಕಂಪನಿಗಳು/ಸಂಸ್ಥೆಗಳನ್ನು, 22,000 ಫಲಾನುಭವಿಗಳು 13,300 ಕೋಟಿ ರೂ.ಗಿಂತಲೂ ಅಧಿಕ ಮೊತ್ತದ ಅಕ್ರಮ ವ್ಯವಹಾರಕ್ಕೆ ಹಾದಿಯಾಗಿ ಬಳಸಿಕೊಂಡಿರುವುದು ಐಟಿ ತನಿಖೆ ವೇಳೆ ಬಯಲಾಗಿದೆ. ಆದರೆ ಈ ಕಂಪನಿಗಳ ವಿರುದ್ಧ ಹೂಡಲಾದ ದಾವೆಗಳಲ್ಲಿ, ಮಿಶ್ರ ತೀರ್ಪು ಬಂದಿದೆ. ನಕಲಿ ಕಂಪನಿಯನ್ನು ನಡೆಸುವುದು, ನಕಲಿ ಹಣಕಾಸು ವ್ಯವಹಾರ ಮುಂತಾದ ಅಪರಾಧಗಳನ್ನು ಸಂಘಟಿತ ಅಪರಾಧ ಎಂದು ಪರಿಗಣಿಸುವುದು ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಗೆ ಅವಕಾಶ ನೀಡುವ ಕಾನೂನು ರೂಪಿಸುವತ್ತ ಗಮನ ಹರಿಸುವುದು ಒಳಿತು.

* ತೆರಿಗೆದಾತರು ಮತ್ತು ತೆರಿಗೆ ಇಲಾಖೆ ಅಧಿಕಾರಿಗಳ ನಡುವೆ ನೇರ ಸಂಪರ್ಕವನ್ನು ಕಡಿಮೆ ಮಾಡಬೇಕು. ನೇರ ಸಂಪರ್ಕಕ್ಕೆ ಕನಿಷ್ಠ ಅವಕಾಶ ನೀಡಿದರೂ, ಅದಕ್ಕೆ ಪ್ರಮಾಣಕವಾಗಬಲ್ಲ ನೀತಿಗಳನ್ನು ರೂಪಿಸಬೇಕು ಮತ್ತು ಮೇಲಾಧಿಕಾರಿಗಳ ಉಸ್ತುವಾರಿಯಲ್ಲಿ ಈ ಸಂಪರ್ಕ




ಏರ್ಪಡಬೇಕು. ಆದಾಯ ತೆರಿಗೆ ಇಲಾಖೆ ಆರಂಭಿಸಿರುವ 'ಇ–ಅಸೆಸ್‌ಮೆಂಟ್' ಈ ನಿಟ್ಟಿನಲ್ಲಿ ಸರಿಯಾದ ಹೆಜ್ಜೆಯಾಗಿದೆ.

* ಭಾರತವು ಸದಸ್ಯತ್ವ ಹೊಂದಿರುವ ಹಣಕಾಸು ಕಾರ್ಯಪಡೆ ಪಡೆಯ (ಎಫ್‌ಎಟಿಎಫ್) ಶಿಫಾರಸಿನಂತೆ ಒಂದು ದೇಶದ ಹಣಕಾಸು ಸಂಸ್ಥೆಗಳು, ರಾಜಕೀಯಲ್ಲಿರುವ ವ್ಯಕ್ತಿಗಳ (ಪಿಇಪಿ) ಜೊತೆ ತಮ್ಮ ವ್ಯವಹಾರ ಸಂಬಂಧ ಗುರುತಿಸುವುದನ್ನು ಕಡ್ಡಾಯಗೊಳಿಸಬೇಕು ಮತ್ತು ಪರಿಹಾರ ಕ್ರಮದ

* ಭಾಗವಾಗಿ ಸೂಕ್ತ ಅಪಾಯ ನಿರ್ವಹಣೆ ವ್ಯವಸ್ಥೆಯನ್ನು ಅನುವುಗೊಳಿಸಬೇಕು.

* ಕೇಂದ್ರ ಮತ್ತು ರಾಜ್ಯ ಮಟ್ಟದ ಕಾನೂನು ಜಾರಿ ಇಲಾಖೆಗಳ ನಡುವೆ ಸುಲಲಿತ ಸಹಯೋಗಕ್ಕೆ ಉತ್ತೇಜನ ನೀಡುವುದು.

**ಸುಸ್ಥಿರ ಪ್ರಯತ್ನದ ಅಗತ್ಯ**

ಭ್ರಷ್ಟಾಚಾರ ನಿಗ್ರಹ ಮತ್ತು ಸ್ವಚ್ಛ ಆರ್ಥಿಕತೆಗಾಗಿ ಸರ್ಕಾರ ಕೈಗೊಂಡ ಮಹತ್ವದ ಕ್ರಮಗಳ ವಿಚಾರದಲ್ಲಿ ಶ್ಲಾಘನೀಯ ಫಲಿತಾಂಶ ಕಂಡುಬಂದಿದೆ. ಇದೇ ಹುರುಪಿನಿಂದ ಈ ಅಭಿಯಾನವನ್ನು ಮುಂದುವರಿಸಿದ್ದಾದರೆ, ಇದು ಬಡವರಿಂದ ಶ್ರೀಮಂತರವರೆಗೂ ಎಲ್ಲರಿಗೂ ಅಸಂಖ್ಯ ಅನುಕೂಲಗಳನ್ನು ಒದಗಿಸುವ ಆರ್ಥಿಕ ರಚನೆಗೆ ದಾರಿ ಮಾಡಲಿದೆ. ಜೊತೆಗೆ, ಬಡತನ ನಿರ್ಮೂಲನೆ, ಉದ್ಯೋಗ ಸೃಷ್ಟಿ ಮತ್ತು ಕೌಶಲ್ಯ ವೃದ್ಧಿಗೂ ಇದು ಕಾರಣವಾಗಲಿದೆ. ಈ ಪ್ರಕ್ರಿಯೆಯಲ್ಲಿ ಕೊಂಚ ಮಟ್ಟದ ನೋವು ಅನಿವಾರ್ಯವಾಗಿದ್ದು, ಅದಿಲ್ಲದೆ ಯಾವುದೇ ಪರಿವರ್ತನೆ ಸಾಧ್ಯವಿಲ್ಲ. ತ್ಯಾಗವಿಲ್ಲದೆ ಏನನ್ನೂ ಗಳಿಸಲು ಸಾಧ್ಯವಿಲ್ಲ. ಈ ವಿಚಾರದಲ್ಲಾದರೆ, ನಾವು ಸ್ವಚ್ಛ ಮತ್ತು ಪಾರದರ್ಶಕ ಆರ್ಥಿಕತೆಗಾಗಿ ಒಂದು ಸಣ್ಣ ಬೆಲೆಯನ್ನಷ್ಟೇ ತೆರಬೇಕಿದೆ. ❑

# ಜ್ಞಾನ ಆರ್ಥಿಕತೆಯತ್ತ ಭಾರತ

* ಡಾ. ಓಂಕಾರ ರೈ



ಭಾರತವು ಜಾಗತಿಕ ಮಟ್ಟದಲ್ಲಿ ತೆರೆದುಕೊಳ್ಳುತ್ತಿದ್ದಂತೆ ಅದಕ್ಕೆ ತಕ್ಕಂತೆ ಬದಲಾವಣೆಯನ್ನೂ ಮಾಡಿಕೊಳ್ಳಬೇಕು. ಈ ಹಂತದಲ್ಲಿ ತಾಂತ್ರಿಕವಾಗಿ ಅದರಲ್ಲೂ ಮುಖ್ಯವಾಗಿ ಮಾಹಿತಿ ತಂತ್ರಜ್ಞಾನದಲ್ಲಿ ಹೊಸ ಆವಿಷ್ಕಾರಗಳೊಂದಿಗೆ ಉನ್ನತಿ ಸಾಧಿಸುವುದು ಅತ್ಯಗತ್ಯ.

ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವವಾದ ಭಾರತದ ವ್ಯವಸ್ಥೆಯನ್ನು ಅಂಕೀಕರಣದ ಮೂಲಕ ಸದೃಢಗೊಳಿಸುವ ಪ್ರಯತ್ನ ಸಾಗಿದೆ. ಡಿಜಿಟಲ್ ಇಂಡಿಯಾ ಯಶಸ್ವಿ ಅನುಷ್ಠಾನಕ್ಕೆ ಜನರ ಪಾಲ್ಗೊಳ್ಳುವಿಕೆ, ಒಳಗೊಳ್ಳುವಿಕೆ, ಜವಾಬ್ದಾರಿ ನಿರ್ವಹಣೆ ಮತ್ತು ಪಾರದರ್ಶಕ ಆಡಳಿತವೂ ಅಷ್ಟೇ ಮುಖ್ಯ. ಅದರ ಜೊತೆಗೆ ಅಂತಹ ವಾತಾವರಣ ನಿರ್ಮಿಸಬೇಕಾಗಿದೆ.

### ಯೋಜನೆಯ ಅಗತ್ಯ

ಪ್ರತಿಯೊಂದು ಆರಂಭಕ್ಕೂ ತನ್ನದೇ ಆದ ಒಂದು ಕಾರಣ ಇರುತ್ತದೆ. ಪರಿವರ್ತನೆಯ ಕಲ್ಪನೆಯ ಮೊಳಕೆಯನ್ನು ಅನಿವಾರ್ಯಗೊಳಿಸುವ ಸಂದರ್ಭದಲ್ಲಿ ಸಮಾಜದ ಮೂಲಭೂತ ತತ್ವಗಳ ವಿಶೇಷ ಅಂಶಗಳನ್ನು ಬದಲಾಯಿಸುವ ದೃಷ್ಟಿಯಿಂದ ಹಲವು ಸವಾಲುಗಳ ಸಾಕ್ಷಾತ್ಕಾರವೂ ಒಂದು ಕಾರಣವಾಗಿದೆ. ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತನ್ನ ಆರ್ಥಿಕ ಶಕ್ತಿಯ ಸಾಧನೆಯ ಕುರಿತು ಜಾಗತಿಕ ಮಟ್ಟದಲ್ಲಿ ಪ್ರತಿಪಾದನೆ ಮಾಡುವ ಸಂದರ್ಭದಲ್ಲಿ ಪ್ರತಿಯೊಂದು ಅಂಶವನ್ನೂ ಗಮನಿಸಬೇಕಾಗುತ್ತದೆ. ದೇಶದ ನಾಗರಿಕರಿಗೆ ಸಾರ್ವಜನಿಕ ಮಾಹಿತಿ, ಸರ್ಕಾರದ ಧೋರಣೆ, ನೀತಿಗಳ ಕುರಿತು ಮುಕ್ತ ಚರ್ಚೆ, ಸಾಮಾಜಿಕ ಮತ್ತು ಆರ್ಥಿಕತೆಯ ಭೇದವಿಲ್ಲದೆ ದೇಶದ ನೀತಿ ನಿರೂಪಣೆಯಲ್ಲಿ ಜನರ ಸಹಭಾಗಿತ್ವ ಮತ್ತು ಕೊಡುಗೆಯೂ ಅಷ್ಟೇ ಮುಖ್ಯವಾಗುತ್ತದೆ. ದೇಶದ ಆಡಳಿತ ವ್ಯವಸ್ಥೆ ಈಗ ಏಕಮುಖಿಯಾಗಿಲ್ಲ. ಜನರ ಪಾಲ್ಗೊಳ್ಳುವಿಕೆ, ಚರ್ಚೆ, ಸಹಕಾರ, ಸಹಭಾಗಿತ್ವಕ್ಕೂ ಹೆಚ್ಚು ಮನ್ನಣೆ ಸಿಕ್ಕಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಬಹುಸಂಖ್ಯಾತ ಯುವಜನರ ಒಳಿತೇ ಹೆಚ್ಚು ಮಹತ್ವದ್ದಾಗಿದೆ. ದೇಶದ ಸಾಮಾಜಿಕ, ಆರ್ಥಿಕ ಸೂಚ್ಯಂಕದ ಏರಿಕೆಗೆ ರಾಷ್ಟ್ರ– ರಾಜ್ಯ ಮಟ್ಟದಲ್ಲಿ ವಿಘಟನೆಯ ಸವಾಲುಗಳನ್ನು ಪರಿವರ್ತಿಸುವ ಕುರಿತು ಯೋಜನೆ ರೂಪಿಸುವುದು, ಚರ್ಚಿಸುವುದೂ ಈ ಸಂದರ್ಭದಲ್ಲಿ ಸೂಕ್ತವಾಗಿದೆ. ಭಾರತವು ಜಾಗತಿಕ ಮಟ್ಟದಲ್ಲಿ ತೆರೆದುಕೊಳ್ಳುತ್ತಿದ್ದಂತೆ ಅದಕ್ಕೆ ತಕ್ಕಂತೆ ಬದಲಾವಣೆಯನ್ನೂ ಮಾಡಿಕೊಳ್ಳಬೇಕು. ಈ ಹಂತದಲ್ಲಿ ತಾಂತ್ರಿಕವಾಗಿ ಅದರಲ್ಲೂ ಮುಖ್ಯವಾಗಿ ಮಾಹಿತಿ ತಂತ್ರಜ್ಞಾನದಲ್ಲಿ ಹೊಸ ಆವಿಷ್ಕಾರಗಳೊಂದಿಗೆ ಉನ್ನತಿ ಸಾಧಿಸುವುದು ಅತ್ಯಗತ್ಯ. ಇದಕ್ಕೆ ಪೂರಕವಾಗಿ ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಆಡಳಿತದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಅವರನ್ನು ಡಿಜಿಟಲ್ ನಾಗರಿಕರನ್ನಾಗಿ ಪರಿವರ್ತಿಸಿ, ಬೆಳೆಸಲು ಸರ್ಕಾರವೂ ಸಹ ಮಾಹಿತಿ ತಂತ್ರಜ್ಞಾನ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕು. ಇದನ್ನೇ ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಂಡು ಪ್ರತಿಯೊಬ್ಬರೂ ಪಾಲ್ಗೊಳ್ಳುವಂತೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಭಾರತ ಸರ್ಕಾರವು ಪಾರದರ್ಶಕ ಆಡಳಿತದ ಮೂಲಕ ಪ್ರತಿಯೊಬ್ಬರಿಗೂ ಮಾಹಿತಿ ಸೌಲಭ್ಯ ಒದಗಿಸಲು ಡಿಜಿಟಲ್ ತಂತ್ರಜ್ಞಾನಯುಕ್ತ ನಾಗರಿಕ ಸಮಾಜ ನಿರ್ಮಿಸಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಡಿಜಿಟಲ್ ಇಂಡಿಯಾ ಯೋಜನೆಯನ್ನು ಕೇಂದ್ರ ಬಿಂದು ಮಾಡಿಕೊಂಡು ಅದರ ಮೂಲಕ ಯಾವುದೇ ತಾರತಮ್ಯವಿಲ್ಲದೆ ದೇಶದ ಎಲ್ಲ ನಾಗರಿಕರಿಗೂ ಉತ್ತಮ ಆಡಳಿತ ನೀಡುವ ಕಾರ್ಯವನ್ನು ಆರಂಭಿಸಿದೆ.

### ಡಿಜಿಟಲ್ ಇಂಡಿಯಾದ ಕಾರ್ಯವೇನು?

ಪ್ರತಿಯೊಂದು ಯೋಜನೆಗೂ ತನ್ನದೇಯಾದ ಗುರಿ, ದೃಷ್ಟಿಕೋನವನ್ನು

* ಮಹಾನಿರ್ದೇಶಕರು, ಎಸ್‌ಟಿಪಿಐ. E-mail : rai@stpi.in




ಹೊಂದಿರುತ್ತದೆ. ಅದರಂತೆ ಡಿಜಿಟಲ್ ಇಂಡಿಯ ಸಹ ಆಡಳಿತ ಮತ್ತು ಸಾರ್ವಜನಿಕ ಸೇವೆಗಳ ಅಸ್ತಿತ್ವದಲ್ಲಿರುವ ಪರಿಸರ ವ್ಯವಸ್ಥೆಯನ್ನು ಮಾಹಿತಿ ತಂತ್ರಜ್ಞಾನ ಶಕ್ತಿಯನ್ನಾಗಿ ಪರಿವರ್ತಿಸುವ ಉದ್ದೇಶವನ್ನು ಒಳಗೊಂಡಿದೆ. 'ಭಾರತದ ಪ್ರತಿಭೆ (ಐಟಿ)+ ಭಾರತೀಯ ತಂತ್ರಜ್ಞಾನ (ಐಟಿ)= ಭಾರತದ ನಾಳೆ (ಐಟಿ)' ಎಂಬ ಘೋಷ ವಾಕ್ಯದೊಂದಿಗೆ ಭಾರತವನ್ನು ಡಿಜಿಟಲ್ ಸಂಪರ್ಕ ರಾಷ್ಟ್ರವನ್ನಾಗಿ ಪರಿವರ್ತಿಸುವುದೇ ಡಿಜಿಟಲ್ ಇಂಡಿಯಾ ಯೋಜನೆಯ ಮಹದುದ್ದೇಶ. ಸಮಾಜ ಮತ್ತು ಜ್ಞಾನದ ಆರ್ಥಿಕತೆಗೆ ದೇಶವನ್ನು ಪರಿವರ್ತಿಸುವ ದೃಷ್ಟಿಯಿಂದ ಭಾರತವು ಡಿಜಿಟಲ್ ಇಂಡಿಯ ಯೋಜನೆ ಜಾರಿಗೆ ತಂದಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದೆ. ಈ ಕಾರ್ಯಕ್ರಮವು ಪ್ರಮುಖವಾಗಿ ಮೂರು ದೃಶ್ಯ ಪ್ರದೇಶಗಳನ್ನು ಒಳಗೊಂಡಿದೆ. ಅವುಗಳೆಂದರೆ ಪ್ರತಿಯೊಬ್ಬ ನಾಗರಿಕನಿಗೂ ಡಿಜಿಟಲ್ ಮೂಲಸೌಲಭ್ಯ ಮುಖ್ಯವಾಗಿ ಬಳಕೆ ಆಗುವಂತಿರಬೇಕು, ಬೇಡಿಕೆಯ ಆಡಳಿತ ಮತ್ತು ನಾಗರಿಕ ಸೇವೆ ಒದಗಿಸುವುದು ಮತ್ತು ಪ್ರತಿಯೊಬ್ಬ ವ್ಯಕ್ತಿಯೂ ಡಿಜಿಟಲ್ ಅಧಿಕಾರ ಪಡೆಯುವುದು. ಪ್ರತಿಯೊಬ್ಬ ವ್ಯಕ್ತಿಗೂ ಡಿಜಿಟಲ್ ಮೂಲಸೌಲಭ್ಯ ಎಂಬ ದೃಷ್ಟಿಕೋನವು ಡಿಜಿಟಲ್ ಇಂಡಿಯಾ ಬಹುದೊಡ್ಡ ಕನಸನ್ನು ನನಸಾಗಿಸಲು ನೆರವಾಗುತ್ತದೆ. ಸುಸಂಘಟಿತ ದೇಶವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತ ಮುಂದಿದೆ. ಬ್ರಾಡ್‌ಬ್ಯಾಂಡ್ ಮತ್ತು ಹೈಸ್ಪೀಡ್ ಅಂತರ್ಜಾಲದ ಮೂಲಕ ಡಿಜಿಟಲ್ ಸಂಪರ್ಕ ಕಲ್ಪಿಸಿ ಹಳ್ಳಿಗಳನ್ನು ಸಂಪರ್ಕಿಸುವುದು ಮತ್ತು ಮೂಲಸೌಲಭ್ಯ ಒದಗಿಸುವುದು ಉದ್ದೇಶದ ಮುಖ್ಯ ಅಂಶವಾಗಿದೆ. ಇದು ಪ್ರತಿಯೊಬ್ಬ ನಾಗರಿಕನಿಗೂ ಇ ಆಡಳಿತ ಸೇವೆ ಒದಗಿಸುವುದು, ಸಮಾಜಕ್ಕೆ ಸೌಲಭ್ಯ ಒದಗಿಸುವುದು ಮತ್ತು ಆರ್ಥಿಕತೆಯ ಆಡಳಿತದಲ್ಲಿ ಪಾಲ್ಗೊಳ್ಳುವಂತೆ ಮಾಡುವ ಭರವಸೆಯನ್ನೂ ಮೂಡಿಸುವುದು.

ಎರಡನೇ ಉದ್ದೇಶವು, ಆಡಳಿತ ಮತ್ತು ಬೇಡಿಕೆ ಆಧರಿತ ಸೇವೆಗಳಲ್ಲಿ ಪಾರದರ್ಶಕ ಮತ್ತು ತುರ್ತು ಸರ್ಕಾರಿ ಸೇವೆಗಳತ್ತ ಕೇಂದ್ರೀಕರಿಸುವುದು. ದೇಶದ ಹಲವು ರಾಜ್ಯಗಳಲ್ಲಿ ಕೆಲ ದಶಕಗಳಿಂದ ಇ–ಆಡಳಿತ ಸೇವೆ ಜಾರಿಯಲ್ಲಿದೆ. ಆದರೆ ಜನರ ಪಾಲ್ಗೊಳ್ಳುವಿಕೆ, ಜಾಗೃತಿ ಮತ್ತು ಸಮನ್ವಯದ ಕೊರತೆಯಿಂದ ಇನ್ನೂ ಅನುಷ್ಠಾನದ ಆರಂಭಿಕ ಹಂತದಲ್ಲಿಯೇ ಇದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಾಗದ ಕೃತಿಗಳ ಕಂಪ್ಯೂಟರೀಕರಣ ಮತ್ತು ನೀತಿ ನಿರೂಪಣೆ ಯಾಂತ್ರೀಕೃತ ಪ್ರಕ್ರಿಯೆ ಆರಂಭಿಸಿದಾಗ ಇ–ಆಡಳಿತ ಕಾರ್ಯಾರಂಭ ಮಾಡಿದೆ.

ಇನ್ನು ಮೂರನೇ ಉದ್ದೇಶದ ವ್ಯಾಪ್ತಿಯು ನಾಗರಿಕರ ಡಿಜಿಟಲ್ ಸಬಲೀಕರಣ ಒಳಗೊಂಡಿದೆ. ಡಿಜಿಟಲ್ ಸಂಪರ್ಕವು ದೇಶದ ಎಲ್ಲ ಪ್ರಜೆಗಳನ್ನು ಯಾವುದೇ ಭೇದವಿಲ್ಲದೆ ಪ್ರಾದೇಶಿಕ ಮತ್ತು ಸಾಮಾಜೋ ಆರ್ಥಿಕ ಸ್ಥಾನಗಳೊಂದಿಗೆ ಒಂದೇ ವೇದಿಕೆಗೆ ತರುವ ವಾತಾವರಣ ಸೃಷ್ಟಿಸುತ್ತದೆ. ಇಂಟರ್‌ನೆಟ್ ಮತ್ತು ಮೊಬೈಲ್ ಫೋನ್‌ಗಳ ವಿಕಾಸವೇ ಇದಕ್ಕೆ ಸಾಕ್ಷಿ. ಡಿಜಿಟಲ್ ಇಂಡಿಯ ಯೋಜನೆಯು ಸಾಕ್ಷರತೆ, ಡಿಜಿಟಲ್ ಸಂಪನ್ಮೂಲ ಮತ್ತು ಡಿಜಿಟಲ್ ವೇದಿಕೆಯ ಸಹಕಾರಗಳೊಂದಿಗೆ ಭಾರತವನ್ನು ಡಿಜಿಟಲ್ ಸಬಲೀಕೃತ ಸಮಾಜವನ್ನಾಗಿ ಪರಿವರ್ತಿಸುವ ಉದ್ದೇಶವನ್ನು ಒಳಗೊಂಡಿದೆ.

**ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ಘಟ್ಟಗಳು**

ಯಾವುದೇ ಯೋಜನೆಯ ಯಶಸ್ಸಿಗೆ ಸಮಗ್ರ ವಿನ್ಯಾಸವೂ ಅಗತ್ಯ. ಹಾಗಾಗಿಯೇ ಡಿಜಿಟಲ್ ಇಂಡಿಯ ಕಾರ್ಯಕ್ರಮ ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲು ಒಂಭತ್ತು ಘಟ್ಟಗಳ ಯೋಜನೆಯನ್ನು ರೂಪಿಸಿದೆ. ಪ್ರತಿ ಘಟ್ಟವೂ ಕಾರ್ಯ ಯೋಜನೆಯ ವ್ಯಾಪ್ತಿಯನ್ನು ಒಳಗೊಂಡು, ನಿರಂತರ ಯಶಸ್ಸಿಗೆ ತನ್ನದೇ ಕೊಡುಗೆಯನ್ನು ನೀಡುತ್ತದೆ.

**ಬ್ರಾಡ್‌ಬ್ಯಾಂಡ್ ಹೆದ್ದಾರಿ:** ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ಮೊದಲ ಘಟ್ಟವಾದ ಬ್ರಾಡ್‌ಬ್ಯಾಂಡ್ ಹೆದ್ದಾರಿ ನಿರ್ಮಾಣ ಹಂತವು ಬಹು ವಿಸ್ತಾರವಾದ ಸಂಪರ್ಕ ಜಾಲ ಸೃಷ್ಟಿಸುತ್ತದೆ. ರಾಷ್ಟ್ರೀಯ ಆಪ್ಟಿಕಲ್ ಫೈಬರ್ ನೆಟ್‌ವರ್ಕ್ (ಎನ್‌ಓಎಫ್‌ಎನ್) ಮೂಲಕ ದೇಶದ 2.5 ಲಕ್ಷ ಗ್ರಾಮ ಪಂಚಾಯತ್‌ಗಳಿಗೆ ಸಂಪರ್ಕ ಕಲ್ಪಿಸುವ ವ್ಯವಸ್ಥೆ ಮಾಡಲಾಗಿದೆ. ಇದು ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಜನರು ಸುಲಭವಾಗಿ ಮತ್ತು ಪರಿಣಾಮಕಾರಿಯಾಗಿ ಮಾಹಿತಿ ಪಡೆದು, ಸೌಲಭ್ಯಗಳ ಪ್ರಯೋಜನ ಪಡೆಯಲು ಅನುವು ಮಾಡಿಕೊಡುತ್ತದೆ. ಇದನ್ನು ಅಭಿವೃದ್ಧಿ ತಾರ್ಕಿಕ ಗುರಿ ತಲುಪಲು ಭಾರತ ಸರ್ಕಾರವು ಭಾರತ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ಲಿಮಿಟೆಡ್ (ಬಿಬಿಎನ್‌ಎಲ್) ಆರಂಭಿಸಿ, ಅದಕ್ಕೆ ರೂ. 100 ಕೋಟಿ ಬಂಡವಾಳ ತೊಡಗಿಸಿದೆ. ಬಿಬಿಎನ್‌ಎಲ್ ದೇಶದ 2.5 ಲಕ್ಷ ಗ್ರಾಮ ಪಂಚಾಯತ್‌ಗಳು, 6,600 ತಾಲ್ಲೂಕುಗಳು ಮತ್ತು 641 ಜಿಲ್ಲೆಗಳ ನಡುವೆ ಸಂಪರ್ಕ ಕಲ್ಪಿಸುವ ಎನ್‌ಓಎಫ್‌ಎನ್‌ಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತದೆ. ಈ ಯೋಜನೆಯ ಮೂಲಕ ದೇಶದ ಎಲ್ಲ ಪಂಚಾಯತ್ ಮಟ್ಟದಲ್ಲಿಯೇ ಜನರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸಲು ಸಹಕಾರಿಯಾಗಿವೆ.

ಮೊಬೈಲ್ ಮತ್ತು ಸಾರ್ವತ್ರಿಕ ಲಭ್ಯತೆಯು ಎರಡನೇ ಘಟ್ಟವಾಗಿದೆ. ದೇಶದ ಪ್ರತಿಯೊಂದು ಪ್ರದೇಶವೂ ಮೊಬೈಲ್ ಸಂಪರ್ಕ ಜಾಲ ಹೊಂದಿರಬೇಕು ಎನ್ನುವುದು ಇದರ ಆಶಯ. ದೇಶದ 42 ಸಾವಿರ ಹಳ್ಳಿಗಳಲ್ಲಿ ಇಂದಿಗೂ ಮೊಬೈಲ್ ಸಂಪರ್ಕ ಸೇವೆ ಇಲ್ಲ. ಇದನ್ನು ಮನಗಂಡು ದೂರ ಸಂಪರ್ಕ ಇಲಾಖೆಯು 2014–18ರ ಒಳಗಾಗಿ ಅಧಿಕೃತ ಸೌಲಭ್ಯ ಒದಗಿಸಲು ರೂ. 16 ಸಾವಿರ ಕೋಟಿ ಅನುದಾನವನ್ನು ಮೀಸಲಿಟ್ಟಿದೆ. 2018ರ ವೇಳೆಗೆ ಮೊಬೈಲ್ ಸಂಪರ್ಕ ಯೋಜನೆಯು ಪೂರ್ಣಗೊಳ್ಳಲಿದ್ದು, ಮುಂದಿನ ದಿನಗಳಲ್ಲಿ ಸಂಪೂರ್ಣ ಮೊಬೈಲ್ ಪ್ರಸಾರ ಸಂಪರ್ಕ ವ್ಯವಸ್ಥೆ ಹೊಂದಿದ ದೇಶವಾಗಿ ಹೊರಹೊಮ್ಮಲಿದೆ.

ಮೂರನೆಯದು ಸಾರ್ವಜನಿಕ ಇಂಟರ್‌ನೆಟ್ ಪ್ರವೇಶ ಯೋಜನೆ. ಭಾರತ ಸರ್ಕಾರವು 2.5 ಲಕ್ಷ ಸಾಮಾನ್ಯ ಸೇವಾ ಕೇಂದ್ರಗಳನ್ನು (ಸಿಎಸ್‌ಸಿಎಸ್) ತೆರೆಯಲು ಯೋಜಿಸಿದೆ. ಪ್ರತಿಯೊಂದು ಗ್ರಾಮ ಪಂಚಾಯತ್‌ನ ನಾಗರಿಕ ಸೇವಾ ತೆರೆದು ಸೌಲಭ್ಯ ಒದಗಿಸಲು ಆದ್ಯತೆ ನೀಡಿದೆ. ಪ್ರಸ್ತುತ ಈಗ 1.62 ಲಕ್ಷ ಪಂಚಾಯತ್‌ಗಳಲ್ಲಿ



2.42 ಲಕ್ಷ ಸೇವಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಸರ್ಕಾರದ ಮಾಹಿತಿ ಮತ್ತು ನಾಗರಿಕ ಸೇವೆಗಳನ್ನು ಒದಗಿಸುವಲ್ಲಿ ಬಹುಮುಖ್ಯ ಪಾತ್ರವನ್ನೂ ನಿರ್ವಹಿಸುತ್ತಿವೆ.

ನಾಲ್ಕನೆಯದು ಇ– ಆಡಳಿತ. ತಂತ್ರಜ್ಞಾನದ ಮೂಲಕ ಆಡಳಿತ ಸುಧಾರಣೆ, ಸರ್ಕಾರದ ವಿವಿಧ ಇಲಾಖೆಗಳ ಹಲವಾರು ಸೇವೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದು ಮತ್ತು ಸೇವೆಯನ್ನು ಸರಳಗೊಳಿಸಲು ಈ ಯೋಜನೆಯನ್ನು ಬಳಸಿಕೊಳ್ಳುತ್ತಿದೆ. ಪಾರದರ್ಶಕ ಮತ್ತು ಸುಲಭ, ಸರಳ ಆಡಳಿತ ನಿರ್ವಹಣೆಗೂ ಇದು ಪೂರಕ.

ಐದನೇ ಘಟ್ಟವು ಇ– ಕ್ರಾಂತಿ: ಸೇವೆಗಳ ವಿದ್ಯುನ್ಮಾನ ವಿತರಣೆ. ದೇಶದ ಎಲ್ಲ ನಾಗರಿಕರಿಗೆ ಇ– ಆಡಳಿತ ಮತ್ತು ಎಂ– ಆಡಳಿತದ ಮೂಲಕ ಉತ್ತಮ ಸೇವೆ ಒದಗಿಸಲು ಇ– ಕ್ರಾಂತಿ ಸಹಕಾರಿಯಾಗಿದೆ. ಇದು ಇ–ಪರಿವರ್ತಿತ ಆಡಳಿತಕ್ಕಾಗಿ ಇ–ಆಡಳಿತ ಪರಿವರ್ತನೆಯ ದೃಷ್ಟಿಕೋನವನ್ನು ಹೊಂದಿದೆ. ಈಗಾಗಲೇ ಇ–ಕ್ರಾಂತಿ ಅಡಿ 44 ಮಿಷನ್ ಮೋಡ್‌ಗಳನ್ನು ಕಾರ್ಯಗತ ಮಾಡಲಾಗಿದೆ. ಈಗ, ಇ–ಕ್ರಾಂತಿಯು 3325 ಇ–ಸೇವೆಗಳನ್ನು ಒದಗಿಸುವ ಮೂಲಕ ಅದ್ಭುತ ಯಶಸ್ಸು ಗಳಿಸಿದೆ.

ಎಲ್ಲರಿಗೂ ಮಾಹಿತಿ ಎಂಬುದು ಡಿಜಿಟಲ್ ಇಂಡಿಯದ ಆರನೇ ಘಟ್ಟ: ಆಡಳಿತದಲ್ಲಿ ಪಾರದರ್ಶಕತೆಯನ್ನು ಒದಗಿಸಲು ಇದು ಹೆಚ್ಚು ಪರಿಣಾಮಕಾರಿಯಾಗಿದೆ. ಮುಕ್ತ ಡಾಟಾ ಅಡಿಯಲ್ಲಿ ಸಚಿವಾಲಯಗಳು/ ಇಲಾಖೆಗಳು ಸಾರ್ವಜನಿಕ ಬಳಕೆಗೆ ಮಾಹಿತಿ ಬಿಡುಗಡೆ ಮಾಡುತ್ತವೆ. ಮಾಹಿತಿ, ದಾಖಲೆಗಳು, ಸೌಲಭ್ಯಗಳು ಮುಕ್ತ ಮತ್ತು ಸುಲಭವಾಗಿ ಲಭ್ಯವಾಗುವಂತೆ ಮಾಡಲು ಆನ್‌ಲೈನ್ ಸಂಪರ್ಕ ವ್ಯವಸ್ಥೆ ಮಾಡುವುದು.

ಏಳನೆಯ ಮತ್ತು ಅತಿ ಮುಖ್ಯವಾದ ಘಟ್ಟವೆಂದರೆ ವಿದ್ಯುನ್ಮಾನ ಉಪಕರಣಗಳ ಉತ್ಪಾದನೆ: ದೇಶದಲ್ಲಿ ವಿದ್ಯುನ್ಮಾನ ಉಪಕರಣಗಳ ಬೇಡಿಕೆಯು ಈಗ ಶೇ 22 (ಸಿಎಜಿಆರ್) ರಷ್ಟು ಇದೆ ಎಂಬುದು ಸರ್ಕಾರವು ನಡೆಸಿದ ಅಧ್ಯಯನದ ಮೂಲಕ ಸಂಗ್ರಹಿಸಿದ ಮಾಹಿತಿ. ಇತ್ತೀಚೆಗೆ ಬೇಡಿಕೆ ಪ್ರಮಾಣ ಗಣನೀಯವಾಗಿ ಏರಿದೆ. ಇದು 2020ರ ವೇಳೆಗೆ ಸುಮಾರು 400 ಶತಕೋಟಿ ಡಾಲರ್‌ನಷ್ಟು ವಹಿವಾಟು ನಡೆಸುವ ಬೃಹತ್ ಮಾರುಕಟ್ಟೆ ಆಗುವ ಅಂದಾಜಿದೆ. ಈ ಹಿನ್ನೆಲೆಯಲ್ಲಿ ದೇಶದಲ್ಲಿ ಎಲೆಕ್ಟ್ರಾನಿಕ್ ಸಾಮಗ್ರಿಗಳ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಹಲವು ಕಾರ್ಯ ಯೋಜನೆ ಆರಂಭಿಸಿದೆ. ಆ ಮುಲಕ ಎಲೆಕ್ಟ್ರಾನಿಕ್ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಸರ್ಕಾರ ಆದ್ಯತೆ ನೀಡಿದೆ. ಕಳೆದ ಎರಡು ವರ್ಷಗಳಲ್ಲಿ ದೇಶದಲ್ಲಿ ಸುಮಾರು 1.28 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ 250ಕ್ಕೂ ಹೆಚ್ಚು ಎಲೆಕ್ಟ್ರಾನಿಕ್ ಸಾಮಗ್ರಿಗಳ ಉತ್ಪಾದನಾ ಸಂಸ್ಥೆಗಳಿಂದ ಪ್ರಸ್ತಾವ ಸಲ್ಲಿಕೆಯಾಗಿವೆ.

ಎಂಟನೆಯದು ಐಟಿ ವಲಯದಲ್ಲಿ ಉದ್ಯೋಗಾವಕಾಶ: ದೇಶದ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಯುವಜನರಿಗೆ ಐಟಿ ಮತ್ತು ಐಟಿಇಎಸ್ ವಲಯದಲ್ಲಿ ಅಗತ್ಯವಿರುವ ಉದ್ಯೋಗ ಅವಕಾಶ ಒದಗಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಅದಕ್ಕೆ ಪೂರಕವಾಗಿ ಯುಜನರಿಗೆ ತರಬೇತಿ, ಮಾರ್ಗದರ್ಶನ ಮತ್ತು ಅಗತ್ಯವಿರುವ ಸೌಲಭ್ಯ ಒದಗಿಸುವುದು ಅನಿವಾರ್ಯ. ಈ ಹಿನ್ನೆಲೆಯಲ್ಲಿ ಮುಂದಿನ ಐದು ವರ್ಷಗಳಲ್ಲಿ ದೇಶದ ಹಳ್ಳಿ ಮತ್ತು ಪಟ್ಟಣಗಳ ಸುಮಾರು 10 ಲಕ್ಷ ಯುವಜನರಿಗೆ ಐಟಿ ಮತ್ತು ಅದಕ್ಕೆ ಪೂರಕವಾದ ಕ್ಷೇತ್ರಗಳಿಗೆ ಅಗತ್ಯವಿರುವ ತರಬೇತಿ, ವೃತ್ತಿ ಕೌಶಲ ಮತ್ತು ಮಾರ್ಗದರ್ಶನ ನೀಡುವ ಗುರಿ ಹೊಂದಿದೆ. ದೇಶದಲ್ಲಿ ಸುಮಾರು 3 ಲಕ್ಷ ಸೇವಾ ಏಜೆಂಟರ ಮೂಲಕ ಐಟಿ ಕ್ಷೇತ್ರದ ಉತ್ಪಾದನೆ, ವ್ಯವಹಾರ ಇನ್ನಿತರ ಸೇವೆಗಳಿಗೆ ಪೂರಕವಾದ ಕೌಶಲ ತರಬೇತಿಗೆ ಆದ್ಯತೆ ನೀಡಿದೆ. ಸುಮಾರು 1.5 ಲಕ್ಷ ಯುವಜನರಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಹಲವು ಪ್ರೋತ್ಸಾಹಕ ಯೋಜನೆಗಳನ್ನೂ ರೂಪಿಸಲಾಗಿದೆ. ಈಗಾಗಲೇ ಭಾರತ ಬಿಪಿಓ ಪ್ರೋತ್ಸಾಹ ಯೋಜನೆಯಡಿ ದೇಶದ ವಿವಿಧೆಡೆ 48,300 ಬಿಪಿಓ/ಐಟಿಇಎಸ್ ಉದ್ಯಮಶೀಲ ತರಬೇತಿ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ದೇಶದ ಸಣ್ಣ ನಗರ ಮತ್ತು ಪಟ್ಟಣಗಳಲ್ಲಿ ಮೂಲಸೌಲಭ್ಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಪೂರಕವಾಗಿ ರೂ. 493 ಕೋಟಿ ವೆಚ್ಚದಲ್ಲಿ ವಿವಿಧ ಯೋಜನೆಗಳನ್ನು ರೂಪಿಸಿದೆ. ಇದು ಐಟಿ/ ಐಟಿಇಎಸ್ ಬೆಳವಣಿಗೆಯನ್ನು ಒಳಗೊಂಡ ಭಾರತಕ್ಕೆ ಭದ್ರ ಅಡಿಪಾಯವಾಗಲಿದೆ. ಅದೇ ರೀತಿ ಈಶಾನ್ಯ ರಾಜ್ಯಗಳಲ್ಲಿ ಐಟಿ/ ಐಟಿಇಎಸ್ ಉದ್ಯಮಗಳಲ್ಲಿ ಆ ಭಾಗದ ಯುಜನರಿಗೆ ಉದ್ಯೋಗ ಅವಕಾಶ ಮತ್ತು ಉದ್ಯಮ ಬೆಳವಣಿಗೆಯ ಉದ್ದೇಶದಿಂದ ಈಶಾನ್ಯ ಬಿಪಿಓ ಪ್ರೋತ್ಸಾಹಕ ಯೋಜನೆ (ಎನ್‌ಇಬಿಪಿಎಸ್) ಅಡಿ ಬಿಪಿಓ/ಐಟಿಇಎಸ್ ಮೂಲಕ ಕಾರ್ಯಕ್ರಮ ರೂಪಿಸಿದೆ. ಎನ್‌ಇಬಿಪಿಎಸ್ ಮೂಲಕ ಇದುವರೆಗೆ ಸುಮಾರು 5 ಸಾವಿರ ಸ್ಥಾನಗಳನ್ನು ಒದಗಿಸಿದ್ದು, ಇನ್ನೂ ಸುಮಾರು 15 ಸಾವಿರ ಯುವಜನರಿಗೆ ಉದ್ಯೋಗಾವಕಾಶ ಕಲ್ಪಿಸುವ ಗುರಿ ಹೊಂದಿದೆ. ಇದರ ಜೊತೆಗೆ ದೂರ ಸಂಪರ್ಕ ಮತ್ತು ದೂರಸಂಪಕಕ್ಕೆ ಸಂಬಂಧಿಸಿದ ಸೇವೆಗಳಲ್ಲಿ ಗ್ರಾಮಿಣ ಉದ್ಯೋಗಿಗಳಿಗೆ ತರಬೇತಿ ನೀಡಲು ಯೋಜನೆ ರೂಪಿಸಿದೆ. ಮತ್ತು ಅದಕ್ಕಾಗಿ 5 ಲಕ್ಷ ಗ್ರಾಮೀಣ ಉದ್ಯೋಗಿಗಳಿಗೆ ತರಬೇತಿ ನೀಡುವ ಉದ್ದೇಶವನ್ನು ಹೊಂದಿದೆ.

ಅಂತಿಮವಾಗಿ ಒಂಭತ್ತನೆಯ ಘಟ್ಟದ ಆರಂಭಿಕ ಯೋಜನೆಗಳು: ಇದು ಅತಿ ಕಡಿಮೆ ಅವಧಿಯಲ್ಲಿ ರೂಪಿಸಬೇಕಾದ ಯೋಜನೆಯಾಗಿದೆ. ಸಂದೇಶಗಳು, ವಿಶ್ವವಿದ್ಯಾಲಯಗಳಲ್ಲಿ ವೈಫೈ, ಸರ್ಕಾರದೊಳಗಿನ ಮಾಹಿತಿ ಸುರಕ್ಷತೆಗಾಗಿ ಇ–ಮೇಲ್, ಸಾರ್ವಜನಿಕ ವೈಫೈ ಹಾಟ್‌ಸ್ಪಾಟ್ ಮತ್ತು ಎಸ್‌ಎಂಎಸ್ ಆಧಾರಿತ ಹವಾಮಾನ ಮಾಹಿತಿ ಮತ್ತು ಐಟಿ ತಳಹದಿಯ ಕೆಲವು ಕಾರ್ಯಕ್ರಮಗಳ ಅನುಷ್ಠಾನದ ಯೋಜನೆಗಳನ್ನು ಒಳಗೊಂಡಿದೆ.

### ಉತ್ತಮ ಆಡಳಿತಕ್ಕಾಗಿ ಡಿಜಿಟಲ್ ಇಂಡಿಯಾ ಉಪಕ್ರಮಗಳು

ಪಾರದರ್ಶಕತೆ ಮತ್ತು ನಾಗರಿಕರ ಸಕ್ರಿಯ ಪಾಲ್ಗೊಳ್ಳುವಿಕೆಯೇ ಉತ್ತಮ ಆಡಳಿತದ ಬುನಾದಿ. ಭಾರತ ಸರ್ಕಾರವು ಡಿಜಿಟಲ್ ಇಂಡಿಯಾವನ್ನು ಪರಿವರ್ತಕ ಯೋಜನೆಯಾಗಿ ರೂಪಿಸಲು ಮತ್ತು

ಉತ್ತಮ ಆಡಳಿತವನ್ನು ಖಾತ್ರಿಪಡಿಸಿಕೊಳ್ಳಲು ಬಳಸಿಕೊಂಡ ಉಪಕ್ರಮಗಳು ಹಲವು. ಅವುಗಳ ಮೂಲಕ ತಂತ್ರಜ್ಞಾನವನ್ನು, ಕೌಶಲವನ್ನು ಅಳವಡಿಸಿಕೊಳ್ಳಲಿದೆ. ಈ ಉಪಕ್ರಮಗಳ ಪೈಕಿ ಡಿಜಿಧನ್ ಅಭಿಯಾನ, ಆಧಾರ್ ಪೇ, ಭೀಮ್, ಸಿಎಸ್‌ಸಿ ಡಿಜಿ ಲಾಕರ್, ದಿಶಾ, ನೇರ ಲಾಭ ವರ್ಗಾವಣೆ, ಇ–ಪಂಚಾಯತ್ ಮುಂತಾದವು ಡಿಜಿಟಲ್ ಇಂಡಿಯಾಕ್ಕೆ ಪೂರಕವಾದ ಉಪಕ್ರಮಗಳು. ಕಪ್ಪು ಹಣದ ವಿರುದ್ಧ ಹೋರಾಟ ಮತ್ತು ಜನರನ್ನು ನಗದು ವಹಿವಾಟಿನ ಬಿಗಿ ಹಿಡಿತದಿಂದ ಹೊರತಂದು ನಗದುರಹಿತ ವಹಿವಾಟಿಗೆ ಒಳಪಡಿಸುವ ಉದ್ದೇಶದಿಂದ ಭಾರತ ಸರ್ಕಾರ ನೋಟು ರದ್ದತಿಯ ದಿಟ್ಟ ಹೆಜ್ಜೆ ಇಟ್ಟಿತ್ತು. ದೇಶದ ನಾಗರಿಕರು ಮತ್ತು ವ್ಯಾಪಾರಿಗಳು ನೈಜ ಮತ್ತು ಹಗರಣ ಮುಕ್ತ ವಹಿವಾಟು ನಡೆಸುವ ಉದ್ದೇಶದಿಂದ ಡಿಜಿಧನ್ ಉಪಕ್ರಮವನ್ನು ಜಾರಿಗೆ ತಂದಿದೆ. ಅದರ ಜಾಗೃತಿಗಾಗಿ ದೇಶದಾದ್ಯಂತ ಡಿಜಿಧನ್ ಮೇಳಗಳನ್ನು ಆಯೋಜಿಸುವ ಮೂಲಕ ಡಿಜಿಟಲ್ ವಹಿವಾಟಿಗೆ ಪ್ರೇರೇಪಿಸುವುದು, ಆಪ್ ಡೌನ್‌ಲೋಡ್ ಮಾಡಿಕೊಳ್ಳುವುದು, ವಿವಿಧ ಡಿಜಿಟಲ್ ಪಾವತಿ ವ್ಯವಸ್ಥೆಯ ಅನುಷ್ಠಾನದ ಉದ್ದೇಶವೂ ಇದೆ. ಏಕಕಾಲಕ್ಕೆ ವಿವಿಧೆಡೆಗೆ ಡಿಜಿಟಲ್ ತಂತ್ರಜ್ಞಾನದ ಮೂಲಕ ಹಣ ಪಾವತಿಸುವುದಕ್ಕೂ ಸರ್ಕಾರವು ಭಾರತ್ ಇಂಟರ್‌ಫೇಸ್ ಫಾರ್ ಮನಿ (ಭೀಮ್) ವೇದಿಕೆಯನ್ನು ರೂಪಿಸಿದೆ. ಇದು ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್ (ಯುಪಿಐ) ಮೂಲಕ ಸುಲಭ, ಸರಳ ಮತ್ತು ತ್ವರಿತವಾಗಿ ಸೇವೆ ಒದಗಿಸುವ, ಹಣ ಪಾವತಿಸುವ ವಹಿವಾಟು ಸಹ ಇದಾಗಿದೆ. 2016ರ ಡಿಸೆಂಬರ್ 30ರಂದು ಆರಂಭವಾದ ಯೋಜನೆಯು ಇದುವರೆಗೆ ಭೀಮ್ ಹಲವು ರೀತಿಯಲ್ಲಿ ಅಗಾಧವಾಗಿ ಬೆಳೆದಿದೆ. ಲಭ್ಯವಿರುವ ಮಾಹಿತಿ ಪ್ರಕಾರ ದೇಶದಲ್ಲಿ 2017ರ ಫೆಬ್ರುವರಿ ವರೆಗೆ ಒಟ್ಟು 17 ದಶಲಕ್ಷ ಬಾರಿ ಆಪ್ ಡೌನ್‌ಲೋಡ್ ಮಾಡಿದ್ದು, 19.37 ಲಕ್ಷ ವಹಿವಾಟು ನಡೆದಿದೆ. 2017ರ ಜನವರಿ ಮತ್ತು ಫೆಬ್ರುವರಿಯ ಎರಡು ತಿಂಗಳಲ್ಲಿ ಒಟ್ಟು ರೂ. 950 ಕೋಟಿ ವಹಿವಾಟು ಭೀಮ್ ಆಪ್ ಮೂಲಕ ನಡೆದಿದೆ. ಆಧಾರ್, ಹೆಬ್ಬೆರಳು ಗುರುತು ಆಧಾರಿತ ಮಾಹಿತಿ ಸಂಗ್ರಹದ ಜಗತ್ತಿನ ಅತಿದೊಡ್ಡ ಬಯೊಮೆಟ್ರಿಕ್ ಪದ್ಧತಿಯನ್ನು ಭಾರತ ಸರ್ಕಾರ ಜಾರಿಗೆ ತಂದಿದೆ. ಸಾರ್ವಜನಿಕ ವಲಯದ ವಿತರಣೆ, ಸುಧಾರಣೆ, ಹಣಕಾಸು ವಹಿವಾಟಿನ ಒಳಗೊಳ್ಳುವಿಕೆ, ಬಜೆಟ್ ನಿರ್ವಹಣೆ, ಸೌಲಭ್ಯಗಳ ಹೆಚ್ಚಳ ಮತ್ತು ತಡೆರಹಿತ ಜನಕೇಂದ್ರಿತ ಆಡಳಿತ ನಿರ್ವಹಣೆಗೆ ಆಧಾರ್ ಕಾರ್ಡ್ ಪೂರಕವಾಗಿದೆ. ಈಗ 1.13 ಶತಕೋಟಿ ಭಾರತೀಯರು ಆಧಾರ್ ಕಾರ್ಡ್ ಹೊಂದಿದ್ದಾರೆ. ಆಧಾರ್ ಕಾರ್ಡ್ ಕೇವಲ ಗುರುತಿನ ಚೀಟಿ ಅಷ್ಟೇ ಅಲ್ಲ, ಬ್ಯಾಂಕ್ ಖಾತೆ ತೆರೆಯಲು ಮತ್ತು ಬ್ಯಾಂಕ್ ಮೂಲಕ ವಹಿವಾಟು ನಡೆಸಲು, ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಅತ್ಯಂತದ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಬಯೊಮೆಟ್ರಿಕ್ ದೃಢೀಕರಣ ಪ್ರಕ್ರಿಯೆ ಆಧಾರದ ಮೇಲೆ ಖಾತೆದಾರನು ಹೆಬ್ಬೆರಳಿನ ಗುರುತಿನ ಮೂಲಕ ಬ್ಯಾಂಕ್ ವಹಿವಾಟು ನಡೆಸಲು ಆಧಾರ್ ನೆರವಾಗುತ್ತದೆ. 2017ರ ಏಪ್ರಿಲ್ 14ರಂದು ಆರಂಭವಾದ ಆಧಾರ್ ಪೇ ಈಗ ದೇಶದ ಶತಕೋಟಿಗೂ ಹೆಚ್ಚು ನಾಗರಿಕರ ಪಾವತಿ ವ್ಯವಸ್ಥೆಗೆ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತದೆ. ಭಾರತವು ಡಿಜಿಟಲ್ ಸೊಸೈಟಿ ಮತ್ತು ತ್ವರಿತದ ನಡೆಯನ್ನು ಇಟ್ಟುಕೊಂಡು ಕೆಲಸ ಮಾಡುವಾಗ ತಳಮಟ್ಟದಿಂದಲೇ ನಾಗರಿಕ ಕೇಂದ್ರದ ಮೂಲಕ ಅಗತ್ಯ ಸೇವೆ ಒದಗಿಸುವುದು, ಜನರಲ್ಲಿ ಭರವಸೆ ಮೂಡಿಸುವ ಕೆಲಸವೂ ಮುಖ್ಯವಾಗಿದೆ. ನಾಗರಿಕ ಕೇಂದ್ರಿತ ಸೇವೆಗಳನ್ನು ಅರ್ಹ ಫಲಾನುಭವಿಗೆ ತಲುಪಿಸುವ ಉದ್ದೇಶದಿಂದಲೇ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ನಾಗರಿಕ ಸೇವಾ ಕೇಂದ್ರ ತೆರೆಯಲಾಗುತ್ತದೆ.ಸದ್ಯ ಸುಮಾರು 2.5 ಲಕ್ಷ ಸಾಮಾನ್ಯ ಸೇವಾ ಕೇಂದ್ರಗಳು ಕೆಲಸ ಮಾಡುತ್ತಿವೆ. ಈ ಸೇವಾ ಕೇಂದ್ರಗಳು ವ್ಯವಹಾರ ಆಧಾರಿತ ಮತ್ತು ಸೇವಾ ಸೌಲಭ್ಯ ವಿತರಣಾ ಆಧಾರದಲ್ಲಿ ಏಕೀಕೃತ ವಿತರಣಾ ವೇದಿಕೆಯಾಗಿ ಬಹುದೊಡ್ಡ ಪ್ರಮಾಣ ಇ–ಸೇವೆಗಳನ್ನು ಒದಗಿಸುತ್ತವೆ. ದೇಶವನ್ನು ಡಿಜಿಟಲ್ ಸಮಾಜ ಮತ್ತು ಜ್ಞಾನ ಅರ್ಥ ವ್ಯವಸ್ಥೆಯಾಗಿ ಪರಿವರ್ತಿಸಲು ಭಾರತ ಸರ್ಕಾರವು ಯಾವುದೇ ಪ್ರಯತ್ನಗಳನ್ನು ಬಾಕಿ ಉಳಿಸಿಲ್ಲ. ಡಿಜಿಟಲ್ ಇಂಡಿಯಾ ಭಾಗವಾಗಿ, ಸಾರ್ವಜನಿಕರು ತಮ್ಮ ವೈಯಕ್ತಿಕ ಮಾಹಿತಿ, ದಾಖಲೆ/ಪ್ರಮಾಣಪತ್ರಗಳನ್ನು ಡಿಜಿಟಲ್ ತಂತ್ರಜ್ಞಾನದ ಮೂಲಕ ಸಂಗ್ರಹಿಸಿ ಇಡಲು ಭಾರತ ಸರ್ಕಾರವು ಸ್ಥಳ ಒದಗಿಸಿಕೊಟ್ಟಿದೆ. ಅದಕ್ಕಾಗಿಯೇ ಡಿಜಿ ಲಾಕರ್ ಯೋಜನೆಯನ್ನು ಪರಿಚಯಿಸಿದೆ. ದಾಖಲೆ / ಪ್ರಮಾಣ ಪತ್ರಗಳನ್ನು



ಡಿಜಿಲಾಕರ್ ಮೂಲಕ ಪರಿಶೀಲಿಸುವ ಮೂಲಕ ದೈಹಿಕವಾಗಿ ದಾಖಲೆಗಳನ್ನು ಹಾಜರುಪಡಿಸುವ ಶ್ರಮವನ್ನು ಕಡಿಮೆ ಮಾಡಿದೆ. ಸದ್ಯ ಸರ್ಕಾರವು 40 ಲಕ್ಷಕ್ಕೂ ಹೆಚ್ಚು ಡಿಜಿಟಲ್ ಲಾಕರ್‌ಗಳನ್ನು ಜನರಿಗೆ ವಿತರಿಸಿದೆ. 20 ಲಕ್ಷಕ್ಕೂ ಹೆಚ್ಚು ಜನರು ಇ–ಸಹಿ ಸೌಲಭ್ಯವನ್ನು ಪಡೆದಿದ್ದಾರೆ. ಇದು ಆಧಾರ್‌ಗೂ ಸಂಪರ್ಕ ಕಲ್ಪಿಸುವ ಕೊಂಡಿಯಾಗಿದೆ. ದೇಶವನ್ನು ಡಿಜಿಟಲ್‌ಯುಕ್ತ ಸಮಾಜ ನಿರ್ಮಾಣ ಮಾಡುವಲ್ಲಿ ತಳಮಟ್ಟದ ನಿರ್ಮಾಣದ ಬುನಾದಿಯಾಗಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದನ್ನು ಡಿಜಿಟಲ್ ಇಂಡಿಯ ಸಂಕ್ಷಿಪ್ತವಾಗಿ ಹೇಳುತ್ತದೆ

### 2017–18ರ ಬಜೆಟ್‌ನಲ್ಲಿ ಡಿಜಿಟಲ್ ಇಂಡಿಯಾ ಯೋಜನೆ ಮತ್ತು ಭಾರತದ ಗುರಿ

ದೇಶದಲ್ಲಿ ಡಿಜಿಟಲ್ ಇಂಡಿಯಾ ಕಾರ್ಯ ಯೋಜನೆಯನ್ನು ಇನ್ನಷ್ಟು ವೇಗವಾಗಿ ಅನುಷ್ಠಾನಕ್ಕೆ ತರಲು ಕೇಂದ್ರ ಸರ್ಕಾರವು 2017–18ರ ಬಜೆಟ್‌ನಲ್ಲಿ ಹಲವಾರು ಕ್ರಮಗಳನ್ನು ಪ್ರಕಟಿಸಿದೆ. ಗ್ರಾಮೀಣ ಪ್ರದೇಶದ ಆಪ್ಟಿಕಲ್ ಫೈಬರ್ ನೆಟ್‌ವರ್ಕ್ ಮೂಲಕ ಇಂಟರ್‌ನೆಟ್ ಸಂಪರ್ಕ ಜಾಲ ವಿಸ್ತಾರ ಮತ್ತು ವ್ಯಾಪ್ತಿಯನ್ನು ಹೆಚ್ಚಿಸಿದೆ. ಆ ಮೂಲಕ ದೇಶದಲ್ಲಿ ಡಿಜಿಟಲ್ ಪಾವತಿ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗಮನ ಹರಿಸಿದೆ. ಅದಕ್ಕೆ ಅನುಗುಣವಾಗಿ ಹಲವು ಪೂರಕ ಕ್ರಮಗಳನ್ನೂ ಘೋಷಿಸಿದೆ. ಯುಪಿಐ, ಯುಎಸ್‌ಎಸ್‌ಡಿ, ಆಧಾರ್ ಪೇ, ಐಎಂಪಿಎಸ್ ಮತ್ತು ಕ್ರೆಡಿಟ್/ಡಿಬಿಟ್ ಕಾರ್ಡ್ ಸೇರಿದಂತೆ ವಿವಿಧ ಡಿಜಿಟಲ್ ಪಾವತಿಗೆ ಒತ್ತು ನೀಡುತ್ತಿದೆ. ಅದರ ಹಿನ್ನೆಲೆಯಲ್ಲಿ 2017–18ರ ಅವಧಿಯಲ್ಲಿ ಸುಮಾರು ರೂ 2500 ಕೋಟಿ ಡಿಜಿಟಲ್ ವಹಿವಾಟು ನಡೆಸುವ ಗುರಿ ಹೊಂದಲಾಗಿತ್ತು. 2017ರ ಮಾರ್ಚ್ ಒಳಗೆ ಹೆಚ್ಚುವರಿಯಾಗಿ 10 ಲಕ್ಷ ಹೊಸ

ಪಿಓಎಸ್ ಪರಿಚಯಿಸಲು ಬ್ಯಾಂಕ್‌ಗಳಿಗೆ ಪ್ರೋತ್ಸಾಹಿಸಲಾಗಿದೆ. 2018ರಲ್ಲಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಆಪ್ಟಿಕಲ್ ಫೈಬರ್ ಮೂಲಕ ದೇಶದ 1.5 ಲಕ್ಷ ಗ್ರಾಮ ಪಂಚಾಯತ್‌ಗಳಿಗೆ ಬ್ರಾಡ್‌ಬ್ಯಾಂಡ್ ಸೌಲಭ್ಯದ ಜೊತೆಗೆ ಹಾಟ್‌ಸ್ಪಾಟ್ ಮತ್ತು ಡಿಜಿಟಲ್ ಸೇವೆ ಒದಗಿಸಲು ಬಜೆಟ್‌ನಲ್ಲಿ ಅವಕಾಶ ನೀಡಲಾಗಿದೆ. ಭಾರತ್ ನೆಟ್ ಅಡಿ ಇದುವರೆಗೆ ಸುಮಾರು 1.55 ಲಕ್ಷ ಕಿ.ಮೀ.ನಷ್ಟು ಆಪ್ಟಿಕಲ್ ಫೈಬರ್ ಅಳವಡಿಸಲಾಗಿದೆ. ಭಾರತ ನೆಟ್ ಯೋಜನೆಗಾಗಿ ಬಜೆಟ್‌ನಲ್ಲಿ



ರೂ 10 ಸಾವಿರ ಕೋಟಿ ಅನುದಾನವನ್ನು ಮೀಸಲಿಡಲಾಗಿದೆ.

**ತೀರ್ಮಾನ :** ದೇಶದಲ್ಲಿ ಅಂಕೀಕೃತ ಇಂಡಿಯಾ ಯೋಜನೆ ಅನುಷ್ಠಾನಕ್ಕೆ ಭಾರತ ಸರ್ಕಾರವು ಕೈಗೊಂಡ ಹಲವು ಉಪಕ್ರಮಗಳು ಮತ್ತು ಬಲವರ್ಧನೆಯ ನಿರ್ಧಾರಗಳು ಮಹತ್ವದ ಪಾತ್ರ ನಿರ್ವಹಿಸುತ್ತವೆ. ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ದೇಶದ ಜನರು ಸಹಕಾರ, ಸಹಭಾಗಿತ್ವ ನೀಡಿದರೆ ಜಗತ್ತಿನ ಅತಿದೊಡ್ಡ ಅಂಕೀಕರಣಯುಕ್ತ ಸಮಾಜವಾಗಿ ಹೊರಹೊಮ್ಮುವುದರಲ್ಲಿ ಯಾವುದೇ ಸಂಶಯವಿಲ್ಲ. ಹೀಗಿದ್ದಾಗ ಭಾರತವನ್ನು ಡಿಜಿಟಲೀಕೃತ ಅಭಿವೃದ್ಧಿ ರಾಷ್ಟ್ರವಾಗಿ ನಿರ್ಮಿಸುವ ಗುರಿ ತಲುಪಲು ಹೆಚ್ಚು ದಿನ ಕಾಯಬೇಕಾದ ಅಗತ್ಯವಿಲ್ಲ. ❑

ಅಭಿವೃದ್ಧಿ ಪಥ

# ಅಂಕೀಕೃತ ಪಾವತಿ ವೇದಿಕೆ

ಡಾ. ಭೀಮ್ ರಾವ್ ಅಂಬೇಡ್ಕರ್ ಅವರ 126 ನೇ ಜನ್ಮ ವರ್ಷಾಚರಣೆ (14 ಏಪ್ರಿಲ್ 2017) ಸಂದರ್ಭದಲ್ಲಿ ಪ್ರಧಾನಮಂತ್ರಿಯವರು, ಸಾಮೂಹಿಕ ಮಟ್ಟದ ವಿವಿಧ ಅಂಕೀಕೃತ ಪಾವತಿ ಯೋಜನೆಗಳಿಗೆ ಚಾಲನೆ ನೀಡಿದ್ದಾರೆ. ವ್ಯಾಪಾರಸ್ಥರಿಗಾಗಿ ಭೀಮ್ ಆಧಾರ್ ವೇದಿಕೆ, ಭೀಮ್‌ಗಾಗಿ ನಗದು ಹಿಂಪಾವತಿ ಮತ್ತು ಸೂಚಕ ಬೋನಸ್ ಯೋಜನೆಗಳನ್ನು ಆರಂಭಿಸಲಾಗಿದೆ. ಭೀಮ್ ಆ್ಯಪ್‌ನ ವರ್ತಕ ಪ್ರತಿಕ್ರಿಯೆ ಮಾದರಿಯಾಗಿರುವ ಭೀಮ್–ಆಧಾರ್ ವೇದಿಕೆ ಬಳಸಿಕೊಂಡು ಅಂಕೀಕೃತ ಪಾವತಿ ವ್ಯವಸ್ಥೆಗೆ ಅವಕಾಶ ಕಲ್ಪಿಸುತ್ತದೆ. ಯಾವುದೇ ಭಾರತೀಯ ಪ್ರಜೆ, ವರ್ತಕರ ಬಳಿ ಇರುವ ಜೈವಿಕ ಮಾಹಿತಿಗಳನ್ನು ಗ್ರಹಿಸುವ ಸಾಧನದ ಮೇಲೆ ತಮ್ಮ ಹೆಬ್ಬೆಟ್ಟು ಗುರುತು ಬಳಸಿ, ಡಿಜಿಟಲ್ ಆಗಿ ಹಣ ಪಾವತಿಸಬಹುದು. ಸ್ಮಾರ್ಟ್ ಫೋನ್, ಅಂತರ್ಜಾಲ, ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಇಲ್ಲದಂತೆ, ಭೀಮ್ ಆಧಾರ್ ವೇದಿಕೆ ಮೂಲಕ ಅಂಕೀಕೃತ ವಹಿವಾಟು ನಡೆಸಬಹುದಾಗಿದೆ. ಈಗಾಗಲೇ 27 ಪ್ರಮುಖ ಬ್ಯಾಂಕುಗಳು 7.15 ಲಕ್ಷ ವರ್ತಕರ ಸಂಪರ್ಕದಲ್ಲಿದ್ದು ಡಿಜಿಟಲ್ ಪಾವತಿ ಸ್ವೀಕಾರ ಆರಂಭಿಸಬಹುದಾಗಿದೆ. ಉಳಿದೆರಡು ಪ್ರೋತ್ಸಾಹಕ ಯೋಜನೆ ಅಂದರೆ ನಗದು ಹಿಂಪಾವತಿ ಮತ್ತು ಸೂಚಕ ಬೋನಸ್ ಯೋಜನೆಗಳಿಗೆ ಆರು ತಿಂಗಳ ಅವಧಿಗೆ 495 ಕೋಟಿ ಒದಗಿಸಲಾಗಿದೆ. ಅಂಕೀಕೃತ ಹಣ ಪಾವತಿ ಸಂಸ್ಕೃತಿ, ಸಮಾಜದ ತಳಮಟ್ಟಕ್ಕೂ ಪಸರಿಸಿ, ರೂಢಿಯಾಗಬೇಕು ಎಂಬುದು ಯೋಜನೆಯ ಉದ್ದೇಶವಾಗಿವೆ. ಸೂಚಕ ಬೋನಸ್ ಯೋಜನೆಯಡಿ ಹಾಲಿ ಬಳಕೆದಾರ ಹಾಗೂ ಅವರಿಂದ ಪ್ರೇರೇಪಿತರಾಗಿ ಬಳಕೆದಾರರಾಗುವ ವ್ಯಕ್ತಿ ಇಬ್ಬರಿಗೂ ಅವರ ಖಾತೆಗಳಿಗೆ ನೇರವಾಗಿ ಪ್ರೋತ್ಸಾಹ ಧನ ಜಮಾ ಆಗುತ್ತದೆ. ನಗದು ಹಿಂಪಾವತಿ ಪಡೆಯುತ್ತಾರೆ. ಈ ಎರಡೂ ಯೋಜನೆಗಳನ್ನು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ನಿರ್ವಹಿಸುತ್ತಿದ್ದು ಭಾರತದ ರಾಷ್ಟ್ರೀಯ ಪಾವತಿ ನಿಗಮ ಅನುಷ್ಠಾನಗೊಳಿಸುತ್ತಿದೆ.

ಲಕಿ ಗ್ರಾಹಕ ಯೋಜನಾ ಮತ್ತು ಡಿಜಿ ಧನ್ ವ್ಯಾಪಾರ ಯೋಜನಾಗಳು ನೀತಿ ಆಯೋಗ ನಡೆಸಿದ 100 ದಿನಗಳ ಮಾಹಿತಿ ಶಿಕ್ಷಣ ಮತ್ತು ಸಂವಹನ ಆಂದೋಲನದ ನಂತರ ಸಮಾಪ್ತಿಗೊಂಡಿವೆ. ಈ ಯೋಜನೆಗಳಡಿ, ದೇಶದ ವಿವಿಧ ಭಾಗಗಳ 16 ಲಕ್ಷ ವರ್ತಕರು ಮತ್ತು ಗ್ರಾಹಕರು ಒಟ್ಟು 258 ಕೋಟಿ ರೂಪಾಯಿ ಬಹುಮಾನ ಹಣಕ್ಕೆ ಪಾತ್ರರಾಗಿದ್ದಾರೆ. ಪ್ರಧಾನ ಮಂತ್ರಿಯವರು ಈ ಯೋಜನೆಗಳ ಪ್ರಧಾನ ಡ್ರಾನ ವಿಜೇತರನ್ನು ಗೌರವಿಸಿ ಅಭಿನಂದಿಸಿದ್ದಾರೆ. ನೀತಿ ಆಯೋಗ ನಡೆಸಿದ ಆಂದೋಲನದ ಪ್ರತಿಫಲವಾಗಿ ಅಂಕೀಕೃತ ಹಣ ಪಾವತಿಗೆ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ. 27 ರಾಜ್ಯಗಳು ಮತ್ತು ಏಳು ಕೇಂದ್ರಾಡಳಿತ ಪ್ರದೇಶಗಳ ತಲಾ ಒಂದು ಗ್ರಾಮೀಣ ಮತ್ತು ನಗರ ಪ್ರದೇಶ ಸೇರಿದಂತೆ 100 ಸ್ಥಳಗಳ ಕನಿಷ್ಠ 15,000 ಸಂಸ್ಥೆಗಳು ನಗದು ರಹಿತ ವಹಿವಾಟುಗಳಿಗೆ ಮುಂದಾಗಿದೆ. ಗ್ರಾಮೀಣರು ಮತ್ತು ಪಟ್ಟಣಿಗರು ಸೇರಿದಂತೆ 15 ಲಕ್ಷಕ್ಕೂ ಹೆಚ್ಚು ಜನರಿಗೆ ಮೇಳದಿಂದಾಗಿ ಹೊಸ ಬ್ಯಾಂಕ್ ಖಾತೆ ತೆರೆಯಲು ಹಾಗೂ ಆಧಾರ್ ಕಾರ್ಡ್ ಹೊಂದಲು ಸಾಧ್ಯವಾಗಿದೆ. ಭೀಮ್ ಆ್ಯಪ್ ಆರಂಭವಾದ (ಡಿಸೆಂಬರ್ 2016) ನಾಲ್ಕು ತಿಂಗಳಲ್ಲೇ 1.9 ಕೋಟಿ ಡೌನ್‌ಲೋಡ್ ದಾಖಲಿಸಿ, ಹೊಸ ವಿಶ್ವದಾಖಲೆ ಮಾಡಿದೆ. ನವೆಂಬರ್ 2016ರ ವರೆಗೆ ಸುಮಾರು 2,80,000 ಅಂಕೀಕೃತ ವಹಿವಾಟುಗಳಾಗಿದ್ದವು. ಇದು ಈ ವರ್ಷದ ಮಾರ್ಚ್ ವೇಳೆಗೆ, 23 ಪಟ್ಟು ಹೆಚ್ಚಾಗಿ 2425 ಕೋಟಿ ರೂಪಾಯಿ ಮೊತ್ತದ 63,80,000 ವಹಿವಾಟು ನಡೆಸಲಾಗಿದೆ. ಆಧಾರ್ ಸಂಪರ್ಕದ ಪಾವತಿ 2016ರ 2.5 ಕೋಟಿ ರೂ. ನಿಂದ 2017 ಮಾರ್ಚ್ ವೇಳೆಗೆ 5 ಕೋಟಿ ರೂಪಾಯಿಗೂ ಹೆಚ್ಚಿತು.

ಪ್ರಸಕ್ತ ಹಣಕಾಸು ವರ್ಷದಲ್ಲಿ ಡಿಜಿಟಲ್ ವಹಿವಾಟನ್ನು 2500 ಕೋಟಿ ರೂಪಾಯಿಗಳಿಗೇರಿಸುವ ಗುರಿ ತಲುಪಲು ದೇಶದ 75 ಪಟ್ಟಣಗಳನ್ನು ಮಿತ ನಗದಿನ ಪಟ್ಟಣಗಳೆಂದು ಪ್ರಕಟಿಸುವ ಕಾರ್ಯಕ್ರಮವಿದೆ. ಈ ಪಟ್ಟಣಗಳಲ್ಲಿ ಹಣ ಪಾವತಿ ಸ್ವೀಕಾರ ಸೌಕರ್ಯ ಪೂರ್ತಿಯಾಗಿ ಎಲ್ಲ ಕುಟುಂಬಗಳೂ ತರಬೇತಿ ವ್ಯಾಪ್ತಿಗೊಳಪಟ್ಟಿರಬೇಕು. ❑

# ಕೃಷಿ ಕ್ಷೇತ್ರದಲ್ಲಿ ಒಳಸುರಿಗಳ ಪಾತ್ರ

* ವಸಂತ್ ಪಿ. ಗಾಂಧಿ



**ಕೃಷಿ ಭೂಮಿಯನ್ನು ಬೇರೆ ಉದ್ದೇಶಕ್ಕೆ ಬಳಸುವುದನ್ನು ಕಾರ್ಯನೀತಿಗಳ ಮೂಲಕ ತಡೆಯಬೇಕಿದೆ. ಜತೆಗೆ, ಇಳುವರಿ ಹೆಚ್ಚಳಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕಿದೆ. ಈ ಕ್ಷೇತ್ರ ಕಾರ್ಮಿಕರ ಕೊರತೆಯಿಂದ ಬಳಲುತ್ತಿದ್ದು, ಯಂತ್ರಗಳ ಬಳಕೆ ಮತ್ತು ಯಾಂತ್ರೀಕರಣದಿಂದ ಮಾನವ ಶ್ರಮ ಕುಗ್ಗಿಸಿ, ಉತ್ಪಾದಕತೆ ಅಧಿಕಗೊಳಿಸಬೇಕಿದೆ.**

ಭಾರತೀಯ ಕೃಷಿಯ ಉತ್ಪಾದನೆ ಮತ್ತು ಉತ್ಪಾದಕತೆಗೆ ಒಳಸುರಿಗಳು ಅಪಾರ ಕೊಡುಗೆ ನೀಡಿವೆ. ಅಧ್ಯಯನಗಳ ಪ್ರಕಾರ, ದೇಶದಲ್ಲಿ ಹಸಿರು ಕ್ರಾಂತಿಗೆ ಕಾರಣವಾದದ್ದು ಹೆಚ್ಚು ಇಳುವರಿ ನೀಡುವ ಬೀಜಗಳು (ಹೆಚ್‌ವೈವಿ), ರಾಸಾಯನಿಕ ಗೊಬ್ಬರ ಮತ್ತು ನೀರಾವರಿ. ಇದರಿಂದ ಒಳಸುರಿಗಳ ಬಳಕೆ ತೀವ್ರವಾಗಿ ಹೆಚ್ಚಳಗೊಂಡಿತು. ಉದಾಹರಣೆಗೆ, 1950–51ರಲ್ಲಿ ಹೆಕ್ಟೇರಿಗೆ 2 ಕೆಜಿ ಯಷ್ಟಿದ್ದ ಗೊಬ್ಬರ ಬಳಕೆ ಪ್ರಮಾಣವು 1998–99ಕ್ಕೆ 137 ಕೆಜಿಗೆ ಹಾಗೂ 1950–61ರಲ್ಲಿ ಬಳಕೆಯಲ್ಲಿ ಇಲ್ಲದ ಹೆಚ್‌ವೈವಿ ಬೀಜಗಳು 1960–61ರಲ್ಲಿ ಶೇ 88 ರಷ್ಟು ಕೃಷಿ ಭೂಮಿಯಲ್ಲಿ ಬಳಕೆಯಾಗುತ್ತಿದ್ದವು. ಇದೇ ಅವಧಿಯಲ್ಲಿ ಗೋಧಿಯಲ್ಲಿ ನೀರಾವರಿ ಶೇ 34ರಿಂದ ಶೇ 89ಕ್ಕೆ ಹೆಚ್ಚಿತು. ಜನಸಂಖ್ಯೆ ಹೆಚ್ಚಳದೊಂದಿಗೆ ನೀರು ಮತ್ತು ಭೂಮಿಯ ಕೊರತೆಯು ಕೃಷಿಯಲ್ಲಿ ಆಧುನೀಕರಣ ಮತ್ತು ಒಳಸುರಿಗಳ ಬಳಕೆ ಹೆಚ್ಚಳಕ್ಕೆ ಕಾರಣವಾಯಿತು. ಭೂಮಿಯ ಲಭ್ಯತೆಯ ಕೊರತೆಯಿಂದ ಇಳುವರಿ ಹೆಚ್ಚಳ ಅನಿವಾರ್ಯವಾಯಿತು. ಇದರಿಂದ ವಿಜ್ಞಾನ ಮತ್ತು ತಂತ್ರಜ್ಞಾನದ ನೆರವಿನಿಂದ ಹಲವು ಸಂಶೋಧನೆಗಳು ನಡೆದವು. ಅವೆಂದರೆ,

* ಹೆಚ್ಚು ಇಳುವರಿ ನೀಡುವ ಬೀಜಗಳು (ಹೆಚ್‌ವೈವಿ)
* ರಾಸಾಯನಿಕಗಳ ಮೂಲಕ ಉತ್ತಮ ಪೋಷಣೆ
* ತಂತ್ರಜ್ಞಾನ ಮತ್ತು ನಿರ್ವಹಣೆ ಮೂಲಕ ನೀರಿನ ಒದಗಣೆ
* ಕೀಟನಾಶಕಗಳ ಮೂಲಕ ಕೀಟ ನಿಯಂತ್ರಣ
* ಮಾನವ ಶಕ್ತಿ ಬದಲು ಕೃಷಿ ಯಂತ್ರಗಳ ಬಳಕೆ

ಇತ್ತೀಚಿನ ದಿನಗಳಲ್ಲಿ ಸರ್ಕಾರದ ಸಂಸ್ಥೆಗಳಲ್ಲದೆ ಖಾಸಗಿ ಸಂಸ್ಥೆಗಳು ಮತ್ತು ಉದ್ಯಮಗಳು ಕೃಷಿ ಕ್ಷೇತ್ರದ ಬೆಳವಣಿಗೆಗೆ ನೆರವಾಗುತ್ತಿವೆ. ಬೀಜ, ರಸಗೊಬ್ಬರ, ನೀರಾವರಿ ಉಪಕರಣ ಮತ್ತು ನಿರ್ಮಾಣ ಉದ್ಯಮಗಳು, ಕೃಷಿ–ರಸಾಯನಿಕ ಉದ್ಯಮ, ಕೃಷಿ ಉಪಕರಣಗಳು ಇತ್ಯಾದಿಗಳು ಕೃಷಿ ಭೂಮಿ ಮತ್ತು ಸಂಪನ್ಮೂಲ ಕೊರತೆ ನಿವಾರಣೆಗೆ ತಮ್ಮದೇ ಆದ ದೇಣಿಗೆ ನೀಡುತ್ತಿವೆ. ಈ ಲೇಖನವು ಭಾರತೀಯ ಕೃಷಿ ಕ್ಷೇತ್ರದ ಒಳಸುರಿಗಳ ಪ್ರಗತಿ ಮತ್ತು ಒಲವು ಕುರಿತು ಪರಿಶೀಲಿಸಲಿದೆ.

1980ರಿಂದ 2014–15ರ ಅವಧಿಯಲ್ಲಿ ಕೃಷಿ ಒಳಸುರಿ ಕ್ಷೇತ್ರದ ಬೆಳವಣಿಗೆ ಚಿತ್ರಣ ಹೀಗಿದೆ. ಬೀಜೋದ್ಯಮವು 45 ಲಕ್ಷ ಕ್ವಿಂಟಾಲ್‌ನಿಂದ 301.4 ಲಕ್ಷ ಕಿಂಟಾಲಿಗೆ (6.7 ಪಟ್ಟು), ಗೊಬ್ಬರ ಬಳಕೆ 60.6 ಲಕ್ಷ ಟನ್ನಿಂದ 255.8 ಲಕ್ಷ ಟನ್‌ಗೆ (4.2 ಪಟ್ಟು) ಹೆಚ್ಚಿತು. ಅಂತರ್ಜಲ ನೀರಾವರಿ ಮತ್ತು ಅದರ ಉಪಕರಣಗಳ ಉದ್ಯಮ ದುಪ್ಪಟ್ಟು ಬೆಳೆದು, 187.4 ಲಕ್ಷ ಹೆಕ್ಟೇರ್‌ನಿಂದ 412.6 ಲಕ್ಷ ಹೆಕ್ಟೇರಿಗೆ ಅಧಿಕಗೊಂಡಿತು. ಟ್ರ್ಯಾಕ್ಟರ್ ಸೇರಿದಂತೆ ಯಂತ್ರಗಳ ಬಳಕೆ 8 ಪಟ್ಟು ಅಂದರೆ, 74.3 ಸಾವಿರದಿಂದ 626.8 ಸಾವಿರಕ್ಕೆ ಹೆಚ್ಚಳಗೊಂಡಿತು.

### ನೀರಿನ ಬಳಕೆ

1980ರಲ್ಲಿ 38 ದಶ ಲಕ್ಷ ಹೆಕ್ಟೇರ್‌ನಷ್ಟಿದ್ದ ನೀರಾವರಿ ಕ್ಷೇತ್ರವು 2012–13ಕ್ಕೆ 66 ದಶ ಲಕ್ಷ ಹೆಕ್ಟೇರಿಗೆ ಹೆಚ್ಚಳ ಗೊಂಡಿತು. 1980–81 ರಿಂದ 2012–13ರ ಅವಧಿಯಲ್ಲಿ ಒಟ್ಟು ನೀರಾವರಿ ಕೃಷಿ ಕ್ಷೇತ್ರ 49 ದಶ ಲಕ್ಷ ಹೆಕ್ಟೇರ್‌ನಿಂದ 92 ದಶ ಲಕ್ಷ ಹೆಕ್ಟೇರಿಗೆ ಹೆಚ್ಚಳಗೊಂಡಿತು. ಜಲ ಸಂಪನ್ಮೂಲದ ಸಂರಕ್ಷಣೆ ಹಾಗೂ ನೀರಿನ ಕ್ಷಮತೆಯ

* ನಬಾರ್ಡ್ ಚೇರ್ ಪ್ರೊಫೆಸರ್, ಸಿಎಂಎ ಐಐಎಮ್, ಅಹಮದಾಬಾದ್. E-mail : gandhi@iima.ac.in



ಬಳಕೆ, ಸಹಭಾಗಿತ್ವದ ನೀರಿನ ನಿರ್ವಹಣೆಯ ಉತ್ತೇಜನ, ಜಲಾನಯನ ಅಭಿವೃದ್ಧಿ ಮತ್ತು ಹನಿ ಹಾಗೂ ತುಂತುರು ನೀರಾವರಿ ಬಳಕೆಗೆ ಹೆಚ್ಚು ಪ್ರಾಶಸ್ತ್ಯ ನೀಡಿರುವುದು ಇದಕ್ಕೆ ಕಾರಣ ಎನ್ನಬಹುದು. ಪ್ರಸ್ತುತ ಶೇ 24 ರಷ್ಟು ಭೂಮಿ ನಾಲೆಗಳ ಮೂಲಕ ಹಾಗೂ ಶೇ 62 ರಷ್ಟು ಭೂಮಿ ಬಾವಿಗಳ ಮೂಲಕ ನೀರಾವರಿಯಾಗುತ್ತಿದೆ. 1980–90ರಲ್ಲಿ ಕೊಳವೆ ಬಾವಿಗಳ ಮೂಲಕ ನೀರಾವರಿ ದರ ಶೇ 4 ರಷ್ಟು ಹೆಚ್ಚಳಗೊಂಡಿದ್ದು, ಬಳಿಕ 2000–2011ರ ಅವಧಿಯಲ್ಲಿ ಕುಸಿಯಿತು. ಆದರೆ, ಇತ್ತೀಚೆಗೆ ಅಂತರ್ಜಲದ ಬಳಕೆ ತೀವ್ರವಾಗಿ ಹೆಚ್ಚಿದೆ. ಚೆಕ್ ಡ್ಯಾಮ್‌ಗಳ ಮೂಲಕ ಅಂತರ್ಜಲದ ಮರುದುಂಬುವಿಕೆ, ಜಲಾನಯನ ಅಭಿವೃದ್ಧಿ ಚಟುವಟಿಕೆ, ಹನಿ ಮತ್ತು ತುಂತುರು ನೀರಾವರಿ ಮೂಲಕ ನೀರಿನ ಕ್ಷಮತೆಯ ಬಳಕೆ ನಡೆದಿದೆ.

### ರಸಗೊಬ್ಬರ ಬಳಕೆ

ಭೂಮಿಯ ಇಳುವರಿ ಹೆಚ್ಚಳಕ್ಕೆ ಕಾರಣವಾಗುವ ಪ್ರಮುಖ ಅಂಶ– ಫಲವತ್ತತೆ. ರಸ ಗೊಬ್ಬರದ ಬಳಕೆ 1980–81ರಿಂದ 2014–15ರ ಅವಧಿಯಲ್ಲಿ 55 ದಶ ಲಕ್ಷ ಟನ್ನಿಂದ 255 ದಶ ಲಕ್ಷ ಟನ್‌ಗೆ ಹೆಚ್ಚಳಗೊಂಡಿತು. 1980ರ ಬಳಿಕ ರಸಗೊಬ್ಬರ ಬಳಕೆ ತೀವ್ರಗೊಂಡು, 2000–2001 ಮತ್ತು 2010–2011ರಲ್ಲಿ ಶೇ 6 ರಷ್ಟು ಅಧಿಕಗೊಂಡಿತು. ಆನಂತರ ರಂಜಕ ಮತ್ತು ಸಾರಜನಕ ಒಳಗೊಂಡ ಗೊಬ್ಬರದ ಬಳಕೆ ಪ್ರಮಾಣ ಕುಸಿಯಿತು. ಇದಕ್ಕೆ ಪೋಷಕಾಂಶ ಆಧರಿಸಿದ ಸಬ್ಸಿಡಿ ಕಾರ್ಯನೀತಿ ಕಾರಣ ಎನ್ನಬಹುದು. ಈ ನೀತಿಯಡಿ ಪೊಟಾಷ್ ಮತ್ತು ರಂಜಕಾಂಶವುಳ್ಳ ಗೊಬ್ಬರಕ್ಕೆ ನೀಡುತ್ತಿದ್ದ ಸಬ್ಸಿಡಿ ಕಡಿಮೆ ಮಾಡ ಲಾಯಿತು. ಇದೇ ಹೊತ್ತಿನಲ್ಲಿ ಬೆಲೆ ಅನಿಯಂತ್ರಣಗೊಳಿಸಿದ್ದರಿಂದ, ಪೊಟಾಷ್ ಮತ್ತು ರಂಜಕಾಂಶವುಳ್ಳ ಗೊಬ್ಬರದ ಬೆಲೆ ಹೆಚ್ಚಳಗೊಂಡು, ಬಳಕೆ ಕುಸಿಯಿತು. ಸಾರಜನಕ ಗೊಬ್ಬರದ ಬಳಕೆ ಹೆಚ್ಚಳಗೊಂಡಿತು. ಭೂಮಿಯ ಫಲವತ್ತತೆ ಕ್ಷೀಣಿಸಿ, ಉತ್ಪಾದಕತೆ ಕುಸಿಯಿತು. ಈ ಕ್ಷೇತ್ರದಲ್ಲಿ ಕಾರ್ಯನೀತಿ ಬದಲಾವಣೆ ಆಗಬೇಕಿದೆ.

### ಬಿತ್ತನೆ ಬೀಜ

ಕೃಷಿ ಉತ್ಪಾದಕತೆ ಹೆಚ್ಚಳದಲ್ಲಿ ಗುಣಮಟ್ಟದ ಬೀಜದ ಬಳಕೆಗೆ ಹೆಚ್ಚು ಪ್ರಾಶಸ್ತ್ಯ. 2012–13ರಲ್ಲಿ ಇಂಥ ಬೀಜಗಳ ಬಳಕೆ 313 ಲಕ್ಷ ಕ್ವಿಂಟಾಲ್ ಇತ್ತು. ಇದರಲ್ಲಿ ಧಾನ್ಯ ದವಸದ ಪಾಲು 204 ಲಕ್ಷ ಕ್ವಿಂಟಾಲ್. 1990–91 ಮತ್ತು 2013–14ರ ಅವಧಿಯಲ್ಲಿ ಬೀಜದ ಬಳಕೆ ಪ್ರಮಾಣ ದರ ವಾರ್ಷಿಕ ಶೇ.8.4 ಇತ್ತು. 2000–01 ಮತ್ತು 2010–11ರ ಅವಧಿಯಲ್ಲಿ ದ್ವಿದಳ ಧಾನ್ಯ ಶೇ 17 ಮತ್ತು ಎಣ್ಣೆಕಾಳು ಶೇ 16 ರ ದರದಲ್ಲಿ ಹೆಚ್ಚಳಗೊಂಡಿತು. ಬಿಟಿ ಹತ್ತಿ ಬೀಜ ದುಬಾರಿಯಾದ್ದರಿಂದ, ಹತ್ತಿ ಬೆಳೆ ಕಡಿಮೆಯಾಯಿತು. 2010–11ರ ಬಳಿಕ ದ್ವಿದಳ ಧಾನ್ಯ ಮತ್ತು ಎಣ್ಣೆಕಾಳು ಬೆಳೆ ಪ್ರಮಾಣ ಕುಸಿದು, ಬೇಡಿಕೆ ಹೆಚ್ಚಳದಿಂದ ತರಕಾರಿ ಸೇರಿದಂತೆ ಇತರ ಬೀಜಗಳ ಬಳಕೆ ಹೆಚ್ಚಳಗೊಂಡಿತು. ರೈತರು ಉನ್ನತ ತಂತ್ರಜ್ಞಾನದ ಬಳಕೆ ಮತ್ತು ಉತ್ತಮ ಗುಣಮಟ್ಟದ ಬೀಜ ಬಳಕೆಗೆ ಮುಂದಾಗಿದ್ದು, ಬೇಡಿಕೆ ಅಧಿಕಗೊಳ್ಳಲು ಕಾರಣ. ಇತ್ತೀಚೆಗಿನ ಕುಸಿತಕ್ಕೆ ಬರಗಾಲ ಮತ್ತು ಲಾಭ ಕಡಿಮೆ ಆಗಿರುವುದು ಕಾರಣ ಎನ್ನಬಹುದು.

### ಕೀಟನಾಶಕ ಬಳಕೆ

ಕೃಷಿ ಲಾಭದಾಯಕವಾಗಲು ಬೆಳೆಯನ್ನು ಕೀಟಗಳಿಂದ ರಕ್ಷಿಸಬೇಕಾದ್ದು ಅತಿ ಮುಖ್ಯ. 1980–81ರಲ್ಲಿ 45 ಸಾವಿರ ಟನ್ನಷ್ಟಿದ್ದ ಕೀಟನಾಶಕಗಳ ಬಳಕೆ 1990–91ರಲ್ಲಿ 75 ಸಾವಿರ ಟನ್‌ಗಳಿಗೆ ಹೆಚ್ಚಳಗೊಂಡು, ಬಳಿಕ 2013–14ರಲ್ಲಿ 58 ಸಾವಿರ ಟನ್ಗೆ ಕುಸಿಯಿತು. ಬಳಕೆ ಕುಸಿತಕ್ಕೆ ಪರಿಸರ ಕಾಳಜಿ ಮತ್ತು ಬಿಟಿ ಹತ್ತಿ ಸೇರಿದಂತೆ ಕೀಟನಾಶಕ ಪ್ರತಿರೋಧವಿರುವ ಬೆಳೆಗಳ ಬಳಕೆ ಕಾರಣ ಎನ್ನಬಹುದು. ಜತೆಗೆ, ಈಗ ಕಡಿಮೆ ಪ್ರಮಾಣದಲ್ಲಿ ಬಳಸಿದರೆ ಪರಿಣಾಮ ಬೀರುವ ಕೀಟನಾಶಕಗಳು ಲಭ್ಯವಿವೆ. ಇತ್ತೀಚೆಗೆ ಕೀಟನಾಶಕಗಳ ಬಳಕೆ ಕುಸಿದಿದ್ದು, ಶಿಲೀಂಧ್ರನಾಶಕಗಳು ಹಾಗೂ ಕಳೆನಾಶಕ / ಮೂಲಿಕೆನಾಶಕಗಳ ಬಳಕೆ ಹೆಚ್ಚಿದೆ. ಕೀಟನಾಶಕಗಳ ತೀವ್ರ ವಿಷ ಪ್ರವೃತ್ತಿ ಹಾಗೂ ಕೀಟನಾಶಕ ಪ್ರತಿರೋಧವಿರುವ ಬೆಳೆಗಳ ಹೆಚ್ಚಳ ಇದಕ್ಕೆ ಕಾರಣ ಎನ್ನಬಹುದು. ಶಿಲೀಂಧ್ರಕ್ಕೆ ಪ್ರತಿರೋಧವಿರುವ ಬೆಳೆಗಳ ಅಲಭ್ಯತೆಯು ಶಿಲೀಂಧ್ರನಾಶಕಗಳ ಬಳಕೆ ಹೆಚ್ಚಳಕ್ಕೆ ಹಾಗೂ ಕೂಲಿ ಕಾರ್ಮಿಕರ ದುಬಾರಿ ಕೂಲಿ ಕಳೆನಾಶಕಗಳ ಬಳಕೆ ಅಧಿಕಗೊಳ್ಳಲು ಕಾರಣ.



### ಕೃಷಿ ಯಂತ್ರೋಪಕರಣ

ಕೃಷಿಯಲ್ಲಿ ಯಂತ್ರಗಳ ಬಳಕೆ ದಿನೇದಿನೇ ಹೆಚ್ಚುತ್ತಿದೆ. 1980–81ರಲ್ಲಿ 7 ಸಾವಿರದಷ್ಟಿದ್ದ ಟ್ರ್ಯಾಕ್ಟರ್‌ಗಳ ಮಾರಾಟ 2013–14ರಕ್ಕೆ 70 ಸಾವಿರ(10 ಪಟ್ಟು)ಕ್ಕೆ ಹೆಚ್ಚಿತು. 1980–81ರಿಂದ 2010–2011ರ ಅವಧಿಯಲ್ಲಿ ಬೆಳವಣಿಗೆ ದರ ಶೇ 6.87 ಇತ್ತು. ಇತ್ತೀಚೆಗೆ ಟ್ರ್ಯಾಕ್ಟರ್‌ಗಳ ಮಾರಾಟ ಕುಸಿದಿದೆ. 2012 ಮತ್ತು 2014ರಲ್ಲಿ ಕುಸಿತಕ್ಕೆ ಮಳೆ ಕೈ ಕೊಟ್ಟಿದ್ದು ಕಾರಣ ಎನ್ನಬಹುದು. ಇದರಿಂದ ಸಾಲ ನೀಡಿಕೆಯಲ್ಲಿ ಅಡೆತಡೆ ಉಂಟಾಗಿತ್ತು. ಕೃಷಿಯಲ್ಲಿ ನಾನಾ ಯಂತ್ರೋಪಕರಣಗಳ ಬಳಕೆ ಕೂಡ ಹೆಚ್ಚಳಗೊಂಡಿದೆ. ಡೀಸೆಲ್ ಪಂಪ್‌ಸೆಟ್‌ಗಳು ಶೇ 7 ಹಾಗೂ ವಿದ್ಯುತ್ ಪಂಪ್‌ಸೆಟ್‌ಗಳ ಬಳಕೆ ಶೇ 5.79ರಷ್ಟು ಪ್ರಗತಿ ಕಂಡಿತು. ಆದರೆ, 2001–2002 ಮತ್ತು 2011–12ರ ಅವಧಿಯಲ್ಲಿ ದರ ಶೇ 1.93ಕ್ಕೆ ಕುಸಿಯಿತು. ಪವರ್ ಟಿಲ್ಲರ್ ಮತ್ತು ಟ್ರ್ಯಾಕ್ಟರ್‌ಗಳ ಬಳಕೆ ಕ್ರಮವಾಗಿ ಶೇ 8.44 ಮತ್ತು ಶೇ 13.31 ಇದ್ದದ್ದು, ಬಳಿಕ ಕಡಿಮೆಯಾಯಿತು (ಕೋಷ್ಟಕ 9). ಎಲೆಕ್ಟ್ರಿಕ್ ಪಂಪ್‌ಸೆಟ್‌ಗಳ ಕುಸಿತಕ್ಕೆ ಹಲವು ರಾಜ್ಯಗಳಲ್ಲಿನ ವಿದ್ಯುತ್ ಕೊರತೆ ಕಾರಣ ಎನ್ನಬಹುದು. ಇದರಿಂದ ಡೀಸೆಲ್ ಪಂಪ್‌ಸೆಟ್‌ಗಳ ಬಳಕೆ ಹೆಚ್ಚಳಗೊಂಡಿದೆ.

### ಉಪಸಂಹಾರ

ಕೃಷಿಯಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆಯ ಮೇಲೆ ಒಳಸುರಿಗಳ ಮಟ್ಟ ಮತ್ತು ವಿಧಗಳು ಪರಿಣಾಮ ಬೀರುತ್ತವೆ. ಆಧುನಿಕ ತಂತ್ರಜ್ಞಾನ ಮತ್ತು ಒಳಸುರಿಗಳು

**(50ನೇ ಪುಟಕ್ಕೆ)**

# ರೈತರ ಆದಾಯ ಹೆಚ್ಚಳಕ್ಕೆ ಪಶು ಪೋಷಣೆ



* ರಾಘವೇಂದ್ರ ಭಟ್

**ಕೃಷಿ ಮತ್ತು ತೋಟಗಾರಿಕೆಯಲ್ಲಿ ಸಿಗುವ ಉಪ-ಉತ್ಪನ್ನಶೇಷಗಳನ್ನು ಪರಿಷ್ಕರಿಸಿ ಪಶುಗಳಿಗೆ ಮೇವಾಗಿ ಬಳಸುವ ತಂತ್ರಜ್ಞಾನಗಳನ್ನು ರೂಪಿಸಲಾಗಿದೆ. ಅಡಿಕೆ ತೋಟಗಳಲ್ಲಿ ಬೀಳುವ ಅಡಿಕೆ ಹಾಳೆಗಳನ್ನು ಒಣಗಿಸಿ, ಸಣ್ಣ ಗಾತ್ರದ ಚೂರು ಮಾಡಿ, ಇತರೇ ಆಹಾರ ಮೂಲಗಳೊಂದಿಗೆ (ಬೂಸ, ಹಿಂಡಿ, ಧಾನ್ಯ) ಮಿಶ್ರಮಾಡಿ, ಒಣ ಮೇವಾಗಿ ಬಳಸ ಬಹುದಾಗಿದೆ. ಮೆಕ್ಕೆ ಜೋಳದ ದಂಟು ಕೂಡ ಒಣ ಮೇವಾಗಿ ಬಳಸಬಹುದಾಗಿದೆ.**

ಪಶುಸಂಗೋಪನೆ ರೈತರ ಪರ್ಯಾಯ ಜೀವನೋಪಾಯವಾಗಿದೆ. ಕೃಷಿಕರ ಆದಾಯವನ್ನು ದ್ವಿಗುಣಗೊಳಿಸುವ ಆಶಯಕ್ಕೆ ಪಶುಪಾಲನೆ ಪೂರಕವಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆಯು ರೈತಾಪಿ ಜನರ ಪರ್ಯಾಯ ಜೀವನೋಪಾಯ ಮಾರ್ಗವನ್ನು ಅಭಿವೃದ್ಧಿಪಡಿಸಲು ಶ್ರಮಿಸುತ್ತಿದೆ.

ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆಯು ಭಾರತೀಯ ಕೃಷಿ ಸಂಶೋಧನಾ ಪರಿಷತ್‌ನ ಒಂದು ಅಂಗಸಂಸ್ಥೆಯಾಗಿದ್ದು, ನವೆಂಬರ್ 25, 1995ರಂದು ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದಿತು.

ಸಂಸ್ಥೆಯ ಸ್ಥಾಪನೆಯ ಮುಖ್ಯ ಉದ್ದೇಶ ಸಾಕು ಪ್ರಾಣಿ ಆಹಾರ ಮತ್ತು ಜೀವಕ್ರಿಯೆಗೆ ಸಂಬಂಧಿತ ಮೂಲ ಸಂಶೋಧನೆ ಹಾಗೂ ಉತ್ಪಾದನಾ ಸಾಮರ್ಥ್ಯ ದಕ್ಷತೆಯ ವೃದ್ಧಿ. ಕಳೆದ 21 ವರ್ಷಗಳ ಸತತ ಕ್ರಿಯಾತ್ಮಕ ಸಂಶೋಧನೆಯಲ್ಲಿ ಗಣನೀಯ ಪ್ರಗತಿ ಸಾಧಿಸಿ ಸಂಸ್ಥೆಯು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮನ್ನಣೆ ಪಡೆದಿದೆ. ಸಂಸ್ಥೆಯ ಸಂವೇದನಾಶೀಲ ಆಡಳಿತ, ಕೊಡುಗೆ ಮತ್ತು ಪ್ರಗತಿಗೆ ಪೂರಕವಾಗಿ 2012ರಲ್ಲಿ ಐಸಿಎಆರ್‌ನ ಅತ್ಯುನ್ನತ ಪ್ರಶಸ್ತಿಯಾದ "ಸರದಾರ್ ಪಟೇಲ್ ಅತ್ಯುತ್ತಮ ಸಂಸ್ಥೆ" ಹಾಗೂ ಐಎಸ್‌ಓ 9000-2008 ಪ್ರಮಾಣ ಪತ್ರ ಕೂಡ ದೊರೆತಿವೆ.

### ಮುಖ್ಯ ಧ್ಯೇಯಗಳು

ಪ್ರಾಣಿ ಜೀವ ಕ್ರಿಯಾ ವಿಜ್ಞಾನ ಮತ್ತು ಪೋಷಣೆಗೆ ಸಂಬಂಧಿಸಿದ ಮೂಲ ಹಾಗೂ ಕಾರ್ಯತಂತ್ರದ ಸಂಶೋಧನೆ, ಉತ್ಪಾದನಾ ಕ್ಷಮತೆಯಲ್ಲಿ ವೃದ್ಧಿ, ಕೌಶಲ್ಯ ವೃದ್ಧಿ ಹಾಗೂ ತರಬೇತಿ. ಈ ಧ್ಯೇಯಗಳನ್ನು ಪಾಲನೆ ಮತ್ತು ಅನುಷ್ಠಾನಕ್ಕೆ ಸಂಸ್ಥೆಯು ವಿವಿಧ ಸಂಶೋಧನಾ ಯೋಜನೆಗಳನ್ನು ರೂಪಿಸಿದೆ. ಪ್ರಮುಖವಾದ ಯೋಜನೆಗಳಲ್ಲಿ ಒಣ ಹುಲ್ಲು ಜೀರ್ಣತೆಯ ವೃದ್ಧಿ ಜೀರ್ಣತೆಗೆ ಸಂಬಂಧಿಸಿದ ಸೂಕ್ಷ್ಮಜೀವಾಣುಗಳ ಅಧ್ಯಯನ, ಪೋಷಕಾಂಶಗಳ ಸದ್ಬಳಕೆಯ ನವೀನ ಕ್ರಮಗಳು, ಪಶು ಆಹಾರ, ಸುರಕ್ಷತೆಯ ಹಾಗೂ ಗುಣಮಟ್ಟದ ಸಮಗ್ರ ಮಾಹಿತಿ, ಸಂತಾನೋತ್ಪತ್ತಿಗೆ ಸಂಬಂಧಿಸಿದ ಕ್ರಿಯೆಗಳ ದೀರ್ಘ ಅಧ್ಯಯನ, ಪರಿಸರದ ವೈಪರೀತ್ಯ ಮತ್ತು ಪ್ರಾಣಿಗಳ ಮೇಲಿನ ಪ್ರಭಾವ, ತಂತ್ರಜ್ಞಾನ ರೂಪಣೆ ಮತ್ತು ಕ್ಷೇತ್ರ ವರ್ಗಾವಣೆ. ಸಂಶೋಧನೆಯ ಜೊತೆಗೆ ಪ್ರಾಣಿ ಸಂಶೋಧನೆ ಮತ್ತು ಶರೀರ ಕ್ರಿಯಾ ವಿಜ್ಞಾನದಲ್ಲಿ ಗುಣ ಮಟ್ಟದ ಮಾನವ ಸಂಪನ್ಮೂಲದ ಅಭಿವೃದ್ಧಿಯ ಬಗ್ಗೆ ಸಂಸ್ಥೆಯು ಕೊಡುಗೆ ನೀಡುತ್ತಿದೆ.

### ಸಂಸ್ಥೆಯಲ್ಲಿನ ಸೌಕರ್ಯಗಳು

ಸಂಸ್ಥೆಯು ಅಂತಾರಾಷ್ಟ್ರೀಯ ಮಟ್ಟದ ಪ್ರಯೋಗಾಲಯಗಳನ್ನು ಹೊಂದಿದ್ದು, ಆಧುನಿಕ ಉಪಕರಣ ಮತ್ತು ಸಂಶೋಧನಾ ಸೌಲಭ್ಯಗಳನ್ನು ಹೊಂದಿದೆ. ಈ ಸೌಲಭ್ಯಗಳಿಂದ ಪ್ರಾಣಿ

* ನಿರ್ದೇಶಕರು, ಎನ್‌ಐಎಎನ್‌ಪಿ, ಬೆಂಗಳೂರು. E-mail : directornianp@gmail.com

ಪೋಷಣೆ, ಜೀವ ಕ್ರಿಯಗೆ ಸಂಬಂಧಿತ ಮೂಲ ಸಂಶೋಧನೆಯ ತಂತ್ರಜ್ಞಾನದ ರೂಪಣೆ ಸಾಧ್ಯವಾಗಿದೆ. ಸಂಸ್ಥೆಯು ವಿವಿಧ ವಿಷಯಗಳಲ್ಲಿ ಪರಿಣಿತಿ ಪಡೆದ 39 ವಿಜ್ಞಾನಿಗಳನ್ನು ಹೊಂದಿದೆ.


**ಪ್ರಮುಖ ಸಾಧನೆಗಳು**

**ಜಾನುವಾರು ಸಂಖ್ಯೆ ಮತ್ತು ಆಹಾರ ಸಂಪನ್ಮೂಲಗಳ ಅಂಕಿ ಕೋಶ**

ದೇಶದ ಜಿಲ್ಲಾ ಮಟ್ಟದ ಜಾನುವಾರು ಸಂಖ್ಯೆ ಹಾಗೂ ಲಭ್ಯವಿರುವ ಸ್ಥಳೀಯ ಆಹಾರ ಸಂಪನ್ಮೂಲಗಳನ್ನು ಒಳಗೊಂಡ ಅಂಕಿ ಕೋಶವನ್ನು ಸಿದ್ಧಪಡಿಸಿದೆ. ಅಂಕಿ-ಅಂಶಗಳ ಲಭ್ಯತೆಯ ಆಧಾರದಲ್ಲಿ ಈ ಅಂಕಿಕೋಶವನ್ನು ಆಗಾಗ್ಗೆ ಮಾರ್ಪಾಡು ಮಾಡಲಾಗುತ್ತದೆ. ಈ ಕೋಶವು ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿನ ಪಶು ಆಹಾರಗಳ ಪೂರೈಕೆ-ಲಭ್ಯತೆಗಳ ಸ್ಥಿತಿಯನ್ನು ಅರಿಯಲು ಹಾಗೂ ಸೂಕ್ತ ಯೋಜನಾಕ್ರಮಗಳನ್ನು ರೂಪಿಸಲು ಸಹಾಯವಾಗಿದೆ. ಈ ಪ್ರಯತ್ನ ದೇಶದಲ್ಲಿ ಮೊದಲನೆಯದಾಗಿದ್ದು, ಸಾಕಷ್ಟು ಮನ್ನಣೆ ಪಡೆದಿದೆ.

**ಮೀಥೇನ್ ಅನಿಲದ ಪ್ರಸರಣ ಪ್ರಮಾಣದ ಅಂಕಿ ಕೋಶ**

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜಾನುವಾರುಗಳ ಆಹಾರ ಪದ್ಧತಿ ಮತ್ತು




ಪ್ರತ್ಯೇಕ ಪಶು ಆಹಾರಗಳ ಮೀಥೇನ್ ಅನಿಲ ಉತ್ಪಾದನೆಯ ಸಾಮರ್ಥ್ಯಕ್ಕೆ ಅನುಸಾರವಾಗಿ, ಒಟ್ಟು ಪ್ರಮಾಣದ ಮೀಥೇನ್ ಅನಿಲ ಪ್ರಸರಣದ ಅಂಕಿ-ಅಂಶದ ಕೋಶವನ್ನು ತಯಾರಿಸಲಾಗಿದ್ದು, ವಾತಾವರಣದಲ್ಲಿ ಮೀಥೇನ್ ಅನಿಲದ ಹೊರಸೂಸುವಿಕೆಗೆ, ಜಾನುವಾರುಗಳ ಕೊಡುಗೆ ಬಗ್ಗೆ ಅರಿಯಲು, ಈ ಕೋಶ ತುಂಬಾ ಸಹಾಯಕಾರಿ.

**ಕ್ಷೇತ್ರೀಯ ಖನಿಜ ಮಿಶ್ರಣ ತಂತ್ರಜ್ಞಾನ**

ಕರ್ನಾಟಕದ ವಿವಿಧ ಕೃಷಿ ವಲಯಗಳಲ್ಲಿನ ಹೈನು ರಾಸುಗಳಲ್ಲಿ ಪಶು ಆಹಾರ, ಮೇವು, ನೀರು ಮತ್ತು ಮೇವು ಬೆಳೆಯುವಲ್ಲಿ ಮಣ್ಣಿನ ಖನಿಜ-ಲವಣಗಳ ಪ್ರಮಾಣಕ್ಕೆ ಅನುಸಾರವಾಗಿ, ಕ್ಷೇತ್ರೀಯ ಖನಿಜ-ಮಿಶ್ರಣದ ಸೂತ್ರವನ್ನು ರೂಪಿಸಲಾಗಿದೆ. ಈ ಕ್ಷೇತ್ರೀಯ ಖನಿಜ ಮಿಶ್ರಣದ ಬಳಕೆಯಿಂದ ರಾಸುಗಳಲ್ಲಿ ಗರ್ಭಧಾರಣೆಯ ಸಮಸ್ಯೆ






ಕಡಿತವಾಗುವುದು, ಆರೋಗ್ಯ ವೃದ್ಧಿ ಹಾಗೂ ಹಾಲಿನ ಗುಣಮಟ್ಟ ಉತ್ತಮವಾಗುವುದು ಕಂಡು ಬಂದಿದೆ. ಈ ತಂತ್ರಜ್ಞಾನವನ್ನು ಕರ್ನಾಟಕ ಹಾಲು ಮಹಾ ಮಂಡಳಿ ಮತ್ತು ನಂದಿ ಅಗ್ರೋವೆಟ್ ಸಂಸ್ಥೆಯಲ್ಲಿ ವಾಣಿಜ್ಯೀಕರಣ ಮಾಡಲಾಗಿದ್ದು ಪ್ರಚಲಿತವಾಗಿದೆ.

**ಕುರಿ ಮೇಕೆಗಳಿಗೆ ವಿಶೇಷ ಖನಿಜ ಮಿಶ್ರಣ**

ಕುರಿ ಮೇಕೆಗಳಲ್ಲಿ ಖನಿಜಗಳ ಅಗತ್ಯತೆ, ಆಹಾರ ಪದ್ಧತಿಯಲ್ಲಿ ಖನಿಜಗಳ




ಲಭ್ಯತೆಗೆ ಅನುಸಾರವಾಗಿ, ಪ್ರತ್ಯೇಕ ಖನಿಜ ಮಿಶ್ರಣಗಳನ್ನು ತಯಾರು ಮಾಡಲಾಗಿದ್ದು, ಇದರ ಬಳಕೆಯಿಂದ ಉತ್ತಮ ಆರೋಗ್ಯ ಹಾಗೂ ಬೆಳವಣಿಗೆಯಾಗುವುದು ಕಂಡು ಬಂದಿದೆ. ಈ ತಂತ್ರಜ್ಞಾನವನ್ನು ಕೂಡ ನಂದಿ ಅಗ್ರೋವೆಟ್ ಸಂಸ್ಥೆಯಲ್ಲಿ ವಾಣಿಜ್ಯೀಕರಣ ಮಾಡಲಾಗಿದ್ದು ಗ್ರಾಹಕರಿಗೆ ಲಭ್ಯವಿದೆ.

**ಕೃಷಿ-ಉಪ ಉತ್ಪನ್ನ/ಶೇಷಗಳ ಸದ್ಬಳಕೆ**

ಕೃಷಿ ಮತ್ತು ತೋಟಗಾರಿಕೆಯಲ್ಲಿ ಸಿಗುವ ಉಪ-ಉತ್ಪನ್ನಶೇಷಗಳನ್ನು ಪರಿಷ್ಕರಿಸಿ ಪಶುಗಳಿಗೆ ಮೇವಾಗಿ ಬಳಸುವ ತಂತ್ರಜ್ಞಾನಗಳನ್ನು ರೂಪಿಸಲಾಗಿದೆ. ಅಡಿಕೆ ತೋಟಗಳಲ್ಲಿ ಬೀಳುವ ಅಡಿಕೆ ಹಾಳೆಗಳನ್ನು ಒಣಗಿಸಿ, ಸಣ್ಣ ಗಾತ್ರದ ಚೂರು ಮಾಡಿ, ಇತರೇ ಆಹಾರ ಮೂಲಗಳೊಂದಿಗೆ (ಬೂಸ, ಹಿಂಡಿ, ಧಾನ್ಯ) ಮಿಶ್ರಮಾಡಿ, ಒಣ ಮೇವಾಗಿ ಬಳಸ ಬಹುದಾಗಿದೆ. ಮೆಕ್ಕೆ ಜೋಳದ ದಂಟು ಕೂಡ ಒಣ ಮೇವಾಗಿ





ಬಳಸಬಹುದಾಗಿದೆ. ಹಣ್ಣಿನ ಶೇಷಗಳಾದ ಪೈನಾಪಲ್ ಹಣ್ಣಿನ ಶೇಷ, ಹಲಸಿನ ಹಣ್ಣಿನ ಶೇಷಗಳನ್ನು ಕೆಡದಂತೆ ರಸಮೇವು ತಯಾರಿಸಿ ಹಸಿರು ಮೇವಿನ ರೂಪದಲ್ಲಿ ರಾಸುಗಳಿಗೆ ಬಳಸುವ ತಂತ್ರಜ್ಞಾನವನ್ನು ಕೂಡ ರೂಪಿಸಲಾಗಿದೆ. ಈ ವಿಧಾನದಿಂದ ಹಣ್ಣಿನ ಫ್ಯಾಕ್ಟರಿಗಳಲ್ಲಿ ಹಣ್ಣಿನ ಶೇಷಗಳನ್ನು ನಿರ್ವಹಿಸಿ, ಪರಿಸರಮಾಲಿನ್ಯವನ್ನು ತಡೆಯಬಹುದು.

**ಅಜೋಲ್ಲ ಬೆಳೆಯುವ ಸರಳ ಕ್ರಮ**

ಅಜೋಲ್ಲ ಪಾಚಿಯನ್ನು ಕಡಿಮೆ ವೆಚ್ಚದ ಸಿಲ್‌ಪಾಲಿನ್ ಸಾಮಗ್ರಿಯ ತೊಟ್ಟಿಯಲ್ಲಿ ಬೆಳೆಯಬಹುದಾದ ಸರಳ ಕ್ರಮವನ್ನು ರೂಪಿಸಲಾಗಿದೆ. ಪ್ರತೀ ದಿನ ಅಜೋಲ್ಲ ಸಸ್ಯವನ್ನು ಬೂಸ/ಹಿಂಡಿಯ



ಜೊತೆ ಮಿಶ್ರ ಮಾಡಿ ರಾಸುಗಳಿಗೆ, ಕುರಿ–ಮೇಕೆಗಳಿಗೆ ತಿನ್ನಿಸುವುದರಿಂದ ಉತ್ತಮ ಲಾಭ ಪಡೆಯಬಹುದು.

**ಕೆಂಪು ಬಣ್ಣದ ಬೆಳಕಿನಿಂದ, ಮೊಟ್ಟೆ ಉತ್ಪಾದನೆ ವೃದ್ಧಿ**


ಕೆಂಪು ಬಣ್ಣದ ಬೆಳಕಿನ ತರಂಗಾಂತರ (675ಟಿಟ) ಗಳ ಬಳಕೆಯಿಂದ ಕೋಳಿಗಳಲ್ಲಿ



ಮೊಟ್ಟೆಯ ಉತ್ಪಾದನೆಯನ್ನು 4–5% ವೃದ್ಧಿಸಬಹುದು. ಈ ಕ್ರಮಕ್ಕೆ ಕೆಂಪು ಬಣ್ಣದ ಬಲ್ಬ್‌ಗಳನ್ನು ಕೋಳಿಫಾರಂಗಳಲ್ಲಿ ಬಳಸುವುದರಿಂದ, ಬೆಳಕಿಗೆ ತಗಲುವ ವೆಚ್ಚ ಕಡಿತಗೊಳಿಸ ಬಹುದು.

**ಜೀವಾಂಶ ಪೂರಕಗಳು**

ಕೃಷಿ ತ್ಯಾಜ್ಯ ಸಾಮಗ್ರಿಗಳ (ಜೋಳದ ದಿಂಡು, ಕಬ್ಬಿನ ಸಿಪ್ಪೆ) ಪರಿಷ್ಕರಣೆ ಮಾಡಿ ಗ್ಸೈಲೋ ಆಲಿಗೋ ಸ್ಯಾಕರೈಡ್ ಎಂಬ ಜೀವಾಂಶ ಪೂರಕ ಅಂಶಗಳನ್ನು ಬೇರ್ಪಡಿಸಿ, ಶುದ್ಧೀಕರಿಸಿ, ಔಷಧಿ ರೂಪದಲ್ಲಿ ಆಹಾರದಲ್ಲಿ ಬಳಸುವುದರಿಂದ ಕರುಳಿನ ಆರೋಗ್ಯ ಉತ್ತಮಗೊಳಿಸಿ, ಜೀವ




ನಿರೋದಕ ಶಕ್ತಿಯನ್ನು ವೃದ್ಧಿಗೊಳಿಸುವ ಕ್ರಮವನ್ನು ರೂಪಿಸಲಾಗಿದೆ.

**ಮೀಥೇನ್ ಅನಿಲ ನಿಯಂತ್ರಣದ ಕ್ರಮಗಳು**


ಮೀಥೇನ್ ಅನಿಲವು ಪರಿಸರ ಮಾಲಿನ್ಯ ಮತ್ತು ತಾಪಮಾನದ ಏರಿಕೆಯಲ್ಲಿ



ಒಂದು ಕಾರಣವಾಗಿದ್ದು, ಜಾನುವಾರು (ಹಸು, ಎಮ್ಮೆ, ಕುರಿ, ಮೇಕೆ) ಗಳಿಂದ ಇದರ ಉತ್ಪಾದನೆಯಲ್ಲಿ ಕಡಿತಗೊಳಿಸುವ ಆಹಾರಕ್ರಮಗಳನ್ನು ರೂಪಿಸಲಾಗಿದೆ. ವೃಕ್ಷಮೇವುಗಳು, ಹುಣಸೇ ಬೀಜದ ಹೊಟ್ಟು ಮತ್ತು ಸಮತೋಲನ ಆಹಾರ ಬಳಸುವುದರಿಂದ ಮೀಥೇನ್ ಅನಿಲದ ಉತ್ಪಾದನೆಯನ್ನು 25–30% ಕಡಿಮೆಮಾಡಬಹುದು.

**ವೀರ್ಯದ ಗುಣ ಮಾಪನದ ಪರೀಕ್ಷೆಗಳು**

ಕೃತಕ ಗರ್ಭಧಾರಣೆಯಲ್ಲಿ ಗುಣಮಟ್ಟದ ವೀರ್ಯ ಅತೀ ಮುಖ್ಯ. ವೀರ್ಯ ಉತ್ಪಾದಿಸುವ ಹೋರಿಗಳಲ್ಲಿನ ನ್ಯೂನತೆಗಳನ್ನು ಗುರುತಿಸಿ ವೀರ್ಯದ ಗುಣವನ್ನು ಮಾಪನ ಮಾಡುವ ಕೆಲವು ಸರಳ ವಿಧಾನಗಳನ್ನು ರೂಪಿಸಲಾಗಿದೆ.




ಈ ಪರೀಕ್ಷೆಗಳಿಂದ ಹೋರಿಗಳ ಕ್ಷಮತೆಯ ಆಧಾರದ ಮೇಲೆ ವೀರ್ಯ ಬಳಸಬಹುದಾಗಿದೆ. ಈ ವಿಧಾನದಿಂದ ಕೃತಕ ಗರ್ಭಧಾರಣೆಯ ಫಲಿತಾಂಶದ ಯಶಸ್ಸು ಹೆಚ್ಚಿಸಬಹುದು.

**ಆಹಾರ ಸಹಾಯಕ ಮತ್ತು ಸಿದ್ಧಗಣಕ**

ಸಮತೋಲನ ಆಹಾರ (ಹಸಿರು ಹುಲ್ಲು, ಒಣ ಹುಲ್ಲು, ಆಹಾರ ಮಿಶ್ರಣವನ್ನು ಹಾಲಿನ ಇಳುವರಿಗೆ ಅನುಸಾರವಾಗಿ ಬಳಸುವುದರಿಂದ ಹಾಲಿನ ಗುಣಮಟ್ಟವನ್ನು ಹೆಚ್ಚಿಸಬಹುದು ಮತ್ತು ತಗಲುವ ಖರ್ಚನ್ನು ಕಡಿಮೆಮಾಡಬಹುದು. ಕಂಪ್ಯೂಟರ್ ಆಧಾರಿತ ಆಹಾರ ಸಹಾಯಕ ಎಂಬ ಸಾಫ್ಟ್ ವೇರ್‌ನ ಸಹಾಯದಿಂದ ರಾಸಿಗೆ ನೀಡಬೇಕಾದ ಹುಲ್ಲಿನ ಮತ್ತು ಆಹಾರ ಮಿಶ್ರಣದ ಪ್ರಮಾಣವನ್ನು ನಿಗದಿಗೊಳಿಸಬಹುದು. ಇನ್ನೂ ಸರಳವಾದ ಸಿದ್ಧಗಣಕ ಎಂಬ ಸಾಧನವನ್ನು ಕೂಡ ರೂಪಿಸಲಾಗಿದ್ದು, ರೈತರಿಗೆ ತುಂಬಾ ಅನುಕೂಲವಾಗಿದೆ.

**ಪಶು ಆಹಾರಗಳ ಮಾಹಿತಿತಾಣ**

ಜಾನುವಾರು ಸಾಕಣೆಯಲ್ಲಿ ಆಹಾರ ಸಾಮಗ್ರಿಗಳ ಮಾಹಿತಿ ಒದಗಿಸುವ ತಾಣವನ್ನು ರೂಪಿಸಲಾಗಿದ್ದು, ಪೋಷ್ಟಿಕಾಂಶಗಳ ವಿವರ, ಬಳಕೆ, ಅಗತ್ಯತೆ ಹಾಗೂ ಲಭ್ಯತೆಯ ಮಾಹಿತಿಗಳನ್ನು ಈ ತಾಣದಲ್ಲಿ ವಿವರಿಸಲಾಗಿದೆ. ಈ ತಾಣವನ್ನು NIANP website http//:www.nianp.res.in ಮೂಲಕ ಸಂಪರ್ಕಿಸಬಹುದಾಗಿದೆ.







**ಮೊಳಕೆ ಹುಲ್ಲು ಬೆಳೆಯುವ ವಿಧಾನ**

ಮಣ್ಣಿಲ್ಲದೆ ಕಡಿಮೆ ನೀರಿನಲ್ಲಿ ಧಾನ್ಯ (ಮೆಕ್ಕೆ ಜೋಳ, ಗೋಧಿ) ಗಳನ್ನು ಮೊಳಕೆ ಮಾಡಿ, ನೀರು ಸಿಂಪಡಿಸುವುದರಿಂದ 10 ದಿನಗಳಲ್ಲಿ ಸುಮಾರು ಅರ್ಧ ಅಡಿಗಿಂತ ಹೆಚ್ಚು ಉದ್ದದ ಹಸಿರು ಹುಲ್ಲು ಪಡೆಯಬಹುದು. ಧಾನ್ಯದ ಮೊಳಕೆಯನ್ನು ಒಣ ಹುಲ್ಲಿನ ತೆಳುಪದರದಲ್ಲಿ ಬೆಳೆಸುವುದರಿಂದ, ನೀರಿನ ಅವಶ್ಯಕತೆ ಕಡಿಮೆ ಮಾಡಬಹುದು. ಈ




ವಿಧಾನದಿಂದ 1 ಕೆ.ಜಿ. ಧಾನ್ಯದಿಂದ 4–5 ಕೆ.ಜಿ. ಹಸಿರು ಮೇವು ಪಡೆಯಬಹುದು.



**ಸಂಸ್ಥೆಗೆ ಸಂದ ಗೌರವಗಳು**

ಎನ್‌ಐಎನ್‌ಪಿ ಸಂಸ್ಥೆಯಲ್ಲಿ ನಡೆದ ಸಂಶೋಧನೆಯ ಫಲವಾಗಿ ಹಲವಾರು ಪದವಿ, ಗೌರವಗಳು ಸಂದಿವೆ. ಅದರಲ್ಲಿ ಮುಖ್ಯವಾದವುಗಳು: ಅತ್ಯುತ್ತಮ ಸಂಶೋಧನಾ ಸಂಸ್ಥೆ, ಪಂಗಡ ಸಂಶೋಧನಾ ಪದವಿ, ಹರಿ ಓಂ ಪದವಿ, ಉತ್ತಮ ವಾರ್ಷಿಕ ವರದಿ ಪದವಿ. ಇದಲ್ಲದೇ ಸಂಸ್ಥೆಯ ವಿಜ್ಞಾನಿಗಳಿಗೆ ಹಲವಾರು ಯುವ ಹಾಗೂ ಉತ್ತಮ ವಿಜ್ಞಾನಿ ಪ್ರಶಸ್ತಿಗಳು ಕೂಡ ಲಭ್ಯವಾಗಿವೆ.

**ಸಂಶೋಧನಾ ಸಂಪರ್ಕಗಳು ಮತ್ತು ಒಡಂಬಡಿಕೆಗಳು**

ಎನ್‌ಐಎನ್‌ಪಿ ಸಂಸ್ಥೆಯು ರಾಷ್ಟ್ರೀಯ ಸಂಶೋಧನಾ ಮತ್ತು ಶಿಕ್ಷಣ ಸಂಸ್ಥೆಗಳಲ್ಲದೇ, ಇತರೇ ಹಲವಾರು ಅಂತರಾಷ್ಟ್ರೀಯ ಸಂಸ್ಥೆ ಹಾಗೂ ವಿಶ್ವವಿದ್ಯಾಲಯಗಳ ಜೊತೆ ಕೂಡ ಸಂಶೋಧನೆ ಮತ್ತು ತರಭೇತಿಯ ಒಡಂಬಡಿಕೆ ಮಾಡಿಕೊಂಡಿದೆ. ಅದರಲ್ಲಿ ಮುಖ್ಯವಾದ ದೇಶಗಳು: ಆಸ್ಟ್ರೇಲಿಯ, ಜರ್ಮನಿ, ಫ್ರಾನ್ಸ್, ಜಪಾನ್, ಅಮೆರಿಕ ಮತ್ತು ಮಲೇಶಿಯಾ. ❑

# ಕರ್ನಾಟಕ ಪಂಚಾಯತ್ – ಇ ಮಾದರಿ ಸಾಧನೆ

* ಮಹಮ್ಮದ್ ಇಮ್ತಿಯಾಜ್



**ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಬಳಕೆ ಮೂಲಕ ಪಂಚಾಯತ್ ಸಂಸ್ಥೆಗಳನ್ನು ಸಶಕ್ತಗೊಳಿಸಿದ ಸಾಧನೆಗಾಗಿ ಕರ್ನಾಟಕ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ಇ ಪುರಸ್ಕಾರ (ವರ್ಗ–1) ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಂಸ್ಥೆಗಳಲ್ಲಿನ ಇ – ಆಡಳಿತದ ಇಣುಕು ನೋಟ ಇಲ್ಲಿದೆ**

ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಜನರಿಗೆ ಇ–ಆಡಳಿತದ ಮೂಲಕ ಸುಲಭ ಸೌಲಭ್ಯ, ಹೊಸ ಆಯಾಮವನ್ನು ಒದಗಿಸಲು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮೀಣ ಜನತೆಯ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿಗೆ ಬಹು ಪ್ರಮುಖವಾದ ಸ್ಥಾನವಿದೆ.

ವಾರ್ಡ್‌ಸಭೆ, ಗ್ರಾಮ ಸಭೆಗಳ ಮೂಲಕ ಕಾರ್ಯಕ್ರಮಗಳ ನಿರೂಪಣೆ, ಯೋಜನೆ, ಫಲಾನುಭವಿಗಳ ಆಯ್ಕೆ, ಕಾರ್ಯಕ್ರಮಗಳ ಅನುಷ್ಠಾನದ ಪರಿಶೀಲನೆ ಮತ್ತು ಪರಿಶೋಧನೆಯಂತಹ ಮಹತ್ವದ ಕಾರ್ಯ ಚಟುವಟಿಕೆಗಳು ಜರುಗುತ್ತವೆ. ಈ ಎಲ್ಲಾ ಚಟುವಟಿಕೆಗಳನ್ನು ಕ್ರೋಢೀಕರಿಸಿ ಅಭಿವೃದ್ಧಿಗೆ ಪೂರಕವಾಗಿ ಬಳಸಿಕೊಳ್ಳಬೇಕಾದುದು ಇಂದಿನ ಅಗತ್ಯ. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿಯ ಎಲ್ಲಾ ಚಟುವಟಿಕೆಗಳನ್ನು, ಆಡಳಿತಾತ್ಮಕ ವಿಷಯಗಳನ್ನು ಮತ್ತು ಹಣಕಾಸಿನ ವ್ಯವಹಾರಗಳನ್ನು ಗಣಕೀಕರಣಗೊಳಿಸಬೇಕು ಮತ್ತು ಆ ಮೂಲಕ ದಾಖಲಾತಿಗಳ ನಿರ್ವಹಣೆಯಲ್ಲಿ ಶಿಸ್ತು ತರಲು ಹಾಗೂ ಈ ಎಲ್ಲಾ ವ್ಯವಹಾರಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿ ನೀಡಬೇಕೆನ್ನುವ ನಿಟ್ಟಿನಲ್ಲಿ "ಪಂಚತಂತ್ರ" ಎಂಬ ದ್ವಿ ನಮೂದು ಲೆಕ್ಕ ಪದ್ಧತಿಯ ತಂತ್ರಾಂಶವನ್ನು ರಾಷ್ಟ್ರೀಯ ಮಾಹಿತಿ ಕೇಂದ್ರದ ಸಹಯೋಗದೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅಭಿವೃದ್ಧಿಪಡಿಸಿ ಅಳವಡಿಸಲಾಗಿದೆ.

### ಲೆಕ್ಕ ನಿರ್ವಹಣಾ ತಂತ್ರಾಂಶ

ಗ್ರಾಮ ಪಂಚಾಯತಿ ಲೆಕ್ಕಗಳನ್ನು ದಿನಾಂಕ: 01.04.2007 ರಿಂದ ಜಾರಿಗೆ ಬರುವಂತೆ ದ್ವಿ ನಮೂದು ಪದ್ಧತಿಯಡಿಯಲ್ಲಿ ನಿರ್ವಹಿಸಲು ತೀರ್ಮಾನಿಸಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ನ್ನು ಹೊರಡಿಸಲಾಗಿತ್ತು. ಈ ಕಾರ್ಯವನ್ನು ಸರಳ ಮತ್ತು ಸುಲಲಿತವಾಗಿಸಿದ್ದು ಪಂಚತಂತ್ರ ತಂತ್ರಾಂಶ. ಪಂಚತಂತ್ರ ತಂತ್ರಾಂಶದ ಬಹುಮೂಲ್ಯ ಲಕ್ಷಣವೆಂದರೆ ಗ್ರಾಮ ಪಂಚಾಯತಿ ಲೆಕ್ಕ ಪತ್ರಗಳನ್ನು ದ್ವಿ ನಮೂದು ಪದ್ಧತಿಯಡಿ ಸಂಚಯನ ವಿಧಾನದಲ್ಲಿ ಲೆಕ್ಕ ಪತ್ರಗಳನ್ನು ನಿರ್ವಹಿಸಲು ಮತ್ತು ಸೃಜಿಸಲು ಅನುವಾಗುವಂತೆ ಅಭಿವೃದ್ಧಿಪಡಿಸಿರುವುದು. ಜೋಡಿ ನಮೂದು ಪದ್ಧತಿಯ ಎಲ್ಲಾ ನಿಯಮಗಳನ್ನು ಇದರಲ್ಲಿ ಅಂತರ್ಗತಗೊಳಿಸಿರುವುದರಿಂದ ತಂತ್ರಾಂಶ ಬಳಕೆದಾರರು ಹಣಕಾಸಿನ ವ್ಯವಹಾರಗಳನ್ನು ನಮೂದಿಸುತ್ತಿದ್ದಂತೆ ತಂತ್ರಾಂಶವು ಸ್ವಯಂ ಆಗಿ ವಹಿವಾಟುಗಳನ್ನು ದ್ವಿ ನಮೂದು ಪದ್ಧತಿಯಡಿ ಪ್ರಸ್ತುತಪಡಿಸುವುದು ಇದರ ವಿಶೇಷ.

### ಪ್ರಮುಖ ಲಕ್ಷಣಗಳು

ತಂತ್ರಾಂಶದ ಪ್ರಮುಖ ಲಕ್ಷಣಗಳನ್ನು ಈ ಮುಂದಿನಂತೆ ಪಟ್ಟಿ ಮಾಡಬಹುದು.

* ಹಣಕಾಸು ವಹಿವಾಟುಗಳ ಎರಡು ಆಯಾಮಗಳನ್ನು ದಾಖಲಿಸುವುದು ಮತ್ತು ಲೆಕ್ಕಗಳನ್ನು ಸಂಚಯನ ವಿಧಾನದಲ್ಲಿ ನಿರ್ವಹಿಸಿ ದ್ವಿ ನಮೂದು ಪದ್ಧತಿಯಲ್ಲಿ

* ರಾಜ್ಯ ಯೋಜನಾ ವ್ಯವಸ್ಥಾಪಕರು, ಇ ಆಡಳಿತ, ಆರ್‌ಡಿಪಿಆರ್. E-mail : rdpr.info@gmail.com

ಪ್ರಸ್ತುತಪಡಿಸುವುದು. * ಗ್ರಾಮ ಪಂಚಾಯತಿ ಆಯವ್ಯಯ ಮತ್ತು ಲೆಕ್ಕಪತ್ರಗಳ ನಿಯಮಗಳ ಅನುಸಾರ 200ಕ್ಕಿಂತಲೂ ಹೆಚ್ಚಿನ ಸಾಮಾನ್ಯ ಲೆಡ್ಜರುಗಳನ್ನು ನಿರ್ವಹಿಸುವುದರೊಂದಿಗೆ ಲೆಕ್ಕಪತ್ರಗಳ ಎಲ್ಲಾ ನಮೂನೆಗಳನ್ನು ಸೃಜಿಸುವುದು. * ಸಂಚಯನ ಲೆಕ್ಕ ವಿಧಾನದ ಆಯಾಮಗಳು ತಂತ್ರಾಂಶದಲ್ಲಿ ಅಂತರ್ಗತವಾಗಿರುವುದರಿಂದ ಆದಾಯದ ಹಕ್ಕು ಸ್ಥಾಪಿತವಾದಾಗ ಮತ್ತು ವೆಚ್ಚದ ಬದ್ಧತೆ ಉಂಟಾದ ಕೂಡಲೇ ವಹಿವಾಟನ್ನು ಲೆಕ್ಕಗಳಲ್ಲಿ ದಾಖಲಿಸುವುದು. * ಜೋಡಿ ನಮೂದು ಪ್ರಮುಖ ದಾಖಲೆಗಳಾದ ಪ್ರಾಯೋಗಿಕ ಆರ್ಥಿಕ ಸ್ಥಿತಿ ಪಟ್ಟಿ (ಟ್ರಯಲ್ ಬ್ಯಾಲೆನ್ಸ್), ಸ್ವೀಕೃತಿ ಮತ್ತು ಪಾವತಿ ಲೆಕ್ಕ, ಆದಾಯ ಮತ್ತು ವೆಚ್ಚದ ಲೆಕ್ಕ ಮತ್ತು ಸಮತೋಲನಾ ಪಟ್ಟಿಯನ್ನು ಸ್ವಯಂ ಆಗಿ ಸೃಜಿಸುವುದು. * ಹಣಕಾಸು ವಹಿವಾಟು ದಾಖಲೆಯಾದೊಡನೆ ಗ್ರಾಮ ಪಂಚಾಯತಿ ಆಸ್ತಿ ಮತ್ತು ಋಣಗಳ ಪಟ್ಟಿಗೆ ಆಸ್ತಿ ಮತ್ತು ಋಣಗಳು ಸೇರ್ಪಡೆಯಾಗುವುದು. * ಗ್ರಾಮ ಪಂಚಾಯತಿಯ ಸಾಮಾನ್ಯ ವಿವರಗಳನ್ನು ಮಸ್ಟರ್‌ಗಳಲ್ಲಿ ಅಳವಡಿಸುವುದರಿಂದ ಅವುಗಳ ವಿವರಗಳನ್ನು ಮತ್ತೆ ಮತ್ತೆ ನಮೂದು ಮಾಡಬೇಕಾಗಿರುವುದಿಲ್ಲ. ಲೆಕ್ಕಗಳನ್ನು ವಾರ್ಷಿಕವಾಗಿ ಅಂತ್ಯಗೊಳಿಸುವಾಗ ಅಂತರ್ಗತವಾಗಿ ಮುಂದುವರೆಯುತ್ತವೆ. ಕಾಲಕಾಲಕ್ಕೆ ಸ್ವೀಕೃತಿ ಮತ್ತು ಪಾವತಿಗಳನ್ನು ಅಳವಡಿಸುವುದು ಮಾತ್ರ ಸಾಕಾಗುತ್ತದೆ.

### ತಂತ್ರಾಂಶದ ಅನುಕೂಲತೆಗಳು

ತಂತ್ರಾಂಶದ ಅನುಕೂಲಗಳು ಹಲವಾರು. ಅವುಗಳಲ್ಲಿ ಕೆಲವನ್ನು ಈ ಮುಂದಿನಂತೆ ಪಟ್ಟಿ ಮಾಡಬಹುದು:

* ಇದು ಅಂತರ್ಜಾಲ ಆಧಾರಿತವಾಗಿದ್ದು ಅಳವಡಿಸಲಾಗುವ ಎಲ್ಲಾ ವಹಿವಾಟುಗಳು ಮತ್ತು ಸೃಜನೆಯಾಗುವ ಲೆಕ್ಕಪತ್ರಗಳು ಕ್ಷಣಕ್ಷಣಕ್ಕೂ ಅಂತರ್ಜಾಲದಲ್ಲಿ ಸಾರ್ವಜನಿಕ ವೀಕ್ಷಣೆಗೆ ಲಭ್ಯವಿದೆ. * ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಎಲ್ಲಾ ನೋಂದಾಯಿತ ಆಸ್ತಿಗಳ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳು ಎಲ್ಲರಿಗೂ ಲಭ್ಯವಾಗುತ್ತವೆ. * ಗ್ರಾಮ ಪಂಚಾಯತಿಯ ದಿನನಿತ್ಯದ ವ್ಯವಹಾರಗಳನ್ನು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಪ್ರಗತಿ ಪರಿಶೀಲನೆ ಮತ್ತು ಮೇಲುಸ್ತುವಾರಿಗೆ



ಅನುಕೂಲವಾಗಿದೆ. * ತೆಗೆದುಕೊಂಡ ಪ್ರತಿ ಕಾಮಗಾರಿ, ಪಾವತಿಸಿದ ಮೊತ್ತ ಮತ್ತು ಅದರ ಸ್ಥಿತಿ ಗತಿ ವಿವರಗಳು ಸಾರ್ವಜನಿಕವಾಗಿ ಲಭ್ಯವಾಗುವುದರಿಂದ ಪಂಚಾಯತ್ ರಾಜ್ ಸಂಸ್ಥೆಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ಸಾಧ್ಯವಾಗಿದೆ. * ಎಲ್ಲಾ ಕಾರ್ಯಚಟುವಟಿಕೆಗಳಿಗೆ ಹಣಕಾಸು ಮೂಲವಾಗಿರುವುದರಿಂದ ಮತ್ತು ಅವು ಮುಕ್ತವಾಗಿ ಲಭ್ಯವಾಗುವುದರಿಂದ ಸಂಸ್ಥೆಯ ಕಾರ್ಯ ಯೋಜನೆಗಳನ್ನು ರೂಪಿಸಲು, ಅನುಷ್ಠಾನಗೊಳಿಸಲು, ಪಾವತಿಗಳನ್ನು ಮಾಡಲು ಮತ್ತು ನಿಗಾವಹಿಸಲು ಹಾಗೂ ಅಗತ್ಯವಿರುವೆಡೆ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಲು ಸಹಾಯಕವಾಗುತ್ತಿದೆ. * ತಂತ್ರಾಂಶವು ಕೈ ಬರಹದ ದಾಖಲೀಕರಣವನ್ನು ಕಡಿಮೆಗೊಳಿಸುತ್ತದೆ ಹಾಗೂ ಆ ಮೂಲಕ ಗ್ರಾಮ ಪಂಚಾಯತಿಯ ಲೆಕ್ಕಪತ್ರಗಳಲ್ಲಿ ನಿಖರತೆಯನ್ನು ತರುತ್ತದೆ. * ಅನುದಾನದ ಸಮರ್ಥ ಬಳಕೆ ಸಾಧ್ಯವಾಗುತ್ತದೆ ಮತ್ತು ನಿಧಿಯ ದುರ್ವಿನಿಯೋಗ ತಡೆಯಲು ಸಹಾಯಕವಾಗುತ್ತದೆ. * ಲೆಕ್ಕಗಳ ಪರಿಶೋಧನೆಗೆ ದಾಖಲೆಗಳನ್ನು ಒದಗಿಸುವಲ್ಲಿ ಮತ್ತು ಲೆಕ್ಕ ಪರಿಶೋಧನೆ ಮಾಡಲು ಸಹಾಯಕವಾಗುತ್ತದೆ. * ಸದರಿ ತಂತ್ರಾಂಶವು ಬಳಕೆದಾರ ಸ್ನೇಹಿಯಾಗಿದ್ದು, ಕನಿಷ್ಠ ಗಣಕ ಯಂತ್ರದ ಜ್ಞಾನದಿಂದ ತಂತ್ರಾಂಶವನ್ನು ನಿರ್ವಹಿಸಬಹುದು. * ವಿವಿಧ ಹಂತಗಳಲ್ಲಿ ಅಗತ್ಯವಿರುವ ಮಾಹಿತಿಯನ್ನು ಸದರಿ ಅಂತರ್ಜಾಲ ತಾಣವನ್ನು ಉಪಯೋಗಿಸಿ ಪಡೆದುಕೊಳ್ಳಬಹುದಾಗಿದೆ.

### ಪಂಚತಂತ್ರ ತಂತ್ರಾಂಶದಲ್ಲಿ ಲಭ್ಯವಾಗುವ ಮಾಹಿತಿಗಳು

1. ಗ್ರಾಮ ಪಂಚಾಯತಿಗಳಲ್ಲಿರುವ ಎಲ್ಲಾ ಆಸ್ತಿಗಳು.
2. ಗ್ರಾಮ ಪಂಚಾಯತಿಗಳು ನಿರ್ವಹಿಸುವ ಎಲ್ಲಾ ಖಾತೆಗಳ ವಿವರ
3. ಗ್ರಾಮ ಪಂಚಾಯತಿ ಅಧಿಕಾರಿ, ಸಿಬ್ಬಂದಿ ಮತ್ತು ಚುನಾಯಿತ ಪ್ರತಿನಿಧಿಗಳ ವಿವರ
4. ಬೇಡಿಕೆ, ಸಂಗ್ರಹ ಮತ್ತು ಬಾಕಿಗಳ ವರದಿ
5. ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ದೊರಕುವ ಸೌಲಭ್ಯಗಳ ವಿವರಗಳು.
6. ತಃಖ್ತೆ, ಆದಾಯ ಮತ್ತು ವೆಚ್ಚ ವರದಿ
7. ಸಾಮಾನ್ಯ ಮಾಹಿತಿ.
8. ಸಕಾಲ ಸೇವೆಗಳ ನಿರ್ವಹಣೆ
9. ವಾರ್ಡ್‌ಸಭೆ ಮತ್ತು ಗ್ರಾಮ ಸಭೆಗಳ ಸಂಪೂರ್ಣ ಮಾಹಿತಿ.
10. ಜಮಾಬಂದಿಯ ವಿವರಗಳು

**ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಬಳಕೆ ಮೂಲಕ ಪಂಚಾಯತ್ ಸಂಸ್ಥೆಗಳನ್ನು ಸಶಕ್ತಗೊಳಿಸಿದ ಸಾಧನೆಗಾಗಿ ಕರ್ನಾಟಕ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ಇ ಪುರಸ್ಕಾರ (ವರ್ಗ–1) ಪಡೆದುಕೊಂಡಿದೆ.**

ಪಂಚತಂತ್ರ ತಂತ್ರಾಂಶದಲ್ಲಿರುವ ಈ ಮುಂದಿನ ಅಂಶಗಳನ್ನು ಪರಿಗಣಿಸಿ ಪ್ರಶಸ್ತಿಯನ್ನು ನೀಡಲಾಗಿದೆ

1. **ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ 2015–16 ನೇ ಸಾಲಿನ ಕಾರ್ಯಕ್ಷಮತೆಯ ಮೌಲ್ಯಮಾಪನದ ಅನ್ವಯ ಐಸಿಟಿ ಸಾಧನಗಳನ್ನು ಉಪಯೋಗಿಸಿರುವುದು.**
2. ಗ್ರಾಮ ಪಂಚಾಯತಿಗಳ ಎಲ್ಲಾ ಲೆಕ್ಕ ಪತ್ರಗಳನ್ನು ಪಂಚತಂತ್ರದ ಮೂಲಕ ನಿರ್ವಹಿಸಲಾಗುತ್ತಿದೆ.
3. ಪ್ರತಿಯೊಂದು ಪಂಚಾಯತಿಗೂ ಕೂಡ ಪ್ರತ್ಯೇಕ ವೆಬ್ ಪೋರ್ಟಲ್ .
4. ಪಂಚಾಯತಿಗಳು ತಂತ್ರಾಂಶದಲ್ಲಿ ನವೀಕೃತ ಮಾಹಿತಿಯನ್ನು ಅಳವಡಿಸಿರುವುದು.
5. ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳ ಹಾಗೂ ಸಿಬ್ಬಂದಿಗಳ ವಿವರ.

6. ಗ್ರಾಮ ಪಂಚಾಯತಿಗಳ ಆಸ್ತಿಯ ವಿವರಗಳನ್ನು ಅಳವಡಿಸಿರುವುದು.

7. ಜಮಾಬಂದಿಯ ವಿವರಗಳನ್ನು ಅಳವಡಿಸಿರುವುದು.

8. ಚುನಾಯಿತ ಪ್ರತಿನಿಧಿಗಳು ಹಾಗೂ ಸಿಬ್ಬಂದಿಗಳಿಗೆ ಕಾಲಾನುಕಾಲಕ್ಕೆ ಕಂಪ್ಯೂಟರ್ ಮತ್ತು ಇತರೆ ವಿಷಯಗಳ ತರಬೇತಿಯನ್ನು ನೀಡಿರುವುದು.

9. ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳಿಗೆ ಇ–ಹಾಜರಾತಿ ವ್ಯವಸ್ಥೆಯನ್ನು ಜಾರಿಗೊಳಿಸಿರುವುದು.

**ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶ**

ಕಾಮಗಾರಿಗಳ ಅನುಷ್ಠಾನದಲ್ಲಿ ಪಾರದರ್ಶಕತೆ, ಬದ್ಧತೆ ಮತ್ತು ಸಾರ್ವಜನಿಕರ ಸಹಭಾಗಿತ್ವವನ್ನು ತರಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಗಾಂಧಿ ಸಾಕ್ಷಿ ಕಾಯಕ ಎಂಬ ತಂತ್ರಾಂಶವನ್ನು ರಾಷ್ಟ್ರೀಯ ಮಾಹಿತಿ ಕೇಂದ್ರದ ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸಿ ಅಕ್ಟೋಬರ್ 2, 2013 ಜಾರಿಗೊಳಿಸಲಾಗಿದೆ. ರಾಜ್ಯದಲ್ಲಿ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಕಾರ್ಯಕ್ರಮಗಳಡಿ ಹಾಗೂ ರಾಜ್ಯವಲಯದಡಿ ವಾರ್ಷಿಕ ಅಂದಾಜು ಒಂದು ಲಕ್ಷಕ್ಕಿಂತಲೂ ಅಧಿಕ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುತ್ತದೆ. ಇವುಗಳ ಅಗಾಧತೆ, ಪ್ರಾದೇಶಿಕ ಭಿನ್ನತೆ ಹಾಗೂ ಸರಿಯಾದ ಮಾಹಿತಿ ಸಂವಹನ ಕೊರತೆಯಿಂದಾಗಿ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಅವುಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆ ಮಾಡುವುದು ಒಂದು ದೊಡ್ಡ ಸವಾಲಾಗಿತ್ತು. ಈ ನಿಟ್ಟಿನಲ್ಲಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶ ಒಂದು ಉಪಯುಕ್ತ ಸಾಧನವಾಗಿದೆ.

**ತಂತ್ರಾಂಶದ ಪ್ರಮುಖ ಲಕ್ಷಣಗಳು ಮತ್ತು ಅವುಗಳ ಅನುಕೂಲತೆಗಳು**

ತಂತ್ರಾಂಶದ ಪ್ರಮುಖ ಲಕ್ಷಣಗಳು ಮತ್ತು ಅವುಗಳಿಂದಾಗುವ ಅನುಕೂಲಗಳನ್ನು ಈ ಮುಂದಿನಂತೆ ಪಟ್ಟಿ ಮಾಡಬಹುದು.



**1. ಕಾಮಗಾರಿಗಳ ಅನುಷ್ಠಾನದ ವಿವರಗಳನ್ನು ಅಳವಡಿಕೆ ಮತ್ತು ಅವುಗಳ ಮೇಲ್ವಿಚಾರಣೆಯನ್ನು ಆನ್‌ಲೈನ್ ಮೂಲಕ ಮಾಡಬಹುದು:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾಮಗಾರಿಗಳನ್ನು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕರ್ನಾಟಕ ಮೂಲಭೂತ ಸೌಕರ್ಯ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಮತ್ತು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಇವುಗಳಿಂದ ಅನುಷ್ಠಾನಗೊಳಿಸಲಾಗುತ್ತದೆ. ಈ ಎಲ್ಲಾ ಸಂಸ್ಥೆಗಳು ಅವು ಅನುಷ್ಠಾನ ಮಾಡುವ ಕಾಮಗಾರಿಗಳ ವಿವರಗಳನ್ನು ತಮ್ಮ ಹಂತದಲ್ಲಿಯೇ ನೇರವಾಗಿ ತಂತ್ರಾಂಶದಲ್ಲಿ ಅಳವಡಿಸಲು ಹಾಗೂ ಮೇಲ್ವೀಚಾರಣೆಯನ್ನು ಆನ್‌ಲೈನ್‌ನಲ್ಲಿ ಮಾಡಲು ಅನುಕೂಲವಾಗುವಂತೆ ತಂತ್ರಾಂಶವನ್ನು ರೂಪಿಸಲಾಗಿದೆ.

**2. ಕಾಮಗಾರಿಗಳ ಎಲ್ಲಾ ಹಂತದ ಮಾಹಿತಿಯ ಅಳವಡಿಕೆ:** ಕಾಮಗಾರಿ ಆರಂಭವಾದಾಗಿನಿಂದ ಬಿಲ್ಲು ಪಾವತಿವರೆಗಿನ ಎಲ್ಲಾ ಹಂತಗಳನ್ನು ತಂತ್ರಾಂಶದಲ್ಲಿ ಅಳವಡಿಸಲು ಕ್ರಮವಹಿಸಲಾಗಿದೆ. ಕಾಮಗಾರಿಗಳ ಕ್ರಿಯಾಯೋಜನೆ, ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ, ವಿವಿಧ ಹಂತದ ಛಾಯಾಚಿತ್ರಗಳು, ಅಳತೆ ಪುಸ್ತಕದ ವಿವರಗಳು ಹಾಗೂ ಬಿಲ್ಲು ಪಾವತಿಯ ವಿವರಗಳನ್ನು ಅಳವಡಿಸಲಾಗುತ್ತಿದೆ. ಅಕ್ಟೋಬರ್ 3, 2013 ರಿಂದ ತಂತ್ರಾಂಶದಿಂದ ಸೃಜಿಸಿದ ಬಿಲ್ಲು ಪಾವತಿ ಆದೇಶವಿಲ್ಲದೆ ಬಿಲ್ಲು ಪಾವತಿ ಮಾಡುವುದನ್ನು ನಿಷೇಧಿಸಲಾಗಿದೆ.

**3. ಅಕ್ಷಾಂಶ ಮತ್ತು ರೇಖಾಂಶದ ಸಂಯೋಜನೆಯ ಛಾಯಾಚಿತ್ರಗಳು:** ಕಾಮಗಾರಿಯ ವಿವಿಧ ಹಂತದ ಛಾಯಾಚಿತ್ರಗಳನ್ನು ಅಕ್ಷಾಂಶ ಮತ್ತು ರೇಖಾಂಶದ ಸಂಯೋಜನೆಯೊಂದಿಗೆ ಅಳವಡಿಸಬಹುದಾಗಿದೆ. ಇದರಿಂದ ಕಾಮಗಾರಿಯನ್ನು ಯಾವ ಸ್ಥಳದಲ್ಲಿ ಅನುಷ್ಠಾನ ಮಾಡಲಾಗಿದೆ ಎಂಬುದನ್ನು ಗೂಗಲ್ ಮ್ಯಾಪ್‌ನಲ್ಲಿ ಪರಿಶೀಲಿಸಬಹುದಾಗಿದೆ.

**4. ಅನುಷ್ಠಾನಾಧಿಕಾರಿಗಳಿಗೆ ಪ್ರತ್ಯೇಕ ಬಳಕೆ ಸಂಕೇತ (ಯೂಸರ್ ನೇಮ್) ಮತ್ತು (ಪಾಸ್‌ವರ್ಡ್)** : ಈ ಮೇಲಿನಂತೆ ದತ್ತಾಂಶ ಅಳವಡಿಕೆ, ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಆನ್‌ಲೈನ್ ಮೂಲಕ ಕೈಗೊಳ್ಳಲು ಅವಕಾಶ ಕಲ್ಪಿಸಿರುವುದರಿಂದ ದತ್ತಾಂಶ ಅಳವಡಿಕೆಯಲ್ಲಿ ಉತ್ತರದಾಯಿತ್ವ ಮತ್ತು ಹೊಣೆಗಾರಿಕೆಯನ್ನು ತರಲು ಆಯಾ ಅನುಷ್ಠಾನಾಧಿಕಾರಿಗಳಿಗೆ ಬಳಕೆ ಸಂಕೇತ (ಯೂಸರ್ ನೇಮ್) ಮತ್ತು (ಪಾಸ್‌ವರ್ಡ್)ಗಳನ್ನು ಮೊಬೈಲ್ ಮೂಲಕ ಕಳುಹಿಸಲಾಗುತ್ತದೆ ಹಾಗೂ ತಂತ್ರಾಂಶದಲ್ಲಿ ಲಾಗಿನ್ ಆಗಲು ಬಯೊಮೆಟ್ರಿಕ್‌ನ್ನು ಅನುಷ್ಠಾನಗೊಳಿಸಲಾಗಿದೆ.

**5. ಕಾಮಗಾರಿಗಳ ಛಾಯಾಚಿತ್ರ ಮತ್ತು ಇತರೆ ದಾಖಲೆಗಳನ್ನು ಆಡಿಟ್ ಮಾಡುವ ಪ್ರಕ್ರಿಯೆ:** ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಾಮಗಾರಿಯ ಸರಿಯಾದ ಛಾಯಾಚಿತ್ರ ಮತ್ತು ಇತರೆ ದಾಖಲೆಗಳನ್ನು ಆರೋಹಿಸಿರುವ ಬಗ್ಗೆ ಪರಿಶೀಲನೆ ಮಾಡಲು ಪ್ರತಿ ಜಿಲ್ಲಾ ಪಂಚಾಯತ್‌ನಲ್ಲಿ ಅಧಿಕಾರಿ/ಸಿಬ್ಬಂದಿಗಳ ತಂಡ ರಚಿಸಿ, ಸದರಿಯವರು ಛಾಯಾಚಿತ್ರ ಮತ್ತು ಸೂಕ್ತ ದಾಖಲೆಗಳ ಆರೋಹಣವನ್ನು ಪರಿಶೀಲಿಸಿದ ನಂತರವೇ ಪಾವತಿ ಆದೇಶ ಸೃಜನೆಗೆ ಅವಕಾಶ ಕಲ್ಪಿಸುವಂತಹ ವ್ಯವಸ್ಥೆಯು ಜಾರಿಯಲ್ಲಿದೆ.

**6. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಅನುಮೋದನೆಗೊಂಡ ಕ್ರಿಯಾ ಯೋಜನೆಯಲ್ಲಿರುವ** ಯೋಜನೆಗಳ ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ ಪಾವತಿ ಆದೇಶವನ್ನು ಸೃಜಿಸಿದ್ದಲ್ಲಿ ಮಾತ್ರ ಹಣ ಪಾವತಿಯನ್ನು ಕಡ್ಡಾಯವಾಗಿ ಮಾಡುವಂತೆ ಖಜಾನೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ನಿರ್ದೇಶನವನ್ನು ನೀಡಲಾಗಿದೆ.

**7. ಸಾರ್ವಜನಿಕ ವೀಕ್ಷಣೆ:** ತಂತ್ರಾಂಶದ ಪ್ರಮುಖ ಆಯಾಮವಿರುವುದು

ಅದರ ಸಾರ್ವಜನಿಕ ವೀಕ್ಷಣೆ ಮತ್ತು ಪರಿವೀಕ್ಷಣೆಯಲ್ಲಿ ತಂತ್ರಾಂಶದಲ್ಲಿ ಅಳವಡಿಸಿದ ಎಲ್ಲಾ ಕಾಮಗಾರಿಗಳ ಎಲ್ಲಾ ಹಂತದ ವಿವರಗಳು ತಕ್ಷಣಕ್ಕೆ ಸಾರ್ವಜನಿಕರಿಗೆ ಪ್ರತ್ಯೇಕ ವೆಬ್‌ಸೈಟ್ www.gsk.kar.nic.in ನಲ್ಲಿ ಲಭ್ಯವಾಗುವಂತೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ.

**8. ಸಾರ್ವಜನಿಕ ಸಹಭಾಗಿತ್ವ :** ಕಾಮಗಾರಿಯ ಎಲ್ಲಾ ಮಾಹಿತಿಗಳನ್ನು ಆನ್‌ಲೈನ್‌ನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ನೀಡುವುದರ ಜೊತೆಗೆ ಕಾಮಗಾರಿ ಕುರಿತಾಗಿ ಅವರ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಕಾಮಗಾರಿಯ ನೈಜ ಅನುಷ್ಠಾನ, ಅವುಗಳ ಗುಣಮಟ್ಟ ಮತ್ತು ಉಪಯೋಗದ ಕುರಿತಾದ ಚಿತ್ರಣ ಮೇಲಾಧಿಕಾರಿಗಳು ಮತ್ತು ಸಾರ್ವಜನಿಕರಿಗೆ ಲಭ್ಯವಾಗುತ್ತದೆ.

**9. ಪ್ರಾದೇಶಿಕ ಭಾಷೆಯ ಅನುಕೂಲತೆ:** ಮಾಹಿತಿಯ ಅಳವಡಿಕೆ ಮತ್ತು ಅದರ ವೀಕ್ಷಣೆಯನ್ನು ನಾಡಭಾಷೆ ಕನ್ನಡದಲ್ಲಿ ಲಭ್ಯವಾಗುವಂತೆ ರೂಪಿಸಲಾಗಿದೆ. ಹೀಗಾಗಿ ಇದು ಅತ್ಯಂತ ಸರಳ ಮತ್ತು ಬಳಕೆದಾರರ ಸ್ನೇಹಿಯಾಗಿರುತ್ತದೆ.

**10. ಅನುದಾನ ಬಿಡುಗಡೆ ನಿಯಂತ್ರಣ:** ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕುಗಳ ವಿವಿಧ ನಿಯಂತ್ರಣಾಧಿಕಾರಿಗಳಿಂದ ಮಾಡಲಾಗುವ ಅನುದಾನ ಬಿಡುಗಡೆಯನ್ನು ಆನ್‌ಲೈನ್ ಮೂಲಕ ನಿಯಂತ್ರಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.

**11. ಅನುಷ್ಠಾನಗೊಂಡ ಕಾಮಗಾರಿಗಳ ಸಮರ್ಥ ವಿಶ್ಲೇಷಣೆ:** ಮಾಹಿತಿಯ ಅಳವಡಿಕೆಯೊಂದಿಗೆ ಹಲವಾರು ಅಂಶಗಳನ್ನು ಸ್ವಯಂ ಆಗಿ ಸೃಜನೆಯಾಗುವಂತೆ ಅಂತರ್ಗತ ವ್ಯವಸ್ಥೆ ಮಾಡಲಾಗಿದೆ. ಇದರಿಂದಾಗಿ ಕಾಮಗಾರಿಗಳ ಸಮರ್ಥ ವಿಶ್ಲೇಷಣೆ ಸಾಧ್ಯವಾಗುತ್ತದೆ.

**12. ಅಗತ್ಯ ಯೋಜನೆ ರೂಪಿಸಲು ಸಹಾಯಕಾರಿ:** ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ಎಲ್ಲಾ ಕಾಮಗಾರಿಗಳ ಮಾಹಿತಿಯು ಅವುಗಳ ಇತ್ತೀಚಿನ ಸ್ಥಿತಿಗತಿಗಳೊಂದಿಗೆ ಅಂತರ್ಜಾಲದಲ್ಲಿ ಲಭ್ಯವಾಗುವುದರಿಂದ ಮತ್ತು ಅವುಗಳ ತಿದ್ದುಪಡಿ, ಅನುಕೂಲಕರ




ಮಾರ್ಪಾಡಿನಲ್ಲಿ ಯಾವುದೇ ಹಸ್ತಕ್ಷೇಪ ಸಾಧ್ಯವಿಲ್ಲದಿರುವುದರಿಂದ ಮುಂಬರುವ ಯೋಜನೆಗಳ ರೂಪಣೆಗೆ ಮೇಲಾಧಿಕಾರಿಗಳಿಗೆ ಸಹಾಯಕವಾಗುತ್ತದೆ.

**13. 2013–14 ನೇ ಸಾಲಿನಿಂದ 2016–17ನೇ ಸಾಲಿನವರೆಗೆ ಸುಮಾರು 852792 ಗಾಂಧಿಸಾಕ್ಷಿ ಕಾಯಕದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಅಳವಡಿಸಲಾಗಿದೆ.**

| ವರ್ಷ | ಕಾಮಗಾರಿಗಳ ಸಂಖ್ಯೆ |
|---|---|
| 2013–14 | 204126 |
| 2014–15 | 295478 |
| 2015–16 | 171936 |
| 2016–17 | 181252 |
| **ಒಟ್ಟು** | **852792** |

**3. ಗಾಂಧಿ ಸಾಕ್ಷಿ ಕಾಯಕ ಮೊಬೈಲ್ ಆಪ್**

ಅಭಿವೃದ್ಧಿ ಕಾಮಗಾರಿಗಳ ಜಿಪಿಎಸ್ ಕೋ–ಆರ್ಡಿನೇಟ್ಸ್ ಮತ್ತು ವಿವಿಧ ಹಂತಗಳ ಛಾಯಾಚಿತ್ರಗಳನ್ನು ಸೆರೆಹಿಡಿಯಲು ಗಾಂಧಿ ಸಾಕ್ಷಿ ಕಾಯಕ ಮೊಬೈಲ್ ಆ್ಯಪ್‌ನ ಬಳಕೆಯನ್ನು ದಿ: 02.10.2016 ರಿಂದ ಕಡ್ಡಾಯಗೊಳಿಸಲಾಗಿದೆ.

ಈ ಮೇಲಿನ ತಂತ್ರಾಂಶಗಳಲ್ಲದೇ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯೂ ಇನ್ನಷ್ಟು ಇ–ಆಡಳಿತ ಸಾಧನಗಳನ್ನು ಪರಿಚಯಿಸಿದ್ದು, ಅವುಗಳ ಮಾಹಿತಿ ಈ ಮುಂದಿನಂತಿವೆ:

**ಇ–ಪಾವತಿ**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಗ್ರಾಮ ಪಂಚಾಯತಿಗಳಲ್ಲಿ ಕರ ವಸೂಲಾತಿ ಮಾಡಲು ಆ್ಯನ್‌ಡ್ರಾಯ್ಡ್ ಬೇಸ್ಡ್ ಅನುಕೂಲವಾಗುವಂತೆ ಇ–ಪಾವತಿ ಮೊಬೈಲ್ ಅಪ್ಲಿಕೇಷನ್‌ನ್ನು ದಿನಾಂಕ : 02.10.2016 ರಿಂದ ಅನುಷ್ಠಾನಗೊಳಿಸಲಾಗಿದೆ.

**ಪಂಚಮಿತ್ರ**

ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಪ್ರತ್ಯೇಕವಾಗಿ ವೆಬ್ ಪೋರ್ಟಲ್‌ನ್ನು ಪಂಚಮಿತ್ರ ತಂತ್ರಾಂಶದ ಮೂಲಕ ಸೃಜಿಸಲಾಗಿದೆ. ಈ ವೆಬ್ ಪೋರ್ಟಲ್‌ನಲ್ಲಿ ಗ್ರಾಮ ಪಂಚಾಯತಿ ಗೆ ಸಂಬಂಧಿಸಿದ ಆಸ್ತಿಗಳ ವಿವರಗಳು, ಸಾಮಾನ್ಯ ಮಾಹಿತಿ, ಆಸ್ತಿ ತೆರಿಗೆಗಳ ವಿವರಗಳು, ಬ್ಯಾಲೆನ್ಸ್ ಶೀಟ್, ಹೊಣೆಗಾರಿಕೆಗಳ ವಿವರಗಳು, ಫಲಾನುಭಾವಿಗಳು, ವೋಚರ್ ವರದಿಗಳು, ಸದಸ್ಯರ ಮತ್ತು ಅಧಿಕಾರಿಗಳ ಮಾಹಿತಿಗಳು ಲಭ್ಯವಿದೆ.

**ಜಿಲ್ಲಾ ಪಂಚಾಯತಿ ಪೋರ್ಟಲ್**

ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಪ್ರತ್ಯೇಕವಾಗಿ ವೆಬ್ ಪೋರ್ಟಲ್‌ನ್ನು ಸೃಜಿಸಲಾಗಿದೆ. ಈ ಎಲ್ಲಾ ವೆಬ್ ಪೋರ್ಟಲ್‌ನಲ್ಲಿ ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದ ಸುತ್ತೋಲೆಗಳ, ಸಭಾ ನಡವಳಿಕೆಗಳ, ಪ್ರಗತಿ ಕಾಮಗಾರಿಗಳ, ಆಯವ್ಯಯ ಪಟ್ಟಿ, ಕ್ರಿಯಾ ಯೋಜನೆ, ಪ್ರಗತಿ ವಿವರಗಳು, ಟೆಂಡರ್, ಸದಸ್ಯರ ಮತ್ತು ಅಧಿಕಾರಿಗಳ ಮಾಹಿತಿ ದೊರಕುತ್ತದೆ.

**ತಾಲ್ಲೂಕು ಪಂಚಾಯತಿ ಪೋರ್ಟಲ್**

ಎಲ್ಲಾ ತಾಲ್ಲೂಕು ಪಂಚಾಯತಿಗಳಿಗೆ ಪ್ರತ್ಯೇಕವಾಗಿ ವೆಬ್ ಪೋರ್ಟಲ್‌ನ್ನು ಸೃಜಿಸಲಾಗಿದೆ. ಈ ಎಲ್ಲಾ ವೆಬ್ ಪೋರ್ಟಲ್‌ನಲ್ಲಿ ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದ ಸುತ್ತೋಲೆಗಳ, ಸಭಾ ನಡವಳಿಕೆಗಳ, ಪ್ರಗತಿ ಕಾಮಗಾರಿಗಳ, ಆಯವ್ಯಯ ಪಟ್ಟಿ, ಕ್ರಿಯಾ ಯೋಜನೆ, ಪ್ರಗತಿ ವಿವರಗಳು, ಟೆಂಡರ್, ಸದಸ್ಯರ ಮತ್ತು ಅಧಿಕಾರಿಗಳ ಮಾಹಿತಿ ದೊರುಕುತ್ತದೆ.

**ಪಂಚಾಯತ್ 100 – ಬಾಪೂಜಿ ಸೇವಾ ಕೇಂದ್ರ**

ಗ್ರಾಮೀಣ ಜನತೆಗೆ ತಮ್ಮ ಸಾಮಾಜಿಕ, ಶೈಕ್ಷಣಿಕ, ವಾಣಿಜ್ಯ ಹಾಗೂ ಕೃಷಿ ಚಟುವಟಿಕೆಗಳಿಗಾಗಿ ಅವಶ್ಯವಿರುವ ವಿವಿಧ ಇಲಾಖೆಗಳ ದಾಖಲೆಗಳನ್ನು ತ್ವರಿತ ಗತಿಯಲ್ಲಿ ಪಡೆದುಕೊಳ್ಳುವ ಸಲುವಾಗಿ ಕಂದಾಯ ಇಲಾಖೆಯೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯನ್ನು ಒಗ್ಗೂಡಿಸಿ ಸಾರ್ವಜನಿಕ ಸೇವೆಗಳನ್ನು ಗ್ರಾಮ ಪಂಚಾಯತಿಗಳಲ್ಲಿಯೇ

ಆನ್‌ಲೈನ್ ಮುಖಾಂತರ ಒದಗಿಸುವ ಮೂಲ ಉದ್ದೇಶದಿಂದ ಗ್ರಾಮ ಪಂಚಾಯತಿಗಳಲ್ಲಿ "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳನ್ನು ಸ್ಥಾಪಿಸಲಾಗಿದೆ. ಈ ಸೇವಾ ಕೇಂದ್ರಗಳಲ್ಲಿ ಗ್ರಾಅಪ ಇಲಾಖೆಯ 43 ಸೇವೆಗಳು, ಕಂದಾಯ ಇಲಾಖೆಯ 40 ಸೇವೆಗಳು ಹಾಗೂ ಸರ್ಕಾರದ ಅಂಗ ಸಂಸ್ಥೆಯ ವಿವಿಧ ಇಲಾಖೆಗಳ 17 ಸೇವೆಗಳು ಸೇರಿದಂತೆ ಒಟ್ಟು 100 ಸೇವೆಗಳು ಸಾರ್ವಜನಿಕರಿಗೆ ಲಭ್ಯವಾಗಲಿವೆ. ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿ ಗ್ರಾಮ ಮಟ್ಟದಲ್ಲೇ ಸಕಾಲದಲ್ಲೇ ಸೇವೆಗಳು ಲಭ್ಯವಾಗುವಂತೆ ಒಂದೇ ಸೂರಿನಡಿ ಸೇವೆಗಳನ್ನು ಒದಗಿಸಲು "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳನ್ನು ಸ್ಥಾಪಿಸಿರುವುದರಿಂದ ಸಾರ್ವಜನಿಕರು ತಾಲ್ಲೂಕು ಕೇಂದ್ರಕ್ಕೆ ಅಲೆಯುವ ಬದಲು ಆನ್‌ಲೈನ್ ಮುಖಾಂತರ ವಿವಿಧ ಸೇವೆಗಳನ್ನು ತ್ವರಿತವಾಗಿ ಪಡೆಯಬಹುದಾಗಿದೆ.

### ಗ್ರಾಮ ಪಂಚಾಯತಿಗಳ ಆಯ್ಕೆ

ರಾಜ್ಯದಲ್ಲಿನ ಒಟ್ಟು 6022 ಗ್ರಾಮ ಪಂಚಾಯತಿಗಳ ಪೈಕಿ ಉತ್ತಮ ಬ್ರಾಡ್‌ಬ್ಯಾಂಡ್ ಸಂಪರ್ಕ ಹೊಂದಿರುವ, ನಾಡಕಛೇರಿ ಕೇಂದ್ರ ಇಲ್ಲದೇ ಇರುವ 2000 ಗ್ರಾಮ ಪಂಚಾಯತಿಗಳನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಿದ್ದು, ಜುಲೈ 01, 2016 ರಂದು ಹಾವೇರಿ ಜಿಲ್ಲೆಯ



**ಮುಖ್ಯ ಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಬಾಪೂಜಿ ಸೇವಾ ಕೇಂದ್ರವನ್ನು ಉದ್ಘಾಟಿಸುತ್ತಿರುವುದು.**

ರಾಣೆಬೆನ್ನೂರು ತಾಲ್ಲೂಕಿನ ಕಾಕೋಳ ಗ್ರಾಮದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಗ್ರಾಅಪ ಸಚಿವರು "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳಿಗೆ ವಿದ್ಯುಕ್ತವಾಗಿ ಚಾಲನೆ ನೀಡಿದರು. ಪ್ರಸ್ತುತ ರಾಜ್ಯದಲ್ಲಿ ಒಟ್ಟು 5141 ಗ್ರಾಮ ಪಂಚಾಯತಿಗಳಲ್ಲಿ "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳು ಕಾರ್ಯನಿರ್ವಹಿಸುತ್ತಿವೆ.


### ಅನುಷ್ಠಾನ / ಕಾರ್ಯವಿಧಾನ


ಗ್ರಾಮ ಪಂಚಾಯತಿಯ ಪಂಚತಂತ್ರ ತಂತ್ರಾಂಶದೊಂದಿಗೆ ನಾಡಕಛೇರಿ ತಂತ್ರಾಂಶ ಮತ್ತು ಭೂಮಿ ತಂತ್ರಾಂಶವನ್ನು ಸಮಗ್ರೀಕರಣ ಮಾಡಲಾಗಿದೆ. ಇದರಿಂದಾಗಿ ಅಟಲ್‌ಜಿ ಜನಸ್ನೇಹಿ ಕೇಂದ್ರದಡಿ ನಾಡಕಛೇರಿಯ ಮುಖಾಂತರ ವಿತರಿಸುತ್ತಿರುವ ಕಂದಾಯ ಇಲಾಖೆಯ ಸೇವೆಗಳನ್ನು ಗ್ರಾಮ ಪಂಚಾಯತಿಗಳ ಪಂಚತಂತ್ರ ತಂತ್ರಾಂಶದಲ್ಲಿ ಲಭ್ಯವಾಗುವಂತೆ ವ್ಯವಸ್ಥೆಗೊಳಿಸಲಾಗಿದೆ. ಸಾರ್ವಜನಿಕರು ತಮ್ಮ ಕೋರಿಕೆಯನ್ನು ಗ್ರಾಮ ಪಂಚಾಯತಿಗಳಲ್ಲಿ ಸಲ್ಲಿಸಬಹುದು. ಈ ಕೋರಿಕೆಯನ್ನು ನಾಡ ಕಛೇರಿಯ ತಂತ್ರಾಂಶಕ್ಕೆ ವರ್ಗಾಯಿಸಲಾಗುವುದು. ಸದರಿ ಕೋರಿಕೆಯನ್ನು ನಾಡ ಕಛೇರಿಯು ಪರಿಶೀಲಿಸಿ, ದೃಢೀಕರಿಸಿದ ದಾಖಲೆಯನ್ನು ಪಂಚತಂತ್ರ ತಂತ್ರಾಂಶಕ್ಕೆ ವರ್ಗಾಯಿಸುತ್ತಾರೆ. ತದನಂತರ ಕೋರಿದ ದಾಖಲೆಯನ್ನು "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳ ಮೂಲಕ ಸಾರ್ವಜನಿಕರಿಗೆ ವಿತರಿಸುವ ವ್ಯವಸ್ಥೆಯನ್ನು ರೂಪುಗೊಳಿಸಲಾಗಿದೆ. ಗ್ರಾಅಪ ಇಲಾಖೆಯ ಸೇವೆಗಳಿಗೆ ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯನ್ನು ಗ್ರಾಮ ಪಂಚಾಯತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಂಡು ಅರ್ಜಿಯ ವಸ್ತುಸ್ಥಿತಿಯನ್ನು ಅರ್ಜಿದಾರರಿಗೆ ಎಸ್.ಎಂ.ಎಸ್ ಮುಖಾಂತರ ತಿಳಿಸಲಾಗುತ್ತದೆ ಹಾಗೂ ಕೋರಿದ ದಾಖಲೆಯನ್ನು ಆನ್‌ಲೈನ್‌ನಲ್ಲಿ ಒದಗಿಸಲಾಗುವುದು.

### ಫಲಶೃತಿ

* "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಯೋಜನೆಯು ನಾಗರೀಕ ಕೇಂದ್ರಿತ ಸೇವೆಗಳ ನೀಡುವಿಕೆಯಲ್ಲಿ ಒಂದು ವಿನೂತನ ಯೋಜನೆಯಾಗಿರುತ್ತದೆ.
* ಗ್ರಾಮೀಣ ಜನರ ಸಬಲೀಕರಣಕ್ಕೆ ಹಾಗೂ ತಂತ್ರಜ್ಞಾನದ ಸದುಪಯೋಗಕ್ಕೆ "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಯೋಜನೆಯು ಕೈಗನ್ನಡಿಯಂತಿದೆ.
* "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳಲ್ಲಿ ಗ್ರಾಅಪ ಇಲಾಖೆಯ ಸೇವೆಗಳ ಜೊತೆಗೆ ಕಂದಾಯ ಇಲಾಖೆಯ ಪಹಣಿ ಪತ್ರ ಒಳಗೊಂಡಂತೆ ಇತರೆ ಸೇವೆಗಳು ಸೇರಿದಂತೆ ಒಟ್ಟು 100 ಸೇವೆಗಳನ್ನು ಒಂದೇ ಸೂರಿನಡಿ ಒದಗಿಸಲಾಗುತ್ತಿರುವುದರಿಂದ ಈ ಕೇಂದ್ರಗಳು ಸಾರ್ವಜನಿಕರಿಗೆ ಏಕಗವಾಕ್ಷಿ ಹಾಗೂ ಜನಸ್ನೇಹಿ ಕೇಂದ್ರಗಳಾಗಿರುತ್ತವೆ.
* ಜುಲೈ 01, 2016 ರಿಂದ ಚಾಲನೆಗೊಂಡಿರುವ "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳಲ್ಲಿ ಈವರೆವಿಗೆ;
    - ಗ್ರಾಅಪ ಇಲಾಖೆಯ ಸೇವೆಗಳಿಗೆ ಒಟ್ಟು 3062 ಅರ್ಜಿಗಳು ಸ್ವೀಕೃತವಾಗಿವೆ.
    - ಕಂದಾಯ ಇಲಾಖೆಯ ಸೇವೆಗಳಿಗೆ ಒಟ್ಟು 300654 ಅರ್ಜಿಗಳು ಸ್ವೀಕೃತವಾಗಿವೆ.
    - ಈವರೆಗೆ ವಿತರಿಸಲಾಗಿರುವ ಪಹಣಿ ಪತ್ರ: 2216525

ಈ ಸಾಧನೆಯು "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳ ಮಹತ್ವವನ್ನು ಎತ್ತಿಹಿಡಿಯುತ್ತದೆ.




ಸದರಿ ಪ್ರಶಸ್ತಿಯು ಸತತವಾಗಿ ಕರ್ನಾಟಕ ಸರ್ಕಾರಕ್ಕೆ ಎರಡನೇ ಬಾರಿ ದೊರಕುತ್ತಿದ್ದು, ದಿನಾಂಕ: 24.04.2017 ಪಂಚಾಯತ್ ರಾಜ್ ದಿವಸದಂದು ಈ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ. ಈ ಪುರಸ್ಕಾರವು ಮುಂದಿನ ದಿನಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಇನ್ನಷ್ಟು ಸಶಕ್ತೀಕರಣಗೊಳಿಸಲು ಉತ್ತೇಜಿಸಿದೆ. ❑

ಹಂಚಿಕೆ

# ಮನ್ ಕೀ ಬಾತ್




**ಪ್ರಧಾನ ಮಂತ್ರಿ**
**ಶ್ರೀ ನರೇಂದ್ರ ಮೋದಿಯವರು**
**ದಿನಾಂಕ**
**30-4-2017 ರಂದು**
**ಮಾಡಿದ**
**'ಮನ್ ಕಿ ಬಾತ್'**
**31 ನೇ ಭಾಷಣದ**
**ಕನ್ನಡ ಅವತರಣಿಕೆ.**

ನನ್ನ ಪ್ರೀತಿಯ ದೇಶ ಬಾಂಧವರೇ, ನಮಸ್ಕಾರ. ಪ್ರತಿಯೊಂದು ಮನದಾಳದ ಮಾತಿಗಿಂತಲೂ ಮೊದಲು, ದೇಶದ ಮೂಲೆ ಮೂಲೆಯಿಂದ, ಎಲ್ಲ ವಯೋಮಾನದವರಿಂದ ಮನದಾಳದ ಮಾತು ಕುರಿತು ಸಾಕಷ್ಟು ಸಲಹೆಗಳು ಬರುತ್ತವೆ. ಆಕಾಶವಾಣಿಗೆ ಬರುತ್ತವೆ, ನರೇಂದ್ರ ಮೋದಿ ಆಪ್‌ಗೆ ಬರುತ್ತವೆ, ಮೈ ಗವ್ ಮಾಧ್ಯಮದ ಮೂಲಕ ಬರುತ್ತವೆ, ಧ್ವನಿಮುದ್ರಿತ ಸಂದೇಶಗಳು ಬರುತ್ತವೆ. ನಾನು ಇದಕ್ಕಾಗಿ ಸ್ವಲ್ಪ ಸಮಯ ಮೀಸಲಿಟ್ಟು ನೋಡಿದಾಗ ತುಂಬಾ ಒಳ್ಳೇ ಅನುಭವ ಆಗುತ್ತದೆ. ಎಷ್ಟೊಂದು ವಿವಿಧತೆಯಿಂದ ಕೂಡಿದ ಮಾಹಿತಿ ಲಭ್ಯವಾಗುತ್ತದೆ. ದೇಶದ ಮೂಲೆ ಮೂಲೆಯಲ್ಲೂ ಶಕ್ತಿಯ ಕಣಜವಿದೆ. ಸಾಧಕರಂತೆ ಸಮಾಜದಲ್ಲಿ ಗುಪ್ತವಾಗಿ ಕೆಲಸ ಮಾಡುವವರು ಲೆಕ್ಕವಿಲ್ಲದಷ್ಟು ಕೆಲಸ ಮಾಡಿದ್ದಾರೆ. ಇನ್ನೊಂದೆಡೆ ಬಹುಶಃ ಸರ್ಕಾರದ ದೃಷ್ಟಿಗೂ ಬೀಳದ ಸಮಸ್ಯೆಗಳ ಭಂಡಾರವೇ ಕಾಣಿಸುತ್ತದೆ. ಬಹುಶಃ ವ್ಯವಸ್ಥೆಯೂ ಇದಕ್ಕೆ ಒಗ್ಗಿಹೋಗಿದೆ. ಜನರೂ ಒಗ್ಗಿಹೋಗಿರಬಹುದು. ಅಲ್ಲದೆ ಮಕ್ಕಳ ಜಿಜ್ಞಾಸೆ, ಯುವಕರ ಮಹತ್ವಾಕಾಂಕ್ಷೆ, ಹಿರಿಯರ ಅನುಭವದ ಸಾರ, ಭಿನ್ನ ಭಿನ್ನವಾದ ವಿಷಯಗಳು ಕಂಡುಬರುತ್ತಿವೆ. ಪ್ರತಿ ಬಾರಿಯೂ ಮನದಾಳದ ಮಾತಿಗೆ ಎಷ್ಟು ಸಲಹೆ ಸೂಚನೆಗಳು ಬರುತ್ತವೆಯೋ ಸರ್ಕಾರದಲ್ಲಿ ಆ ಕುರಿತು ವಿಸ್ತೃತವಾಗಿ ವಿಶ್ಲೇಷಣೆ ನಡೆಯುತ್ತದೆ. ಸಲಹೆಗಳು ಯಾವ ತರಹದ್ದು, ದೂರುಗಳು ಎಂಥಹವು, ಜನರ ಅನುಭವವೇನು? ಸಾಮಾನ್ಯವಾಗಿ ಬೇರೆಯವರಿಗೆ ಸಲಹೆ ನೀಡುವುದು ಮನುಷ್ಯನ ಸ್ವಭಾವ ಎಂಬುದನ್ನು ಗಮನಿಸಲಾಗಿದೆ. ಟ್ರೇನ್‌ನಲ್ಲಿ, ಬಸ್ಸಿನಲ್ಲಿ ಹೋಗುವಾಗ ಮತ್ತು ಯಾರಿಗಾದರೂ ಕೆಮ್ಮು ಬಂದಿದೆ ಅಂದ್ರೆ ಸಾಕು ಬೇರೊಬ್ಬ ಬಂದು ಹೀಗೆ ಮಾಡಿ ಎಂದು ಹೇಳುತ್ತಾನೆ. ಆರಂಭದಲ್ಲಿ ಮನದಾಳದ ಮಾತಿಗೆ ಸಲಹೆಗಳು ಸೂಚನೆಗಳು ಬಂದಾಗ, ಸಲಹೆಗಳು ಶಬ್ದದ ರೂಪದಲ್ಲಿ ಕೇಳಲು ಸಿಕ್ಕಾಗ, ಓದಲು ಸಿಕ್ಕಾಗ ನಮ್ಮ ತಂಡದವರು ಬಹಳಷ್ಟು ಜನರಿಗೆ ಇದೊಂದು ಅಭ್ಯಾಸವೇ ಎಂದುಕೊಂಡಿದ್ದೆವು, ಆದರೆ ಸೂಕ್ಷ್ಮವಾಗಿ ಗಮನಿಸುವ ಪ್ರಯತ್ನ ಮಾಡಿದಾಗ ನಿಜವಾಗಿಯೂ ನಾನು ಭಾವನಾತ್ಮಕತೆಯ ಉತ್ತುಂಗಕ್ಕೇರಿಹೋದೆ. ಸಲಹೆ ನೀಡುವವರು, ನನ್ನವರೆಗೆ ತಲುಪುವ ಪ್ರಯತ್ನ ಮಾಡುವವರು ಎಂಥವರು ಅಂದ್ರೆ ಖಂಡಿತ ಅವರು ಜೀವನದಲ್ಲಿ ಏನಾದ್ರೂ ಮಾಡಿಯೇ ಮಾಡುತ್ತಾರೆ. ಏನಾದ್ರೂ ಒಳ್ಳೇದಾಗುವುದಾದರೆ ಅದಕ್ಕಾಗಿ ತಮ್ಮ ಜಾಣ್ಮೆ, ಶಕ್ತಿ, ಸಾಮರ್ಥ್ಯವನ್ನು ಪರಿಸ್ಥಿತಿಗನುಸಾರ ಬಳಸಿ ಪ್ರಯತ್ನಿಸುತ್ತಾರೆ. ಈ ವಿಷಯಗಳು ನನ್ನ ಅರಿವಿಗೆ ಬಂದಾಗ ಇವು ಸಾಮಾನ್ಯವಾದ ಸಲಹೆಗಳಲ್ಲ ಎಂದೆನಿಸಿತು. ಇವು ಅನುಭವದ ಸಾರವಾಗಿವೆ ಎನಿಸಿತು. ಕೆಲವರು ಸಲಹೆಗಳನ್ನು ಏಕೆ ನೀಡುತ್ತಾರೆಂದರೆ, ಅವರದೇ ವಿಚಾರಗಳು ಅವರು ಎಲ್ಲಿ ಕೆಲಸ ಮಾಡುತ್ತಿದ್ದಾರೋ ಅಲ್ಲಿಯ ವಿಚಾರಗಳನ್ನು ಇನ್ನಷ್ಟು ಜನರು ಕೇಳಿದರೆ ಅದಕ್ಕೆ ಒಂದು ವ್ಯಾಪಕ ರೂಪ ದೊರೆತು ಬಹಳಷ್ಟು ಜನರಿಗೆ ಅದರ ಲಾಭವಾಗಬಹುದು ಎಂದು ಯೋಚಿಸುತ್ತಾರೆ. ಅದಕ್ಕಾಗಿಯೇ ಮನದಾಳದ ಮಾತಿನಲ್ಲಿ ಈ ವಿಷಯ ಪ್ರಸ್ತಾಪವಾದರೆ ಹೇಗೆ ಎಂಬುದು ಅವರ ಸಹಜ ಆಸೆ ಆಗಿರುತ್ತದೆ. ಇವೆಲ್ಲ ಮಾತುಗಳು ನನ್ನ ದೃಷ್ಟಿಯಲ್ಲಿ ಬಹಳ ಸಕಾರಾತ್ಮಕವಾದವು.

ನಾನು ಎಲ್ಲಕ್ಕಿಂತ ಮೊದಲು ಸಮಾಜಕ್ಕಾಗಿ ಏನಾದರೂ ಮಾಡಬೇಕೆಂಬ ತುಡಿತವುಳ್ಳ ಹೆಚ್ಚಿನ ಸಂಖ್ಯೆಯಲ್ಲಿ ಬಂದ, ಕರ್ಮಯೋಗಿಗಳ ಸಲಹೆಗಳಿಗಾಗಿ ನನ್ನ ಕೃತಜ್ಞತೆ ಸಲ್ಲಿಸುತ್ತೇನೆ. ಇಷ್ಟೇ ಅಲ್ಲ, ನಾನು ಯಾವುದೇ ವಿಷಯವನ್ನು ಉಲ್ಲೇಖಿಸಿದಾಗ

* ಕೃಪೆ; ಆಕಾಶವಾಣಿ, ಬೆಂಗಳೂರು

ಎಂತೆಂತಹ ವಿಷಯಗಳು ನೆನಪಿಗೆ ಬರುತ್ತವೆ ಎಂದರೆ ಬಹಳ ಆನಂದವೆನಿಸುತ್ತದೆ. ಕಳೆದ ಬಾರಿ ಮನದಾಳದ ಮಾತಿನಲ್ಲಿ ಕೆಲವರು ಆಹಾರ ವ್ಯರ್ಥವಾಗುತ್ತಿರುವುದರ ಬಗ್ಗೆ ಕಾಳಜಿವಹಿಸಿದ್ದರು, ನನಗೆ ಸಲಹೆ ನೀಡಿದ್ದರು, ನಾನು ಅದನ್ನು ಉಲ್ಲೇಖಿಸಿದ್ದೆ. ನಾನು ಉಲ್ಲೇಖಿಸಿದ ಮೇಲೆ ನರೇಂದ್ರ ಮೋದಿ ಆಪ್‌ನಲ್ಲಿ, ಮೈ ಗೌನಲ್ಲಿ ದೇಶದ ಮೂಲೆ ಮೂಲೆಯಿಂದ ಬಹಳಷ್ಟು ಜನ ಆಹಾರ ವ್ಯರ್ಥವಾಗದಂತೆ ಎಂತೆಂಥ ನವೀನತಮ ಯೋಜನೆಗಳನ್ನು ಎಂತೆಂಥ ಪ್ರಯೋಗಗಳನ್ನು ತಂದರು.

ಇಂದು ನಮ್ಮ ದೇಶದಲ್ಲಿ, ವಿಶೇಷವಾಗಿ ಯುವಜನತೆ, ಎಷ್ಟೋ ವರ್ಷಗಳಿಂದ ಈ ಕೆಲಸದಲ್ಲಿ ತೊಡಗಿದ್ದಾರೆ ಎಂದು ನಾನು ಯೋಚಿಸಿಯೂ ಇರಲಿಲ್ಲ. ಕೆಲ ಸಾಮಾಜಿಕ ಸಂಘಟನೆಗಳು ಎಷ್ಟೋ ವರ್ಷಗಳಿಂದ ಈ ಕೆಲಸದಲ್ಲಿ ತೊಡಗಿವೆ ಎಂದು ನಮಗೆಲ್ಲ ತಿಳಿದಿದೆ. ಆದರೆ, ನಮ್ಮ ದೇಶದ ಯುವಜನತೆ ಇದರಲ್ಲಿ ತೊಡಗಿದೆ ಎಂಬುದು ನನಗೆ ಈಗ ತಿಳಿದುಬಂದಿದೆ. ನನಗೆ ಕೆಲವಾರು ಜನರು ವಿಡಿಯೊಗಳನ್ನು ಕಳಿಸಿದ್ದಾರೆ. ಎಷ್ಟೋ ಸ್ಥಳಗಳಲ್ಲಿ ರೋಟಿ ಬ್ಯಾಂಕ್‌ಗಳನ್ನು ತೆರೆಯಲಾಗಿದೆ. ಜನರು ರೋಟಿ ಬ್ಯಾಂಕ್‌ಗಳಲ್ಲಿ ತಮ್ಮ ಮನೆಯಿಂದ ರೊಟ್ಟಿ, ಪಲ್ಯ ಜಮಾ ಮಾಡುತ್ತಾರೆ. ಅವಶ್ಯಕತೆಯಿರುವವರು ಅಲ್ಲಿಂದ ಪಡೆದುಕೊಳ್ಳುತ್ತಾರೆ. ಕೊಡುವವರಿಗೂ ಸಂತೋಷವಾಗುತ್ತದೆ. ಪಡೆಯುವವರಿಗೂ ಕೀಳರಿಮೆ ಇರುವುದಿಲ್ಲ. ಸಮಾಜದ ಸಹಯೋಗದೊಂದಿಗೆ ಎಂತೆಂಥಹ ಕೆಲಸಗಳು ಆಗುತ್ತವೆ ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ.

ಇಂದು ಏಪ್ರಿಲ್ ತಿಂಗಳು ಮುಗಿಯುತ್ತಿದೆ. ಇದೇ ಕೊನೇ ದಿನವಾಗಿದೆ. ಮೇ 1 ಗುಜರಾತ್ ಮತ್ತು ಮಹಾರಾಷ್ಟ್ರದ ಸ್ಥಾಪನಾ ದಿನವೂ ಆಗಿದೆ. ಈ ಸಂದರ್ಭದಲ್ಲಿ ಎರಡೂ ರಾಜ್ಯದ ನಾಗರಿಕರಿಗೆ ನನ್ನ ಪರವಾಗಿ ಶುಭಾಶಯಗಳನ್ನು ತಿಳಿಸುತ್ತೇನೆ. ಎರಡೂ ರಾಜ್ಯಗಳು ಅಭಿವೃದ್ಧಿಯ ಹೊಸ ಹೊಸ ಘಟ್ಟಗಳನ್ನು ತಲುಪುವ ಸತತ ಪ್ರಯತ್ನ ಮಾಡುತ್ತಲೇ ಇವೆ. ದೇಶದ ಅಭಿವೃದ್ಧಿಯಲ್ಲಿ ತಮ್ಮ ಕಾಣಿಕೆ ಸಲ್ಲಿಸಿವೆ. ಅಲ್ಲದೇ ಎರಡೂ ರಾಜ್ಯಗಳಲ್ಲಿನ ಮಹಾಪುರುಷರ ನಿರಂತರ ಸರಣಿ ಕಾರ್ಯಗಳು, ಸಮಾಜದ ಪ್ರತಿಯೊಂದು



ಕ್ಷೇತ್ರದಲ್ಲೂ, ಅವರ ಜೀವನ ನಮಗೆ ಪ್ರೇರಣಾದಾಯಕವಾಗಿದೆ. ರಾಜ್ಯದ ಸ್ಥಾಪನಾ ದಿನದಂದು ಈ ಮಹಾಪುರುಷರನ್ನು ನೆನೆಯುತ್ತಾ, 2022 ರಲ್ಲಿ, ಸ್ವಾತಂತ್ರ್ಯದ 75 ನೇ ವರ್ಷದಲ್ಲಿ, ನಾವು ನಮ್ಮ ರಾಜ್ಯವನ್ನು, ನಮ್ಮ ದೇಶವನ್ನು, ನಮ್ಮ ಸಮಾಜವನ್ನು, ನಮ್ಮ ನಗರವನ್ನು ನಮ್ಮ ಕುಟುಂಬವನ್ನು ಯಾವ ಹಂತಕ್ಕೆ ಕೊಂಡೊಯ್ಯುತ್ತೇವೆ ಎಂಬ ಬಗ್ಗೆ ಸಂಕಲ್ಪಗೈಯ್ಯಬೇಕಿದೆ. ಆ ಸಂಕಲ್ಪವನ್ನು ಸಾಧಿಸಲು ಯೋಜನೆಯನ್ನು ರೂಪಿಸಬೇಕಿದೆ ಮತ್ತು ಎಲ್ಲ ನಾಗರಿಕರ ಸಹಯೋಗದೊಂದಿಗೆ ಮುನ್ನಡೆಯಬೇಕಿದೆ. ನನ್ನ ಪರವಾಗಿ ಈ ಎರಡೂ ರಾಜ್ಯಗಳಿಗೆ ಅನಂತ ಅನಂತ ಶುಭಾಶಯಗಳು.

ಹವಾಮಾನ ಬದಲಾವಣೆ ಎಂಬುದು ಒಂದು ಕಾಲದಲ್ಲಿ 'ಕಲಿಕಾ ಜಗತ್ತಿನ' ವಿಷಯವಾಗಿತ್ತು, ಸೆಮಿನಾರ್ ವಿಷಯವಾಗಿತ್ತು. ಆದರೆ ಇಂದು ನಮ್ಮ ನಿತ್ಯ ಜೀವನದಲ್ಲಿ ನಾವಿದನ್ನು ಅನುಭವಿಸುತ್ತಿದ್ದೇವೆ ಮತ್ತು ಆಶ್ಚರ್ಯಪಡುತ್ತಿದ್ದೇವೆ. ನಿಸರ್ಗವೂ ತನ್ನ ಆಟದ ನಿಯಮಗಳನ್ನು ಬದಲಿಸಿಬಿಟ್ಟಿದೆ. ನಮ್ಮ ದೇಶದಲ್ಲಿ ಮೇ ಜೂನ್‌ನಲ್ಲಿ ಇರಬೇಕಿದ್ದ ಬಿಸಿಲಿನ ಝಳ ಮಾರ್ಚ್–ಏಪ್ರಿಲ್‌ನಲ್ಲೇ ಅನುಭವಿಸುವ ಪರಿಸ್ಥಿತಿ ಬಂದಿದೆ. ಮನದಾಳದ ಮಾತಿಗಾಗಿ ನಾನು ಜನರಿಂದ ಸಲಹೆಗಳನ್ನು ಪಡೆಯುತ್ತಿದ್ದಾಗ ಬಹಳಷ್ಟು ಜನರು ಈ ಬೇಸಿಗೆ ಸಮಯದಲ್ಲಿ ಏನು ಮಾಡಬೇಕು ಎಂಬ ಬಗ್ಗೆ ಸಲಹೆ ಕಳುಹಿಸಿದ್ದಾರೆ. ಹಾಗೆ ನೋಡಿದರೆ ಎಲ್ಲ ವಿಷಯಗಳೂ ಪ್ರಚಲಿತವಾಗಿವೆ. ಹೊಸದೇನೂ ಅಲ್ಲ, ಆದರೂ ಆಯಾ ಸಮಯಕ್ಕೆ ಅದನ್ನು ನೆನಪಿಸಿಕೊಂಡಾಗ ಬಹಳ ಉಪಯುಕ್ತವಾಗಿರುತ್ತವೆ. ಶ್ರೀಯುತರಾದ ಪ್ರಶಾಂತ ಕುಮಾರ್ ಮಿಶ್ರಾ, ಟಿ.ಎಸ್.ಕಾರ್ತಿಕ್ ಹೀಗೆ ಅನೇಕ ಮಿತ್ರರು ಪಕ್ಷಿಗಳ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಬಾಲ್ಕನಿಯಲ್ಲಿ, ಮಾಳಿಗೆ ಮೇಲೆ ನೀರು ಇಡಬೇಕು ಎಂದು ಅವರು ಹೇಳಿದ್ದಾರೆ. ಮನೆಯ ಪುಟ್ಟ ಮಕ್ಕಳು ಈ ಕೆಲಸವನ್ನು ತುಂಬಾ ಚೆನ್ನಾಗಿ ಮಾಡುತ್ತಾರೆ ಎಂಬುದನ್ನು ನಾನು ಗಮನಿಸಿದ್ದೇನೆ. ಒಮ್ಮೆ ಅವರ ಮನಸ್ಸಿಗೆ ನೀರು ತುಂಬಿಡಬೇಕು ಎಂಬ ವಿಚಾರ ಬಂದರೆ ಸಾಕು, ತಾವು ಇಟ್ಟ ಪಾತ್ರೆಯಲ್ಲಿ ನೀರಿದೆಯೋ ಇಲ್ಲವೋ ನೋಡಲು 10 ಬಾರಿ ತಿರುಗಾಡುತ್ತಾರೆ. ಪಕ್ಷಿಗಳು ಬಂದವೋ ಇಲ್ಲವೋ ಎಂದು ನೋಡುತ್ತಿರುತ್ತಾರೆ. ನಮಗದು ಆಟ ಅನ್ನಿಸಬಹುದು ಆದರೆ ನಿಜ ಅರ್ಥದಲ್ಲಿ ಇದು ಮಕ್ಕಳ ಮನಸ್ಸಿನಲ್ಲಿ ಸಂವೇದನೆಯನ್ನುಂಟುಮಾಡುವ ಒಂದು ಅದ್ಭುತ ಅನುಭವವಾಗಿದೆ. ನೀವೂ ಪ್ರಯತ್ನಿಸಿ ನೋಡಿ, ಪಶು ಪಕ್ಷಿಗಳೊಂದಿಗೆ ಸ್ವಲ್ಪವೇ ಒಡನಾಟವಿದ್ದರೂ ಒಂದು ಹೊಸ ಆನಂದದ ಅನುಭೂತಿಯಾಗುತ್ತದೆ.

ಕೆಲ ದಿನಗಳ ಹಿಂದೆ ಗುಜರಾತ್‌ನ ಜಗತ್ ಎಂಬ ಸೋದರ ತಮ್ಮ ಒಂದು ಪುಸ್ತಕ 'ಸೇವ್ ದ ಸ್ಪ್ಯಾರೊ' ನನಗೆ ಕಳುಹಿಸಿದ್ದಾರೆ ಮತ್ತು ಅದರಲ್ಲಿ ಗುಬ್ಬಚ್ಚಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದರ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ. ಜೊತೆಗೆ ತಾವು ಸ್ವತಃ ಆಂದೋಲನದ ರೂಪದಲ್ಲಿ ಏನೇನು ಪ್ರಯೋಗಗಳನ್ನು ಮಾಡಿದರು, ಏನೇನು ಪ್ರಯತ್ನ ಮಾಡಿದರು ಎಂಬ ಬಗ್ಗೆ ಆ ಪುಸ್ತಕದಲ್ಲಿ ತುಂಬಾ ಚೆನ್ನಾಗಿ ವರ್ಣಿಸಿದ್ದಾರೆ. ಒಂದು ರೀತಿಯಲ್ಲಿ ನಮ್ಮ ದೇಶದಲ್ಲಿ ನಾವೆಲ್ಲ ಪಶು ಪಕ್ಷಿ, ಪ್ರಕೃತಿಯೊಂದಿಗೆ ಸಹಜೀವನ ನಡೆಸುತ್ತಾ ಅದರ ಬಣ್ಣಗಳಲ್ಲೇ ಬೆರೆತು ಹೋಗಿದ್ದೇವೆ. ಆದರೆ, ಸಾಮೂಹಿಕ ರೂಪದಲ್ಲಿ ಇಂಥಹ ಪ್ರಯತ್ನಗಳಿಗೆ ಕೈ ಜೋಡಿಸುವುದು ಅವಶ್ಯಕವಾಗಿದೆ. ನಾನು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ದಾವೂದಿ ಬೊಹರಾ ಸಮಾಜದ ಧರ್ಮಗುರು ಸೈಯ್ಯದನಾ ಸಾಹೇಬರಿಗೆ ನೂರು ವರ್ಷ ತುಂಬಿತ್ತು. ಅವರು 103 ವರ್ಷಗಳವರೆಗೆ ಜೀವಿಸಿದರು. ಅವರು ನೂರು ವರ್ಷ ಪೂರೈಸಿದ ಸಂದರ್ಭದಲ್ಲಿ ಬೊಹರಾ ಸಮಾಜದವರು ಬುರ್‍ಹಾನಿ ಫೌಂಡೇಶನ್ ಮುಖಾಂತರ ಗುಬ್ಬಚ್ಚಿಗಳನ್ನು ಉಳಿಸಲು ಒಂದು ದೊಡ್ಡ ಅಭಿಯಾನವನ್ನೇ ಕೈಗೊಂಡಿದ್ದರು. ಅದರ ಶುಭಾರಂಭ ಮಾಡುವ ಭಾಗ್ಯ ನನ್ನದಾಗಿತ್ತು. ಸುಮಾರು 52 ಸಾವಿರ ಬರ್ಡ್ ಫೀಡರ್ಸ್‌ಗಳನ್ನು ಅವರು ವಿಶ್ವದ ಮೂಲೆ ಮೂಲೆಯಲ್ಲಿ ವಿತರಿಸಿದ್ದರು. ಗಿನ್ನಿಸ್ ವಿಶ್ವ ದಾಖಲೆ ಪುಸ್ತಕದಲ್ಲೂ ಅದಕ್ಕೆ ಸ್ಥಾನ ದೊರಕಿತ್ತು.

ಕೆಲವೊಮ್ಮೆ ನಾವು ಎಷ್ಟು ವ್ಯಸ್ತವಾಗಿರುತ್ತೇವೆಂದರೆ, ನಮ್ಮ ಮನೆ ಬಾಗಿಲಿಗೆ ಬರುವ ಪೇಪರ್ ಮಾರುವವ, ಹಾಲಿನವ, ತರಕಾರಿಯವ, ಪೋಸ್ಟ್ ಮ್ಯಾನ್ ಯಾರೇ ಆಗಿರಲಿ ಅವರಿಗೆ ಬಿಸಿಲ ಬೇಗೆಯಲ್ಲಿ ನೀರನ್ನಾದರೂ ಕೇಳಬೇಕೆಂಬುದನ್ನು ಮರೆತೇ ಹೋಗುತ್ತೇವೆ. ಯುವ ಮಿತ್ರರೇ, ನಿಮ್ಮೊಂದಿಗೂ ಕೆಲ ಮಾತುಗಳನ್ನು ಆಡಬಯಸುತ್ತೇನೆ. ಕೆಲವೊಮ್ಮೆ ನಮ್ಮ ಯುವಪೀಳಿಗೆ ತನ್ನ ಕಂಫರ್ಟ್ ಝೋನ್‌ನಲ್ಲೇ ಜೀವನ ಕಳೆದುಬಿಡುವುದರಲ್ಲಿ ಆನಂದಿಸುತ್ತದೆಯೇ ಎಂಬ ಬಗ್ಗೆ ನನಗೆ ಚಿಂತೆಯೆನಿಸುತ್ತದೆ. ತಂದೆ ತಾಯಿಯರೂ ಬಹಳ ರಕ್ಷಣಾ ವ್ಯೂಹದಲ್ಲೇ ಇಟ್ಟು ಅವರನ್ನು ಬೆಳೆಸುತ್ತಾರೆ. ಕೆಲವರು ಇನ್ನೊಂದು ಬಗೆಯ ಅತಿರೇಕದಲ್ಲಿರುತ್ತಾರೆ. ಆದರೆ ಹೆಚ್ಚಿನವರು ಕಂಫರ್ಟ್ ಝೋನ್‌ನವರೇ ಕಾಣಸಿಗುತ್ತಾರೆ. ಈಗ ಪರೀಕ್ಷೆಗಳು ಮುಗಿದಿವೆ. ರಜೆಯ ಮಜ ಅನುಭವಿಸಲು ಯೋಜನೆಗಳನ್ನು ರೂಪಿಸಿದ್ದಾಗಿರಬಹುದು. ಬೇಸಿಗೆ ರಜೆ ಬಿಸಿಲಿನ ಬೇಗೆಯ ನಂತರವೂ ಚೆನ್ನಾಗಿರುತ್ತದೆ. ಆದರೆ, ನಾನೊಬ್ಬ ಸ್ನೇಹಿತನ ರೂಪದಲ್ಲಿ ನಿಮ್ಮ ರಜೆ ಹೇಗೆ ಕಳೆಯಬೇಕು ಎಂಬ ಬಗ್ಗೆ ಕೆಲ ಮಾತನಾಡಬಯಸುತ್ತೇನೆ. ಕೆಲವರು ಖಂಡಿತ ಅದನ್ನು ಮಾಡುತ್ತಾರೆ ಮತ್ತು ನನಗೂ ತಿಳಿಸುತ್ತಾರೆ ಎಂಬ ವಿಶ್ವಾಸವಿದೆ. ನೀವು ರಜೆಯ ಈ ಸಮಯವನ್ನು ಉಪಯುಕ್ತವಾಗಿ ಬಳಸಲು ನಾನು 3 ಸಲಹೆಗಳನ್ನು ನೀಡುತ್ತೇನೆ. ಮೂರನ್ನೂ ಮಾಡಿದರೆ ತುಂಬಾ ಒಳ್ಳೇದು. ಆದರೆ ಮೂರರಲ್ಲಿ ಒಂದನ್ನಾದರೂ ಮಾಡುವ ಪ್ರಯತ್ನ ಮಾಡಿ. ಹೊಸ ಅನುಭವವಾಗುವ, ಪಡೆಯುವ ಪ್ರಯತ್ನ ಮಾಡಿ, ಹೊಸ ಕೌಶಲ್ಯ ರೂಢಿಸಿಕೊಳ್ಳುವ ಪ್ರಯತ್ನ ಮಾಡಿ, ಯಾವುದರ ಬಗ್ಗೆ ಎಂದೂ ಕೇಳಿಲ್ಲ, ನೋಡಿಲ್ಲ, ಆಲೋಚಿಸಿಲ್ಲ, ತಿಳಿದಿಲ್ಲ ಆದ್ರೂ ಅಲ್ಲಿಗೆ ಹೋಗುವ ಮನಸ್ಸಾಗುತ್ತದೆ, ಅಲ್ಲಿಗೆ ಹೊರಟು ಹೋಗಿ. ಹೊಸ ಜಾಗ, ಹೊಸ ಅನುಭವ, ಹೊಸ ಕೌಶಲ್ಯ. ಎಷ್ಟೋ ಸಾರಿ ಯಾವುದೇ ವಸ್ತುವನ್ನು ಟಿ ವಿ ಯಲ್ಲಿ ನೋಡುವುದಕ್ಕೂ, ಪುಸ್ತಕದಲ್ಲಿ ಓದುವುದಕ್ಕೂ, ಪರಿಚಿತರಿಂದ ಕೇಳುವುದಕ್ಕೂ, ಸ್ವತಃ ಅದನ್ನು ಅನುಭವಿಸುವುದಕ್ಕೂ ಆಕಾಶ – ಭೂಮಿಯಷ್ಟು ವ್ಯತ್ಯಾಸವಿರುತ್ತದೆ. ಈ ರಜೆ ದಿನಗಳಲ್ಲಿ ನಿಮಗೆ ಯಾವುದರ ಬಗ್ಗೆ ಆಸಕ್ತಿ ಇದೆಯೋ ಅದನ್ನು ತಿಳಿಯುವ ಪ್ರಯತ್ನ ಮಾಡಿ, ಹೊಸ ಪ್ರಯೋಗಗಳನ್ನು ಮಾಡಿ,



ಪ್ರಯೋಗ ಧನಾತ್ಮಕವಾಗಿರಲಿ, ಕಂಫರ್ಟ್ ಝೋನ್‌ನಿಂದ ಹೊರ ಬರುವಂಥದ್ದಾಗಿರಲಿ ಎಂದು ನಾನು ಆಗ್ರಹಿಸುತ್ತೇನೆ. ನಾವು ಮಧ್ಯಮ ವರ್ಗದ ಕುಟುಂಬದವರಾಗಿದ್ದೇವೆ, ಸುಖೀ ಪರಿವಾರದವರಾಗಿದ್ದೇವೆ. ಎಂದಾದರೂ ರಿಸರ್ವೇಶನ್ ಇಲ್ಲದೇ ಸೆಕೆಂಡ್ ಕ್ಲಾಸ್ ಟಿಕೆಟ್ ಪಡೆದು ರೈಲಿನಲ್ಲಿ ಹತ್ತಿ ಬಿಡಬೇಕು, ಕಡಿಮೆ ಅಂದರೂ 24 ಗಂಟೆ ಪ್ರವಾಸ ಮಾಡಬೇಕು ಎಂದೆನಿಸುವುದಿಲ್ಲವೇ? ನೀವು ಏನು ಅನುಭವಿಸುತ್ತೀರಿ. ಸಹ ಪ್ರಯಾಣಿಕರ ಮಾತುಗಳೇನಿರುತ್ತವೆ, ಅವರು ಸ್ಟೇಶನ್‌ನಲ್ಲಿ ಇಳಿದು ಏನು ಮಾಡುತ್ತಾರೆ, ಬಹುಶಃ ವರ್ಷಪೂರ್ತಿ ಕಲಿಯಲು ಆಗದ್ದನ್ನು ಈ 24 ಗಂಟೆಗಳ ರಿಸರ್ವೇಶನ್‌ರಹಿತ ಸದ್ದುಗದ್ದಲದಿಂದ ತುಂಬಿದ, ಮಲಗಲೂ ಆಗದಿರುವಂತಹ, ನಿಂತೇ ಪ್ರಯಾಣಿಸುವ ಅನುಭವ ಪಡೆಯಿರಿ. ಮತ್ತೆ ಮತ್ತೆ ಈ ಪ್ರಯೋಗ ಮಾಡಿ ಎಂದು ಹೇಳುವುದಿಲ್ಲ. ಆದರೆ ಒಮ್ಮೆಯಾದರೂ ಪ್ರಯತ್ನಿಸಿ. ಸಂಜೆ ಹೊತ್ತಲ್ಲಿ ನಿಮ್ಮ ಫುಟ್‌ಬಾಲ್ ತೆಗೆದುಕೊಂಡು, ವಾಲಿಬಾಲ್ ತೆಗೆದುಕೊಂಡು ಇಲ್ಲವೇ ಯಾವುದೇ ಆಟದ ವಸ್ತುವನ್ನು ತೆಗೆದುಕೊಂಡು ಹತ್ತಿರದ ಬಡವರ ಗಲ್ಲಿಗಳಿಗೆ ಹೋಗಿ. ಆ ಬಡ ಮಕ್ಕಳೊಂದಿಗೆ ಆಟ ಆಡಿ. ಆಗ ನೋಡಿ ಹಿಂದೆಂದೂ ಆಟದಲ್ಲಿ ಇಂಥ ಆನಂದ ನಿಮಗೆ ದೊರೆತಿರಲಿಕ್ಕಿಲ್ಲ, ಹಾಗನ್ನಿಸುತ್ತದೆ. ಸಮಾಜದಲ್ಲಿ ಹೀಗೆ ಜೀವನ ಸವೆಸುವ ಮಕ್ಕಳಿಗೆ ನಿಮ್ಮೊಂದಿಗೆ ಆಡುವ ಅವಕಾಶ ಸಿಕ್ಕಾಗ ಅವರ ಜೀವನದಲ್ಲಿ ಎಷ್ಟು ದೊಡ್ಡ ಬದಲಾವಣೆ ಬರುತ್ತದೆ ಎಂದು ಯೋಚಿಸಿದ್ದೀರಾ? ನೀವು ಒಮ್ಮೆ ಹೋಗುತ್ತೀರೆಂದು ನಾನು ಆಶಿಸುತ್ತೇನೆ, ನಿಮಗೆ ಮತ್ತೆ ಮತ್ತೆ ಹೋಗಬೇಕೆನಿಸುತ್ತದೆ. ಈ ಅನುಭವ ನಿಮಗೆ ಬಹಳಷ್ಟು ಪಾಠ ಕಲಿಸಲಿದೆ. ಎಷ್ಟೋ ಸ್ವಯಂ ಸೇವಾ ಸಂಘಗಳು ಸೇವಾ ಕಾರ್ಯಗಳನ್ನು ಮಾಡುತ್ತವೆ. ನೀವಂತೂ ಗೂಗಲ್ ಗುರು ಸಂಪರ್ಕ ಹೊಂದಿದವರಾಗಿದ್ದೀರಿ.

ಅದರಲ್ಲಿ ಹುಡುಕಿ. ಇಂಥ ಯಾವುದೇ ಒಂದು ಸಂಘಟನೆ ಜೊತೆ 15 – 20 ದಿನ ಸೇರಿಕೊಳ್ಳಿ, ಹೊರಟುಬಿಡಿ. ಯಾವುದೋ ಕಾಡಿಗೆ ನಡೆದುಬಿಡಿ.... ಕೆಲವೊಮ್ಮೆ ಬಹಳಷ್ಟು ಬೇಸಿಗೆ ಶಿಬಿರಗಳು ನಡೆಯುತ್ತವೆ. ವ್ಯಕ್ತಿತ್ವ ವಿಕಸನ ಶಿಬಿರಗಳು ನಡೆಯುತ್ತವೆ. ಎಷ್ಟೋ ವಿಕಾಸದ ಮಾರ್ಗಗಳಿರುತ್ತವೆ. ಅದರಲ್ಲಿ ಪಾಲ್ಗೊಳ್ಳಿ. ಆದರೆ ಅದರ ಜೊತೆಗೆ, ಒಮ್ಮೊಮ್ಮೆ ನೀವೇನು ಬೇಸಿಗೆ ಶಿಬಿರ, ವ್ಯಕ್ತಿತ್ವ ವಿಕಸನ ಕೋರ್ಸ ಮಾಡಿದ್ದೀರೋ, ಅದನ್ನು ನೀವು ಹಣ ಪಡೆಯದೇ ಇಂಥ ಅವಕಾಶ ದೊರೆಯದ ಸಮಾಜದ ಜನರ ಬಳಿ ತೆರಳಿ ಅವರಿಗೆ ಹೇಳಿಕೊಡಿ. ಇದು ಹೇಗೆ ಮಾಡಲು ಸಾಧ್ಯ? ನೀವು ಅವರಿಗೆ ಕಲಿಸಬಹುದು. ತಂತ್ರಜ್ಞಾನ ಅಂತರವನ್ನು ತಗ್ಗಿಸಲು ಬಂದಿದೆ, ತಂತ್ರಜ್ಞಾನ ಗಡಿಗಳನ್ನು ತೊಡೆದುಹಾಕಲು ಬಂದಿದೆ. ಆದರೆ ಇದರ ದುಷ್ಪರಿಣಾಮ ಹೇಗೆ ಆಗುತ್ತಿದೆ ಎಂದರೆ ಒಂದೇ ಮನೆಯಲ್ಲಿ, ಆರು ಜನ ಒಂದೇ ಕೋಣೆಯಲ್ಲಿ ಕುಳಿತಿದ್ದಾರೆ. ಆದರೆ ನಮ್ಮ ಕಲ್ಪನೆಗೂ ಮೀರದಷ್ಟು ಅವರ ಮಧ್ಯೆ ಅಂತರವಿದೆ. ಯಾಕೆ? ಎಂಬುದು ನನ್ನ ಚಿಂತೆಯಾಗಿದೆ. ಪ್ರತಿಯೊಬ್ಬರೂ ತಂತ್ರಜ್ಞಾನದಿಂದಾಗಿ ಒಂದಲ್ಲಾ ಒಂದೆಡೆ ತೊಡಗಿರುತ್ತಾರೆ. ಸಾಮೂಹಿಕತೆಯೂ ಒಂದು ಆಚರಣೆಯಾಗಿದೆ. ಸಾಮೂಹಿಕತೆ ಎಂಬುದು ಒಂದು ಶಕ್ತಿಯಾಗಿದೆ. ಇನ್ನೊಂದು ನಾನು ಹೇಳಿದ್ದು ಕೌಶಲ್ಯ. ನಿಮಗೆ ಏನಾದ್ರೂ ಹೊಸದನ್ನು ಕಲಿಯಬೇಕೆಂದೆನ್ನಿಸುವುದಿಲ್ಲವೇ? ಇದು ಸ್ಪರ್ಧಾತ್ಮಕ ಯುಗ. ಪರೀಕ್ಷೆಗಳಲ್ಲಿ ಎಷ್ಟು ಮುಳುಗಿಹೋಗಿರುತ್ತೇವೆ. ಹೆಚ್ಚೆಚ್ಚು ಅಂಕ ಗಳಿಸಲೆಂದು ಸವೆದು ಹೋಗುತ್ತೇವೆ. ಕಳೆದುಹೋಗುತ್ತೇವೆ, ರಜೆಯಲ್ಲೂ ಒಂದಲ್ಲ ಒಂದು ಕೋಚಿಂಗ್ ಕ್ಲಾಸ್ ನಡೆದೇ ಇರುತ್ತದೆ.

ಮುಂದಿನ ಪರೀಕ್ಷೆ ಚಿಂತೆ ಕಾಡುತ್ತಿರುತ್ತದೆ. ಒಮ್ಮೊಮ್ಮೆ ನಮ್ಮ ಯುವ



ಪೀಳಿಗೆ ರೊಬೋಟ್‌ನಂತಾಗುತ್ತಿದೆಯೇ? ಮಶೀನ್‌ನಂತೆ ಜೀವನ ನಡೆಸುತ್ತಿದೆಯೇ? ಎಂದು ಯೋಚನೆಯಾಗುತ್ತದೆ. ಸ್ನೇಹಿತರೇ, ಜೀವನದಲ್ಲಿ ತುಂಬಾ ಸಾಧಿಸಬೇಕೆಂಬ ಆಸೆ ಒಳ್ಳೆಯದು. ಏನಾದರೂ ಮಾಡಬೇಕೆಂಬ ಗುರಿ ಒಳ್ಳೆಯದು. ಅಲ್ಲದೇ ಮಾಡಲೂ ಬೇಕು. ಆದರೆ ನಿಮ್ಮಲ್ಲಿರುವ ಮಾನವೀಯ ಮೌಲ್ಯಗಳು ಗೌಣವಾಗುತ್ತಿಲ್ಲ, ನಾವು ಮಾನವ ಸಹಜ ಗುಣಗಳಿಂದ ದೂರವಾಗುತ್ತಿಲ್ಲವೇ ಎಂಬುದನ್ನು ಗಮನಿಸಿ. ಕೌಶಲ್ಯಾಭಿವೃದ್ಧಿಯಲ್ಲಿ ಈ ವಿಚಾರದತ್ತ ಕೂಡ ಬೆಳಕು ಚೆಲ್ಲಬಹುದಲ್ಲವೇ? ತಂತ್ರಜ್ಞಾನದಿಂದ ದೂರವಿದ್ದು, ನಿಮಗಾಗಿ ಸಮಯ ಕಳೆಯುವ ಪ್ರಯತ್ನ ಮಾಡಿ. ಸಂಗೀತ ವಾದ್ಯ ಕಲಿಯುವುದಾಗಲಿ, ತಮಿಳ್, ತೆಲುಗು, ಅಸ್ಸಾಮೀಸ್, ಬಾಂಗ್ಲಾ, ಮಲಯಾಳಂ, ಗುಜರಾತಿ, ಮರಾಠಿ, ಪಂಜಾಬಿ ಯಾವುದೇ ಹೊಸ ಭಾಷೆಯ 5–50 ವಾಕ್ಯಗಳನ್ನು ಕಲಿಯುವುದಾಗಲೀ ಮಾಡಿ. ಎಷ್ಟೊಂದು ವಿವಿಧತೆಯಿಂದ ಕೂಡಿದ ದೇಶ ನಮ್ಮದು. ನೀವು ಪ್ರಯತ್ನಿಸಿದರೆ ನಮ್ಮ ನೆರೆ ಹೊರೆಯಲ್ಲೇ ಯಾರಾದರೂ ಕಲಿಸುವವರು ಸಿಕ್ಕೇ ಸಿಗುತ್ತಾರೆ. ಈಜಲು ಬರುವುದಿಲ್ಲ ಎಂದಾದರೆ ಈಜು ಕಲಿಯಿರಿ, ಡ್ರಾಯಿಂಗ್ ಮಾಡಿ, ಉತ್ತಮವಾದ ಚಿತ್ರ ಮೂಡಿಬರದಿದ್ದರೂ ಕಾಗದದ ಮೇಲೆ ಏನೋ ಬರೆಯುವ ಪ್ರಯತ್ನವಂತೂ ಮಾಡಿ. ನಿಮ್ಮಲ್ಲಿರುವ ಸಂವೇದನೆ ಪ್ರಕಟಗೊಳ್ಳಲಾರಂಭಿಸುತ್ತದೆ. ಒಮ್ಮೊಮ್ಮೆ ಯಾವುದನ್ನು ನಾವು ಚಿಕ್ಕ ಪುಟ್ಟ ಕೆಲಸಗಳು ಎಂದು ಪರಿಗಣಿಸುತ್ತೇವೆಯೋ, ಅವುಗಳನ್ನು ಮಾಡಬೇಕೆಂದೆನಿಸಿದಲ್ಲಿ ಮಾಡಿ. ನಿಮಗೆ ಕಾರ್ ಡ್ರೈವಿಂಗ್ ಕಲಿಯಬೇಕೆನ್ನಿಸುತ್ತದೆ. ಎಂದಾದರೂ ಆಟೋ ರಿಕ್ಷಾ ಕಲಿಯಬೇಕು ಎನ್ನಿಸುತ್ತದೆಯೇ? ನಿಮಗೆ ಸೈಕಲ್ ಓಡಿಸಲು ಬರುತ್ತಿರಬಹುದು. ಆದರೆ ಜನರನ್ನು ಕೂರಿಸಿಕೊಂಡು ಹೋಗುವ 3 ಚಕ್ರದ ಸೈಕಲ್ ಓಡಿಸುವ ಪ್ರಯತ್ನ ಮಾಡಿದ್ದೀರೇನು? ನೀವು ಪ್ರಯತ್ನಿಸಿ ನೋಡಿ, ಈ ಕೌಶಲ್ಯ ನಿಮಗೆ ಆನಂದವನ್ನೂ ನೀಡುತ್ತದೆ ಮತ್ತು ನಿಮ್ಮ ಮೈಥಳಿ ಬಿಡಿಸುವಲ್ಲಿಯೂ ಸಹಾಯ ಮಾಡುತ್ತದೆ. ಔಟ್ ಆಫ್ ಬಾಕ್ಸ್ ಏನಾದರೂ ಮಾಡಿ ಗೆಳೆಯರೇ.

ಜೀವನ ರೂಪಿಸಿಕೊಳ್ಳಲು ಇದು ಒಂದು ಅವಕಾಶ. ಎಲ್ಲ ಪರೀಕ್ಷೆಗಳು ಮುಗಿದುಬಿಡಲಿ, ಕರಿಯರ್‌ನ ಹೊಸ ಘಟ್ಟ ತಲುಪಿದಾಗ ಕಲಿಯುವೆ ಎಂದರೆ ಆ ಅವಕಾಶ ಎಂದಿಗೂ ಬಾರದು. ನೀವು ಮತ್ತಾವುದೋ ಗೊಂದಲದಲ್ಲಿರುತ್ತೀರಾ, ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ, ನಿಮಗೆ ಜಾದೂ ಕಲಿಯುವ ಹುಚ್ಚಿದ್ದರೆ ಇಸ್ಪೀಟ್ ಎಲೆಗಳ ಜಾದೂ ಕಲಿಯಿರಿ. ನಿಮ್ಮ ಸ್ನೇಹಿತರಿಗೆ ಜಾದೂ ತೋರಿಸುತ್ತಿರಿ. ನಿಮಗೆ ಗೊತ್ತಿಲ್ಲದ ಒಂದಲ್ಲಾ ಒಂದು ವಿಷಯ ತಿಳಿದುಕೊಳ್ಳುವ ಪ್ರಯತ್ನ ಮಾಡಿ. ಇದರಿಂದ ನಿಮಗೆ ಖಂಡಿತ ಲಾಭವಾಗುತ್ತದೆ. ನಿಮ್ಮಲ್ಲಿರುವ ಮಾನವೀಯ ಶಕ್ತಿಗೆ ಚೈತನ್ಯ ದೊರೆಯುತ್ತದೆ. ವಿಕಾಸಕ್ಕೆ ಇದೊಂದು ಉತ್ತಮ ಅವಕಾಶ. ನನ್ನ ಅನುಭವದಿಂದ ಹೇಳುತ್ತಿದ್ದೇನೆ ಜಗತ್ತನ್ನು ನೋಡುವುದರಿಂದ, ನಮ್ಮ ಕಲ್ಪನೆಗೂ ಮೀರಿದ್ದನ್ನು ಕಲಿಯುವ ಮತ್ತು ಅರಿಯುವ ಅವಕಾಶ ಸಿಗುತ್ತದೆ. ಹೊಸ ಹೊಸ ಜಾಗಗಳು, ಹೊಸ ಹೊಸ ಪಟ್ಟಣಗಳು, ಹೊಸ ಹೊಸ ನಗರಗಳು, ಹೊಸ ಹೊಸ ಪ್ರದೇಶಗಳು. ಆದರೆ ಹೋಗುವ ಮೊದಲು ಎಲ್ಲಿಗೆ ಹೋಗುತ್ತಿದ್ದೇವೆ ಎಂಬ ಬಗ್ಗೆ ಅಭ್ಯಸಿಸಿ, ಮತ್ತು ಅಲ್ಲಿಗೆ ತೆರಳಿ ಒಬ್ಬ ಉತ್ಸುಕನಂತೆ ಅದನ್ನು ನೋಡುವುದು, ತಿಳಿದುಕೊಳ್ಳುವುದು, ಜನರೊಂದಿಗೆ ಚರ್ಚಿಸುವುದು, ಅವರನ್ನು ಕೇಳುವುದು ಹಾಗೂ ಪ್ರಯತ್ನಿಸುವುದರಿಂದ ಸಿಗುವ ಆನಂದವೇ ಬೇರೆ. ಖಂಡಿತ ಇವೆಲ್ಲ ಪ್ರಯತ್ನಿಸಿ ಮತ್ತು ನಿರ್ಧರಿಸಿ. ಆದರೆ ಹೆಚ್ಚಿನ ಪ್ರಯಾಣ ಬೇಡ. ಒಂದು ಸ್ಥಳಕ್ಕೆ ಭೇಟಿ ನೀಡಿದಾಗ 3–4 ದಿನ ಇರಿ. ನಂತರ ಮುಂದಿನ ಸ್ಥಳಕ್ಕೆ ತೆರಳಿ 3–4 ದಿನ ಇರಿ. ಇದರಿಂದ ನಿಮಗೆ ಬಹಳಷ್ಟು ಕಲಿಯಲು ಸಿಗುತ್ತದೆ. ನೀವು ಎಲ್ಲೇ ಹೋದರೂ ನನಗೆ ಅದರ ಫೋಟೊ ಕಳುಹಿಸಿ ಎಂದು ಬಯಸುವೆ. ಹೊಸದಾಗಿ ಏನಾದರೂ ನೋಡಿದಿರಾ? ಎಲ್ಲಿಗೆ ಹೋಗಿದ್ದಿರಿ? ನೀವು ಹ್ಯಾಷ್ ಟ್ಯಾಗ್ ಇನ್‌ಕ್ರೆಡಿಬಲ್ ಇಂಡಿಯಾ ಬಳಸಿ ನಿಮ್ಮ ಈ ಅನುಭವಗಳನ್ನು ಹಂಚಿಕೊಳ್ಳಿ. ಸ್ನೇಹಿತರೇ,




ಈ ಬಾರಿ ಭಾರತ ಸರ್ಕಾರವೂ ನಿಮಗೆಂದೇ ಒಂದು ಉತ್ತಮ ಅವಕಾಶ ನೀಡಿದೆ. ಹೊಸ ಪೀಳಿಗೆಯಂತೂ ನಗದು ವ್ಯವಹಾರದಿಂದ ಹೆಚ್ಚು–ಕಡಿಮೆ ಮುಕ್ತರಾಗುತ್ತಿದ್ದಾರೆ. ಅವರಿಗೆ ನಗದು ಅವಶ್ಯಕತೆ ಇಲ್ಲ. ಅವರು ಡಿಜಿಟಲ್ ಕರೆನ್ಸಿಯಲ್ಲಿ ವಿಶ್ವಾಸ ಬೆಳೆಸಿಕೊಂಡಿದ್ದಾರೆ. ನೀವೂ ಮಾಡುತ್ತೀರಿ. ಆದರೆ, ಇದೇ ಯೋಜನೆಯಿಂದ ನೀವು ಗಳಿಸಲೂಬಹುದು ಎಂದು ಎಂದಾದರೂ ಯೋಚಿಸಿದ್ದೀರಾ..? ಭಾರತ ಸರ್ಕಾರದ ಒಂದು ಯೋಜನೆಯಿದೆ. ನೀವು ಭೀಮ್ ಆಪ್ ಡೌನ್‌ಲೋಡ್ ಮಾಡಿಕೊಳ್ಳುತ್ತಿರಬಹುದು. ಉಪಯೋಗಿಸುತ್ತಲೂ ಇರಬಹುದು. ಆದರೆ, ಇತರರಿಗೆ ರೆಫರ್ ಮಾಡಿದರೆ. ಅವರು ಇದಕ್ಕೆ ಸೇರ್ಪಡೆಯಾದರೆ ಮತ್ತು ಆ ಹೊಸ ವ್ಯಕ್ತಿ 3 ಬಾರಿ ಆರ್ಥಿಕ ವ್ಯವಹಾರ ಮಾಡಿದರೆ, ಈ ಕೆಲಸ ಮಾಡಿದ್ದಕ್ಕಾಗಿ ನಿಮಗೆ 10 ರೂಪಾಯಿ ದೊರೆಯುತ್ತದೆ. ನಿಮ್ಮ ಖಾತೆಯಲ್ಲಿ ಸರ್ಕಾರದ ವತಿಯಿಂದ 10 ರೂಪಾಯಿ ಜಮಾ ಆಗುವುದು. ಒಂದು ವೇಳೆ ನೀವು ದಿನಕ್ಕೆ 20 ಜನರಿಂದ ಮಾಡಿಸಿದರೆ, ಸಂಜೆಯ ವೇಳೆಗೆ 200 ರೂಪಾಯಿಗಳನ್ನು ಸಂಪಾದಿಸುವಿರಿ.

ವ್ಯಾಪಾರಿಗಳಿಗೂ ಆದಾಯ ವಾಗಬಹುದು, ವಿದ್ಯಾರ್ಥಿಗಳಿಗೂ ಆದಾಯವಾಗಬಹುದು. ಹಾಗೂ ಈ ಯೋಜನೆ ಅಕ್ಟೋಬರ್ 14ರ ವರೆಗೂ ಇದೆ. ಡಿಜಿಟಲ್ ಇಂಡಿಯಾ ನಿರ್ಮಾಣಕ್ಕೆ ನಿಮ್ಮ ಪಾಲುದಾರಿಕೆ ಇರುತ್ತದೆ. ನೀವು ನವ ಭಾರತದ ಒಬ್ಬ ಆರಕ್ಷಕರಾಗುವಿರಿ, ಹಾಗಾದರೆ, ರಜೆಗೆ ರಜೆ ಮತ್ತು ದುಡಿಮೆಗೆ ದುಡಿಮೆ. ರೆಫರ್ ಮಾಡಿ ಗಳಿಸಿ. ಸಾಮಾನ್ಯವಾಗಿ ನಮ್ಮ ದೇಶದಲ್ಲಿ ವಿ.ಐ.ಪಿ ಸಂಸ್ಕೃತಿಯ ಬಗ್ಗೆ ದ್ವೇಷದ ಮನೋಭಾವವಿದೆ. ಆದರೆ, ಇದು ಇಷ್ಟು ಆಳವಾಗಿ ಬೇರೂರಿದೆ ಎಂಬುದು ಇತ್ತೀಚೆಗೆ ನನ್ನ ಅನುಭವಕ್ಕೆ ಬಂತು. ಎಷ್ಟೇ ದೊಡ್ಡ ವ್ಯಕ್ತಿ ಇದ್ದರೂ, ಹಿಂದೂಸ್ಥಾನದಲ್ಲಿ, ತಮ್ಮ ವಾಹನದ ಮೇಲೆ ಕೆಂಪು ದೀಪ




ಬಳಸಿಕೊಂಡು ಓಡಾಡುವಂತಿಲ್ಲ ಎಂದು ಭಾರತ ಸರ್ಕಾರ ನಿರ್ಧರಿಸಿದ್ದಾಗಿದೆ. ಅದು ಒಂದು ರೀತಿ ವಿ.ಐ.ಪಿ ಸಂಸ್ಕೃತಿಯ ಸಂಕೇತವಾಗಿಬಿಟ್ಟಿತ್ತು. ಆದರೆ, ನನ್ನ ಅನುಭವ ಏನು ಹೇಳುತ್ತೆ ಅಂದರೆ, ಕೆಂಪು ದೀಪ ವಾಹನದ ಮೇಲೆ ಇಡಲಾಗುತ್ತೆ, ಗಾಡಿಗಳ ಮೇಲೆ ಇಡಲಾಗುತ್ತೆ, ಆದರೆ ನಿಧಾನವಾಗಿ ಅದು ಮೆದುಳಿಗೇರಿ ಅವರು ಮಾನಸಿಕವಾಗಿ ಈ ವಿ.ಐ.ಪಿ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದಾರೆ. ಈಗ ಕೆಂಪು ದೀಪ ಹೋಗಿಯಾಗಿದೆ, ಆದರೆ, ಇದರಿಂದ ಮೆದುಳಿಗೇರಿದ ಕೆಂಪು ದೀಪದ ಭ್ರಮೆಯೂ ಹೋಗಿದೆಯೆಂದು ಯಾರೂ ಹೇಳಲಾಗುವುದಿಲ್ಲ. ನನಗೆ ಒಂದು ಆಸಕ್ತಿಕರ ದೂರವಾಣಿ ಕರೆ ಬಂದಿತ್ತು. ಆ ಕರೆಯಲ್ಲಿ ಅವರು ತಮ್ಮ ಆಕಾಂಕ್ಷೆಗಳನ್ನು ವ್ಯಕ್ತಪಡಿಸಿದರು, ಆದರೆ, ಆ ಕರೆಯಿಂದ, ಸಾಮಾನ್ಯ ಮನುಷ್ಯರು ಇಂಥವನ್ನು ಇಷ್ಟಪಡೋದಿಲ್ಲ ಎಂಬುದು ನನಗೆ ಅರಿವಾಯಿತು. ಅದರಿಂದ ಅಂತರದ ಅನುಭವವಾಗುತ್ತದೆ.

“ನಮಸ್ಕಾರ ಪ್ರಧಾನ ಮಂತ್ರಿಗಳೇ, ಜಬಲ್‌ಪುರ್, ಮಧ್ಯ ಪ್ರದೇಶದಿಂದ, ನಾನು ಶಿವ ಚೌಬೆ ಮಾತಾಡುತ್ತಿರುವೆನು. ನಾನು ಸರ್ಕಾರದ ರೆಡ್ ಬೀಕನ್ ಲೈಟ್ ಬ್ಯಾನ್ ಬಗ್ಗೆ ಸ್ವಲ್ಪ ಹೇಳಲು ಇಷ್ಟ ಪಡುತ್ತೇನೆ. ನಾನು ನ್ಯೂಸ್ ಪೇಪರ್‌ನಲ್ಲಿ ಓದಿದ್ದೆ. ಅದರಲ್ಲಿ ಒಂದು ಸಾಲು ಹೀಗೆ ಬರೆದಿತ್ತು ‘ಎವರಿ ಇಂಡಿಯನ್ ಈಸ್ ಎ ವಿಐಪಿ ಆನ್ ಎ ರೋಡ್’ ಅದನ್ನು ಓದಿ ಇಂದು ನನ್ನ ಸಮಯವೂ ಅಷ್ಟೇ ಮಹತ್ವವಾದದ್ದು ಎಂದು ತಿಳಿದು ನನಗೆ ಬಹಳ ಹೆಮ್ಮೆ ಎನಿಸಿತು ಮತ್ತು ಸಂತೋಷವೂ ಆಯಿತು. ನನಗೆ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕುವುದು ಬೇಡವಾಗಿದೆ, ನನಗೆ ಬೇರೆಯವರಿಗೋಸ್ಕರ ನಿಲ್ಲುವುದೂ ಬೇಡವಾಗಿದೆ. ನಿಮ್ಮ ಈ ನಿರ್ಧಾರಕ್ಕೆ ನಾನು ಹೃತ್ಪೂರ್ವಕ ಅಭಿನಂದನೆ ಹೇಳುತ್ತೇನೆ. ಹಾಗೇ ನೀವು ಆರಂಭಿಸಿರುವ ಸ್ವಚ್ಛ ಭಾರತ ಅಭಿಯಾನದಿಂದ ಕೇವಲ ನಮ್ಮ ದೇಶ ಸ್ವಚ್ಛವಾಗುವುದಷ್ಟೇ ಅಲ್ಲ ಜೊತೆಗೆ ನಮ್ಮ ವಿ ಐ ಪಿ ಗೂಂಡಾಗಿರಿನೂ ಸ್ವಚ್ಛವಾಗುತ್ತಿರುವುದಕ್ಕೆ ನನ್ನ ಧನ್ಯವಾದಗಳು.”

ಸರ್ಕಾರದ ನಿರ್ಣಯದಿಂದ ಕೆಂಪು ದೀಪ ತೆಗೆದು ಹಾಕುವುದು ವ್ಯವಸ್ಥೆಯ ಒಂದು ಭಾಗವಾಗಿದೆ. ಆದರೆ ಮನಸ್ಸಿನಿಂದಲೂ ನಾವು ಪ್ರಯತ್ನ ಮಾಡಿ ಇದನ್ನು ಹೊರ ತೆಗೆಯಬೇಕಿದೆ. ನಾವೆಲ್ಲರೂ ಒಗ್ಗೂಡಿ ಜಾಗೃತ ಪ್ರಯತ್ನವನ್ನು ಮಾಡಿದರೆ ಇದನ್ನು ತೆಗೆಯಬಹುದಾಗಿದೆ. ನವ ಭಾರತದ ನಮ್ಮ ವಿಚಾರ ಧಾರೆ, ವಿ.ಐ.ಪಿ ಸ್ಥಾನದಲ್ಲಿ ಇ.ಪಿ.ಐ. ಗೆ ಮಹತ್ವ ಬೆಳೆಯಲಿ ಎಂಬುದು. ನಾನು ವಿ ಐ ಪಿ ಸ್ಥಾನದಲ್ಲಿ ಇ ಪಿ ಐ ಎಂದಾಗ ನನ್ನ ಭಾವನೆಗಳು ಸ್ಪಷ್ಟವಾಗಿವೆ – ಪ್ರತಿ ವ್ಯಕ್ತಿಗೆ ಒಂದು ಮಹತ್ವವಿದೆ, ಪ್ರತಿ ವ್ಯಕ್ತಿಗೂ ಒಂದು ತೇಜಸ್ಸಿದೆ. 125 ಕೋಟಿ ದೇಶದ ಜನತೆಯ ಮಹತ್ವವನ್ನು ನಾವು ಸ್ವೀಕರಿಸಬೇಕು, 125 ಕೋಟಿ ನಾಗರಿಕರ ತೇಜಸ್ಸನ್ನು ಸ್ವೀಕರಿಸಿದರೆ ಮಹತ್ವದ ಕನಸುಗಳನ್ನು ನನಸಾಗಿಸಲು ಅದ್ಭುತವಾದ ಶಕ್ತಿ ಒಗ್ಗೂಡುತ್ತದೆ. ನಾವೆಲ್ಲರೂ ಸೇರಿ ಒಗ್ಗೂಡಿಸಬೇಕಿದೆ. ನನ್ನ ಪ್ರಿಯ ದೇಶ ಬಾಂಧವರೇ, ನಾವು ನಮ್ಮ ಇತಿಹಾಸವನ್ನು, ನಮ್ಮ ಸಂಸ್ಕೃತಿಯನ್ನು, ನಮ್ಮ ಪರಂಪರೆಗಳನ್ನು ಆಗಾಗ ನೆನಪಿಸಿಕೊಳ್ಳಬೇಕೆಂದು ನಾನು ಯಾವಾಗಲೂ ಹೇಳುತ್ತಿರುತ್ತೇನೆ. ಅದರಿಂದ ನಮಗೆ ಶಕ್ತಿ ದೊರೆಯುತ್ತದೆ, ಪ್ರೇರಣೆ ದೊರೆಯುತ್ತದೆ.

ಈ ವರ್ಷ ನಾವು 125 ಕೋಟಿ ದೇಶದ ಜನತೆ, ಸಂತ ರಾಮಾನುಜಾಚಾರ್ಯರ 1000 ವರ್ಷದ ಜಯಂತಿಯನ್ನು ಆಚರಿಸುತ್ತಿದ್ದೇವೆ. ಯಾವುದೋ ಒಂದು ಕಾರಣದಿಂದ ನಾವು ಎಷ್ಟು ಸಂಕುಚಿತರಾಗಿದ್ದೇವೆ, ಎಷ್ಟು ಸಣ್ಣವರಾಗಿದ್ದೇವೆಂದರೆ, ಹೆಚ್ಚೆಂದರೆ ಶತಮಾನಗಳವರೆಗಷ್ಟೇ ವಿಚಾರ ಮಾಡುತ್ತೇವೆ. ಪ್ರಪಂಚದ ಇತರ ದೇಶಗಳಲ್ಲಿ ಶತಮಾನಕ್ಕೆ ಹೆಚ್ಚಿನ ಮಹತ್ವವಿರಬಹುದು. ಆದರೆ, ಭಾರತ ಎಷ್ಟು ಪುರಾತನ ರಾಷ್ಟ್ರವೆಂದರೆ, ಸಾವಿರಾರು ವರ್ಷಗಳಿಗಿಂತಲೂ ಹಳೆಯ ನೆನಪುಗಳನ್ನು ಆಚರಿಸುವ ಅವಕಾಶ ನಮಗೆ ದೊರೆತಿದೆ. ಸಾವಿರ ವರ್ಷಗಳ ಹಿಂದಿನ ಸಮಾಜ ಹೇಗಿರಬಹುದು? ಯೋಚನೆಗಳು ಹೇಗಿರಬಹುದು? ಸ್ವಲ್ಪ ಕಲ್ಪನೆ ಮಾಡಿಕೊಂಡು ನೋಡಿ. ಇವತ್ತಿಗೂ ಸಾಮಾಜಿಕ ಕಟ್ಟುಪಾಡುಗಳಿಂದ ಹೊರಬರುವುದು ಬಹಳ ಕಷ್ಟ. 1000 ವರ್ಷದ ಹಿಂದೆ ಹೇಗಾಗುತ್ತಿರಬಹುದು? ರಾಮಾನುಜಾಚಾರ್ಯರು ನಮ್ಮ ಸಮಾಜದಲ್ಲಿದ್ದ ಕೆಟ್ಟದ್ದನ್ನ, ಮೇಲು ಕೀಳು ಎಂಬ ಭಾವನೆ, ಅಸ್ಪೃಶ್ಯತೆಯ ಭಾವನೆ ಮತ್ತು ಜಾತಿವಾದದ ಭಾವನೆಯ ವಿರುದ್ಧ ಬಹಳ ದೊಡ್ಡ ಸಮರ ಸಾರಿದ್ದರು ಎಂಬುದು ಬಹಳ ಜನರಿಗೆ ತಿಳಿದಿರಲಿಕ್ಕಿಲ್ಲ. ಸ್ವತಃ ಅವರು ತಮ್ಮ ಆಚರಣೆಗಳಿಂದ, ಸಮಾಜ ಯಾರನ್ನು ಅಸ್ಪೃಶ್ಯರು ಎಂದು ಪರಿಗಣಿಸುತ್ತಿತ್ತೋ ಅಂಥವರನ್ನ ಅಪ್ಪಿಕೊಂಡಿದ್ದರು. ಸಾವಿರಾರು




ವರ್ಷಗಳ ಹಿಂದೇ ಅವರ ದೇವಸ್ಥಾನದ ಪ್ರವೇಶಕ್ಕೆ ಇವರು ಆಂದೋಲನ ನಡೆಸಿದ್ದರು ಹಾಗೂ ಯಶಸ್ವಿಯಾಗಿ ಅವರಿಗೆ ದೇವಸ್ಥಾನದ ಪ್ರವೇಶವನ್ನೂ ಮಾಡಿಸಿದರು. ಪ್ರತಿ ಯುಗದಲ್ಲೂ, ನಮ್ಮ ಸಮಾಜದಲ್ಲಿರುವಂಥ ಕೆಟ್ಟದ್ದನ್ನು ಅಳಿಸಲು, ನಮ್ಮ ಸಮಾಜದಿಂದಲೇ ಓರ್ವ ಮಹಾ ಪುರುಷ ಹುಟ್ಟಿ ಬರುತ್ತಿರುವುದು ನಮ್ಮ ಸೌಭಾಗ್ಯ. ಸಂತ ಶ್ರೀ ರಾಮಾನುಜಾಚಾರ್ಯರ 1000 ವರ್ಷದ ಜಯಂತಿಯನ್ನು ಆಚರಿಸುವಾಗ, ಸಮಾಜದ ಒಗ್ಗಟ್ಟಿಗಾಗಿ, ಸಂಘಟನೆಯಲ್ಲಿ ಶಕ್ತಿ ಅಡಗಿದೆ ಎಂಬ ಭಾವನೆಯನ್ನು ಜಾಗೃತಗೊಳಿಸಲು ನಾವು ಅವರಿಂದ ಪ್ರೇರಣೆ ಪಡೆಯಬೇಕು.

ಭಾರತ ಸರ್ಕಾರವೂ ನಾಳೆ ಮೇ 1ಕ್ಕೆ ‘ಸಂತ ರಾಮಾನುಜಾಚಾರ್ಯರ’ ಸ್ಮರಣಾರ್ಥ ಒಂದು ಸ್ಟಾಂಪನ್ನು ಬಿಡುಗಡೆ ಮಾಡಲಿದೆ. ನಾನು ಸಂತ ರಾಮಾನುಜಾಚಾರ್ಯರಿಗೆ ಗೌರವ ಪೂರ್ವ ನಮನಗಳನ್ನು ಸಲ್ಲಿಸುತ್ತೇನೆ, ಶ್ರದ್ಧೆಯನ್ನು ಅರ್ಪಿಸುತ್ತೇನೆ.

ನನ್ನ ಪ್ರಿಯ ದೇಶವಾಸಿಗಳೇ, ನಾಳೆ ಮೇ 1ಕ್ಕೆ ಮತ್ತೊಂದು ಮಹತ್ವವೂ ಇದೆ. ವಿಶ್ವದ ಹಲವಾರು ಭಾಗಗಳಲ್ಲಿ 'ಕಾರ್ಮಿಕ ದಿನಾಚರಣೆ' ಎಂದು ಆಚರಿಸುತ್ತಾರೆ. ಹಾಗೇ 'ಕಾರ್ಮಿಕ ದಿನಾಚರಣೆ' ಎಂದಾಗ, ದುಡಿಮೆ ಬಗ್ಗೆ ಚರ್ಚೆಯಾಗುತ್ತೆ, ಕಾರ್ಮಿಕರ ಬಗ್ಗೆ ಚರ್ಚೆಯಾಗುತ್ತದೆ, ಇಂಥ ಸಮಯದಲ್ಲಿ ನನಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ನೆನಪಾಗುವುದು ಸಹಜ. ಕಾರ್ಮಿಕರಿಗೆ ಇಂದು ಲಭಿಸುತ್ತಿರುವ ಸೌಕರ್ಯಗಳು, ಗೌರವ, ಬಾಬಾ ಸಾಹೇಬರಿಂದಲೇ ಎಂಬುದು ಬಹುಶಃ ಕೆಲವು ಜನರಿಗೆ ಮಾತ್ರ ಗೊತ್ತು, ಅವರಿಗೆ ನಾವು ಕೃತಜ್ಞರಾಗಿದ್ದೇವೆ. ಕಾರ್ಮಿಕರ ಒಳಿತಿಗಾಗಿ ಬಾಬಾ ಸಾಹೇಬರ ಕೊಡುಗೆ ಮರೆಯಲಾಗದು.

ಇಂದು ನಾನು ಬಾಬಾ ಸಾಹೇಬರ ಬಗ್ಗೆ ಮಾತನಾಡಿದಾಗ, ಸಂತ ರಾಮಾನುಜಾಚಾರ್ಯರ ಬಗ್ಗೆ ಮಾತನಾಡಿದಾಗ, 12ನೇ ಶತಮಾನದ, ಕರ್ನಾಟಕದ ಮಹಾನ್ ಸಂತ ಮತ್ತು ಸಮಾಜ ಸುಧಾರಕರಾದ ಜಗದ್ಗುರು ಬಸವೇಶ್ವರರ ನೆನಪಾಗುತ್ತದೆ. ನಿನ್ನೆ ನನಗೆ ಒಂದು ಸಮಾರಂಭಕ್ಕೆ ಹೋಗುವ ಅವಕಾಶ ಲಭಿಸಿತು. ಅವರ ವಚನಾಮೃತಗಳನ್ನು ಲೋಕಾರ್ಪಣೆ ಮಾಡುವ ಸಂದರ್ಭವಾಗಿತ್ತು. 12ನೇ ಶತಮಾನದಲ್ಲಿಯೇ, ಕನ್ನಡ ಭಾಷೆಯಲ್ಲಿ ಅವರು, ಶ್ರಮ ಹಾಗೂ ಶ್ರಮಿಕರ ಬಗ್ಗೆ ದೀರ್ಘ ವಿಚಾರಗಳನ್ನು ಮಂಡಿಸಿದ್ದರು. ಕನ್ನಡದಲ್ಲಿ ಅವರು "ಕಾಯಕವೇ ಕೈಲಾಸ" ಎಂದು ಹೇಳಿದ್ದರು. ಅದರ ಅರ್ಥ – ನೀವು ಕೇವಲ ನಿಮ್ಮ ಪರಿಶ್ರಮದಿಂದ ಮಾತ್ರ, ಆ ಭಗವಂತ ಶಿವನ ಮನೆಯಾದ, ಕೈಲಾಸ ಪ್ರಾಪ್ತಿ ಹೊಂದಬಹುದು ಎಂದು, ಅಂದರೆ ಕರ್ಮವನ್ನು ಸವಿಸುವ ಮೂಲಕವೇ ಸ್ವರ್ಗ ಪ್ರಾಪ್ತಿಯಾಗುತ್ತದೆ.

ಬೇರೆ ವಿಧದಲ್ಲಿ ಹೇಳಬೇಕೆಂದರೆ ಶ್ರಮವೇ ಶಿವ. ನಾನು ಪದೇ ಪದೇ 'ಶ್ರಮೇವ ಜಯತೆ' ಎಂದು ಹೇಳುತ್ತಿರುತ್ತೇನೆ. 'ಡಿಗ್ನಿಟಿ ಆಫ್ ಲೇಬರ್' ಬಗ್ಗೆ ಹೇಳುತ್ತಿರುತ್ತೇನೆ. ನನಗೆ ಭಾರತೀಯ ಕಾರ್ಮಿಕ ಸಂಘದ ಪೋಷಕರು ಮತ್ತು ಚಿಂತಕರು ನೆನಪಿದ್ದಾರೆ, ಅವರು ಕಾರ್ಮಿಕರಿಗಾಗಿ ಬಹಳ ಚಿಂತನೆ ಮಾಡಿದ್ದರು. ಅವರಲ್ಲಿ ಶ್ರೀಮಾನ್ ದತ್ತೋಪಂತ್ ಠೇಂಗಡಿ ಹೇಳುತ್ತಿದ್ದರು – ಒಂದೆಡೆ ಮಾವೋವಾದಿಗಳಿಂದ ಪ್ರೇರಿತವಾದ ವಿಚಾರ "ಜಗತ್ತಿನ ಕಾರ್ಮಿಕರೇ ಒಂದಾಗಿ" ಮತ್ತೊಂದೆಡೆ ದತ್ತೋಪಂತ್ ಠೇಂಗಡಿ ಹೇಳುತ್ತಿದ್ದರು "ಕಾರ್ಮಿಕರೇ ಬನ್ನಿ ಜಗತ್ತನ್ನು ಒಗ್ಗೂಡಿಸೋಣ". ಒಂದೆಡೆ 'ವರ್ಕರ್ಸ್ ಆಫ್ ದ ವರ್ಲ್ಡ್ ಯುನೈಟ್' ಎಂದು ಹೇಳುತ್ತಿದ್ದರೆ, ಭಾರತೀಯ ಅವಲೋಕನದಿಂದ ಹೊರಬಂದಂತಹ ವಿಚಾರಧಾರೆಯೊಂದಿಗೆ ದತ್ತೋಪಂತ್ ಠೇಂಗಡಿ ಹೇಳುತ್ತಿದ್ದರು 'ವರ್ಕರ್ಸ್ ಯುನೈಟ್ ದ ವರ್ಲ್ಡ್' ಎಂದು. ಇವತ್ತು ನಾನು ಕಾರ್ಮಿಕರನ್ನು ನೆನಸಿಕೊಂಡಾಗ ದತ್ತೋಪಂತ್ ಠೇಂಗಡಿರವರ ನೆನಪು ಬರುವುದೂ ಸಹಜ.



ನನ್ನ ಪ್ರಿಯ ದೇಶವಾಸಿಗಳೇ, ಕೆಲವು ದಿನಗಳ ನಂತರ ನಾವು ಬುದ್ಧ ಪೌರ್ಣಮೆಯನ್ನು ಆಚರಿಸಲಿದ್ದೇವೆ. ವಿಶ್ವದಾದ್ಯಂತ ಭಗವಾನ್ ಬುದ್ಧನ ಅನುಯಾಯಿಗಳು ಈ ಹಬ್ಬ ಆಚರಿಸುತ್ತಾರೆ. ಇವತ್ತು ವಿಶ್ವ ಎದುರಿಸುತ್ತಿರುವ ಸಮಸ್ಯೆಗಳಾದ ಹಿಂಸೆ, ಯುದ್ಧ, ನೈಸರ್ಗಿಕ ವಿಕೋಪಗಳು, ಮತ ಕಲಹಗಳು ಇತ್ಯಾದಿಗಳ ವಾತಾವರಣ ನೋಡಿದಾಗ, ಬುದ್ಧನ ವಿಚಾರಧಾರೆಗಳು ಬಹಳ ಸೂಕ್ತ ಎನಿಸುತ್ತವೆ. ಅದರಲ್ಲೂ ನಮ್ಮ ಭಾರತದಲ್ಲಿ ಅಶೋಕನ ಜೀವನ, ಯುದ್ಧದಿಂದ ಬುದ್ಧನ ಯಾತ್ರೆಯವರೆಗೂ ಆದಂತಹ ಉತ್ತಮ ಸಂಕೇತಗಳಿವೆ. ಬುದ್ಧ

ಪೌರ್ಣಮಿಯ ಈ ಮಹತ್ವದ ಉತ್ಸವದ ಸಂದರ್ಭದಲ್ಲಿ, ವಿಶ್ವ ಸಂಸ್ಥೆ ವೆಸಾಕ್ ಡೇ ಆಚರಿಸುತ್ತಿದ್ದಾರೆ ಎಂಬುದು ನನ್ನ ಸೌಭಾಗ್ಯವಾಗಿದೆ. ಈ ವರ್ಷ ಇದು ಶ್ರೀಲಂಕಾದಲ್ಲಿ ನಡೆಯಲಿದೆ. ಇಂಥ ಪವಿತ್ರ ಹಬ್ಬದಂದು ನಾನು ಶ್ರೀಲಂಕಾದಲ್ಲಿ ಭಗವಾನ್ ಬುದ್ಧರಿಗೆ ನನ್ನ ಶ್ರದ್ಧೆಯನ್ನು ಅರ್ಪಿಸಲು ಒಂದು ಅವಕಾಶ ದೊರೆಯಲಿದೆ. ಅವರ ನೆನಪುಗಳನ್ನು ಮೆಲುಕು ಹಾಕಲು ಅವಕಾಶ ಇದಾಗಲಿದೆ.

ನನ್ನ ಪ್ರಿಯ ದೇಶವಾಸಿಗಳೇ, ಭಾರತದಲ್ಲಿ ಎಂದಿಗೂ 'ಸಬ್ ಕಾ ಸಾಥ್ – ಸಬ್ ಕಾ ವಿಕಾಸ್' ಮಂತ್ರದೊಂದಿಗೆ ಮುಂದುವರೆಯಲು ಪ್ರಯತ್ನ ಮಾಡಿದ್ದೇನೆ. ಹಾಗೇ ನಾವು 'ಸಬ್ ಕಾ ಸಾಥ್ – ಸಬ್ ಕಾ ವಿಕಾಸ್' ಎಂದಾಗ ಅದು ಕೇವಲ ಭಾರತಕ್ಕೆ ಮಾತ್ರ ಸೀಮಿತವಲ್ಲ, ಅದನ್ನು ವಿಶ್ವ ಮಟ್ಟದಲ್ಲಿ ಅಳವಡಿಸುವ ಪ್ರಯತ್ನ ಮಾಡುತ್ತಿದ್ದೇವೆ. ಅದರಲ್ಲೂ ವಿಶೇಷವಾಗಿ ನಮ್ಮ ನೆರೆ ಹೊರೆಯ ದೇಶಗಳಿಗಾಗಿ ಪ್ರಯತ್ನಿಸುತ್ತಿದ್ದೇವೆ. ನಮ್ಮ ನೆರೆ ಹೊರೆಯ ದೇಶಗಳ ಸಹಕಾರವೂ ಇರಲಿ, ನಮ್ಮ ಅಕ್ಕ ಪಕ್ಕದ ದೇಶಗಳ ಬೆಳವಣಿಗೆಯೂ ಆಗಲಿ. ಹಲವಾರು ಯೋಜನೆಗಳು ನಡೆಯುತ್ತಿವೆ.

ಮೇ 5ರಂದು ಭಾರತ, ದಕ್ಷಿಣ ಏಶಿಯಾ ಉಪಗ್ರಹ ಉಡ್ಡಯನವನ್ನು ಮಾಡಲಿದೆ. ಈ ಉಪಗ್ರಹಕ್ಕಿರುವ ಸಾಮರ್ಥ್ಯ ಮತ್ತು ಸೌಲಭ್ಯಗಳು ದಕ್ಷಿಣ ಏಶಿಯಾದ ಆರ್ಥಿಕ ಮತ್ತು ಅಭಿವೃದ್ಧಿಯ ಆದ್ಯತೆಗಳನ್ನು ಪೂರೈಸಲು ಸಹಾಯ ಮಾಡುತ್ತದೆ. ಅದು ನೈಸರ್ಗಿಕ ಸಂಪನ್ಮೂಲಗಳ ಮ್ಯಾಪಿಂಗ್ ಆಗಿರಬಹುದು, ಟೆಲಿ–ಮೆಡಿಸಿನ್ ಇರಬಹುದು, ಶೈಕ್ಷಣಿಕ ಕ್ಷೇತ್ರವಿರಬಹುದು, ಆಳವಾದ ಐ ಟಿ ಕನೆಕ್ಟಿವಿಟಿ ಇರಬಹುದು ಅಥವಾ ಜನರಿಂದ ಜನರಿಗೆ ಸಂಪರ್ಕದ ಪ್ರಯತ್ನವಿರಬಹುದು. ದಕ್ಷಿಣ ಏಶಿಯಾದ ಈ ಉಪಗ್ರಹ ನಾವು ಎಲ್ಲ ಕ್ಷೇತ್ರಗಳಲ್ಲೂ ಪೂರ್ಣಪ್ರಮಾಣದಲ್ಲಿ ಮುಂದುವರೆಯಲು ಸಹಾಯಕವಾಗಲಿದೆ. ಸಂಪೂರ್ಣ ದಕ್ಷಿಣ ಏಶಿಯಾದೊಂದಿಗೆ ಸಹಕಾರ ಬೆಳೆಸಲು ಇದು ಭಾರತದ ಒಂದು ಮಹತ್ವಪೂರ್ಣ ಹೆಜ್ಜೆಯಾಗಲಿದೆ ಮತ್ತು ಅತ್ಯಮೂಲ್ಯವಾದ ಕೊಡುಗೆಯಾಗಲಿದೆ. ದಕ್ಷಿಣ ಏಷಿಯಾದ ಬಗ್ಗೆ ನಮಗಿರುವ ಬದ್ಧತೆಯನ್ನು ಸಾರಲು ಇದೊಂದು ಉತ್ತಮ ಉದಾಹರಣೆಯಾಗಿದೆ.

ದಕ್ಷಿಣ ಏಶಿಯಾ ಉಪಗ್ರಹದೊಂದಿಗೆ ಸಂಪರ್ಕ ಬೆಳೆಸಿರುವಂಥ ದಕ್ಷಿಣ ಏಷಿಯಾದ ಎಲ್ಲಾ ದೇಶಗಳಿಗೂ ನಾನು ಈ ಮಹತ್ವಪೂರ್ಣ ಪ್ರಯತ್ನಕ್ಕೆ ಸ್ವಾಗತ ಕೋರುತ್ತೇನೆ ಮತ್ತು ಶುಭ ಹಾರೈಸುತ್ತೇನೆ.

ನನ್ನ ಪ್ರಿಯ ದೇಶವಾಸಿಗಳೇ, ಬಿಸಿಲು ಬಹಳ ಇದೆ, ನಿಮ್ಮವರನ್ನು ಕಾಪಾಡಿ, ನಿಮ್ಮನ್ನೂ ನೀವು ಕಾಪಾಡಿಕೊಳ್ಳಿ. ಅನಂತ ಅನಂತ ಶುಭಾಶಯಗಳು. ಧನ್ಯವಾದ. ❑

## ಇ ಸಂಪರ್ಕ

ಸರ್ಕಾರ ಮತ್ತು ನಾಗರಿಕರ ನಡುವೆ ನೇರ ಸಂವಹನ ಉತ್ತಮ ಪಡಿಸುವ ಉದ್ದೇಶದಿಂದ ಇ ಸಂಪರ್ಕ ವ್ಯವಸ್ಥೆ ಪ್ರಾರಂಭಿಸಲಾಗಿದೆ. ಸರ್ಕಾರ ಕೈಗೊಂಡಿರುವ ವಿವಿಧ ಕಾರ್ಯಕ್ರಮ, ಉಪಕ್ರಮಗಳನ್ನು ತಿಳಿಸುವುದು ಈ ವೇದಿಕೆಯ ಉದ್ದೇಶ. ಇ ಸಂಪರ್ಕ ಪೋರ್ಟಲ್‌ಗೆ ಭಾರತ ಸರ್ಕಾರ ಮೇ 2016ರಲ್ಲಿ ಚಾಲನೆ ನೀಡಿದ್ದು ಇದರ ಮೂಲಕ ಮೇಲ್, ಡೈಲಿಂಗ್ ಮತ್ತು ಎಸ್‌ಎಂಎಸ್ ರೂಪದಲ್ಲಿ ಸಂವಹನ ನಡೆಸುವ ಸೌಕರ್ಯ ಇದೆ. ಇ ಸಂಪರ್ಕದ ಮೂಲಕ 404 ಪ್ರಚಾರಾಂದೋಲನ ನಡೆಸಲಾಗಿದ್ದು 230 ಕೋಟಿ ಇ ಮೇಲ್‌ಗಳನ್ನು ಕಳಿಸಲಾಗಿದೆ. ಇ ಸಂಪರ್ಕ, ಪ್ರಚಾರಾಂದೋಲನಗಳ ಅಂಕೀಕೃತ ಸಕಾರಾತ್ಮ ಸಂವಹನ ಪರಿಕಲ್ಪನೆಯಾಗಿದೆ. ಬಹುಸ್ವರೂಪದ ಈ ವೇದಿಕೆ, ಸರ್ಕಾರ ನಾಗರಿಕರ ನಡುವೆ ಅಡೆ ತಡೆ ಇಲ್ಲದ ಸಂವಹನಕ್ಕೆ ಅವಕಾಶ ಕಲ್ಪಿಸುತ್ತದೆಯಲ್ಲದೆ ಸಂಬಂಧಪಟ್ಟ ಅಧಿಕಾರಿ, ಪ್ರತಿನಿಧಿಗಳು ಮತ್ತು ನಾಗರಿಕರ ಮಾಹಿತಿ ಮೂಲ ರೂಪಿಸುತ್ತದೆ. ಅಪಾಯ ಸಂದರ್ಭದ ನಿರ್ವಹಣೆ, ವಾರದಲ್ಲಿ ಒಂದು ದಿನ

## ನಿಮಗಿದು ತಿಳಿದಿದೆಯೇ?

ಪೆಟ್ರೋಲ್, ಡೀಸೆಲ್ ವಾಹನ ಬಳಕೆಯಿಂದ ದೂರವಿರುವಂತೆ ಮನವೊಲಿಸುವ ಕರೆ ಮೊದಲಾದವು ಆಂದೋಲನಗಳಲ್ಲಿ ಸೇರಿವೆ. ಪ್ರಧಾನಿಯವರ ಮನ್‌ಕೀ ಬಾತ್ ಕುರಿತ ದೃಷ್ಟಿಕೋನವನ್ನು ಇದು ಪ್ರತಿಬಿಂಬಿಸುತ್ತದೆ.

### ಇ ಸಂಪರ್ಕ ಪೋರ್ಟಲ್‌ನ ಗುಣಲಕ್ಷಣ ಹೀಗಿವೆ

* ನಾಗರಿಕರಿಗೆ, ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಸರ್ಕಾರಿ ನೌಕರರಿಗೆ ಮೇಲ್, ಎಸ್‌ಎಂಎಸ್ ಮತ್ತು ಔಟ್ ಬೌಂಡ್ ಡಯಲಿಂಗ್ ಮೂಲಕ ಮಾಹಿತಿ ಮತ್ತು ಸಾರ್ವಜನಿಕ ಸೇವೆ ಸಂದೇಶ ರವಾನೆ
* ಇದೇ ರೀತಿ ಗ್ರಾಹಕ ನಿರ್ದಿಷ್ಟ ಎಸ್‌ಎಂಎಸ್ ಸಂದೇಶ ರವಾನೆ
* ಚುನಾಯಿತ ಪ್ರತಿನಿಧಿಗಳು ಮತ್ತು ಸರ್ಕಾರ ಅಧಿಕಾರಿಗಳ ಪ್ರಚಲಿತ ಮಾಹಿತಿಗೆ ಅವಕಾಶವಿರುತ್ತದೆ.
* ಒಂದೊಂದೆ ಮಾಹಿತಿ ಅಥವಾ ಎಲ್ಲ ಮಾಹಿತಿಗಳನ್ನು ಸಾಮೂಹಿಕವಾಗಿ ಅಪ್‌ಲೋಡ್ ಮಾಡಬಹುದಾಗಿದೆ.
* ಆಂದೋಲನ ಮತ್ತು ಸಂಬಂಧಪಟ್ಟ ಅಧಿಕಾರಿ ವಿವರ ಒಳಗೊಂಡ ಡ್ಯಾಶ್ ಬೋರ್ಡ್‌ಗೆ ಅವಕಾಶ
* ಇ ಸಂಪರ್ಕ ದತ್ತಾಂಶಕ್ಕೆ ವ್ಯಕ್ತಿಗತ ಬಳಕೆದಾರರು ಚಂದಾದಾರಬಹುದು.

### ಪ್ರಯೋಜನಗಳು

* ಕೇಂದ್ರ–ರಾಜ್ಯ ಸರ್ಕಾರಿ ಅಧಿಕಾರಿಗಳಿಗೆ ಅಧಿಕೃತ ಮಾಹಿತಿ ನೀಡಲು ಬಳಸಬಹುದು.
* ಸದ್ಯದ ನೀತಿ, ಸರ್ಕಾರದ ನಿರ್ಧಾರ, ಹೊಸ ಯೋಜನೆಗಳ ಬಗ್ಗೆ ಗ್ರಾಹಕರ ಅವಶ್ಯಕತೆ ಆಧರಿಸಿ ಮಾಹಿತಿ ನೀಡುವುದರಿಂದ ಸಂವಹನ ದಕ್ಷತೆ ಸುಧಾರಿಸುತ್ತದೆ.

ರಾಷ್ಟ್ರೀಯ ಅಥವಾ ಸಾರ್ವಜನಿಕ ಹಿತಾಸಕ್ತಿಯ ಮಾಹಿತಿ ಹಂಚಿಕೆಯಾಗುವ ಕಾರಣ, ಸರ್ಕಾರದ ಯೋಜನೆಗಳ ಪ್ರಯೋಜನವನ್ನು ಸಕಾಲದಲ್ಲಿ ಪಡೆಯಬಹುದು. ❑

(34ನೇ ಪುಟದಿಂದ)

## ಕೃಷಿ ಕ್ಷೇತ್ರದಲ್ಲಿ ಒಳಸುರಿಗಳ ಪಾತ್ರ

ಕೃಷಿ ಉತ್ಪನ್ನಗಳ ಹೆಚ್ಚಳದಲ್ಲಿ, ಅದರಲ್ಲೂ ಹಸಿರು ಕ್ರಾಂತಿ ಬಳಿಕ ಅಪಾರ ಪರಿಣಾಮ ಬೀರಿವೆ. ಜನಸಂಖ್ಯೆ ಮತ್ತು ಆದಾಯದ ಹೆಚ್ಚಳ, ಭೂಮಿ, ನೀರು ಸೇರಿದಂತೆ ನಾನಾ ಸ್ವಾಭಾವಿಕ ಸಂಪನ್ಮೂಲಗಳ ಕೊರತೆಯಿಂದಾಗಿ ಉತ್ಪಾದನೆ ಹೆಚ್ಚಳಕ್ಕೆ ತಂತ್ರಜ್ಞಾನ ಮತ್ತು ವಿಜ್ಞಾನದ ಮೊರೆ ಹೋಗಬೇಕಾಗಿ ಬಂದಿದೆ. ಇದು ಹಲವು ಆವಿಷ್ಕಾರ–ಸಂಶೋಧನೆಗೆ ಕಾರಣವಾಗಿದ್ದು, ತಳಿ ತಂತ್ರಜ್ಞಾನ–ಹೆಚ್ಚು ಇಳುವರಿ ನೀಡುವ ಬೀಜಗಳು (ಹೆಚ್‌ವೈವಿ), ರಸಗೊಬ್ಬರಗಳ ಮೂಲಕ ಸಸ್ಯಗಳ ಪೋಷಣೆ, ನೀರಿನ ಬಳಕೆ–ನಿರ್ವಹಣೆಯಲ್ಲಿ ಕ್ಷಮತೆ, ಕೀಟನಾಶಕಗಳ ಬಳಕೆಯಿಂದ ಕೀಟ ನಿಯಂತ್ರಣ ಹಾಗೂ ಯಂತ್ರೋಪಕರಣ–ಸಾಧನಗಳ ಬಳಕೆಯಿಂದ ಹೆಚ್ಚು ಮಾನವ ಶ್ರಮ ಉಳಿಕೆ ಸಾಧ್ಯವಾಗಿದೆ. ಈ ಒಳಸುರಿಗಳ ಬೇಡಿಕೆಯು ನಾನಾ ಉದ್ಯಮಗಳು, ಅಂದರೆ, ಬೀಜ, ರಸ ಗೊಬ್ಬರ, ನೀರಾವರಿ ಸಾಧನ–ಸಲಕರಣೆ, ಕೃಷಿ ರಸಾಯನಿಕ ತಯಾರಿಕೆ ಉದ್ಯಮದ ಬೆಳವಣಿಗೆಗೆ ಕಾರಣವಾಗಿದೆ. ಇವು ಕೃಷಿಗೆ ಭಾರಿ ಕೊಡುಗೆ ನೀಡುತ್ತಿವೆ. 2010–2011ರವರೆಗೆ ಬಹುತೇಕ ಕೃಷಿ ಒಳಸುರಿಗಳ ಪ್ರಗತಿ ದರ ಆರೋಗ್ಯಕರವಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ಕೆಲವು ಒಳಸುರಿಗಳ ಬೆಳವಣಿಗೆ ದರ ಕುಸಿದಿದೆ. ನೀರಾವರಿ ಕ್ಷೇತ್ರ ಆರೋಗ್ಯಕರ ಬೆಳವಣಿಗೆ ಕಾಣುತ್ತಿದ್ದು (ಶೇ 1.7 ರಿಂದ ಶೇ 2), ಕೊಳವೆ ಬಾವಿ ಮೂಲಕ ನೀರು ಪೂರೈಕೆ ಶೇ. 3–4 ರಷ್ಟು ಇರುವುದು ಇದಕ್ಕೆ ಕಾರಣ. ಇತ್ತೀಚಿನ ವರ್ಷಗಳಲ್ಲಿ ರಸ ಗೊಬ್ಬರಗಳು ಮತ್ತು ಪ್ರಮಾಣಿತ ಬೀಜಗಳ ಬಳಕೆ ಕುಸಿದಿದೆ. 1980ರವರೆಗೆ ಕೃಷಿ ಉಪಕರಣ ತಯಾರಿಕೆ ಕ್ಷೇತ್ರದ ಬೆಳವಣಿಗೆ ಉತ್ತಮವಾಗಿದ್ದು, ಇತ್ತೀಚೆಗೆ ನಿಧಾನಗೊಂಡಿದೆ. ಕೃಷಿ ಭೂಮಿಯನ್ನು ಬೇರೆ ಉದ್ದೇಶಕ್ಕೆ ಬಳಸುವುದನ್ನು ಕಾರ್ಯನೀತಿಗಳ ಮೂಲಕ ತಡೆಯಬೇಕಿದೆ. ಜತೆಗೆ, ಇಳುವರಿ ಹೆಚ್ಚಳಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕಿದೆ. ಈ ಕ್ಷೇತ್ರ ಕಾರ್ಮಿಕರ ಕೊರತೆಯಿಂದ ಬಳಲುತ್ತಿದ್ದು, ಯಂತ್ರಗಳ ಬಳಕೆ ಮತ್ತು ಯಾಂತ್ರೀಕರಣದಿಂದ ಮಾನವ ಶ್ರಮ ಕುಗ್ಗಿಸಿ, ಉತ್ಪಾದಕತೆ ಅಧಿಕಗೊಳಿಸಬೇಕಿದೆ. ನೀರಾವರಿ ಕ್ಷೇತ್ರದಲ್ಲಿ ಸಾಧನೆಯಾಗಿದ್ದರೂ, ನೀರು ಅಮೂಲ್ಯ ಮತ್ತು ಕ್ಷಯಿಸುವ ಸಂಪನ್ಮೂಲವಾದ್ದರಿಂದ, ಅದರ ಕ್ಷಮತೆಯ ಬಳಕೆಗೆ ಅಗತ್ಯವಿರುವುದನ್ನೆಲ್ಲ ಮಾಡಬೇಕಿದೆ. ರಸಗೊಬ್ಬರದ ಬಳಕೆಯಲ್ಲಿನ ಕುಸಿತವು ನೆಲದ ಫಲವತ್ತತೆ ಮತ್ತು ಉತ್ಪಾದಕತೆ ಕಡಿಮೆಯಾಗಲು ಕಾರಣವಾಗಲಿದೆ. ರಸಗೊಬ್ಬರ ಕಾರ್ಯನೀತಿಯಲ್ಲಿ ಸುಧಾರಣೆ ಅಗತ್ಯವಿದ್ದು, ಸಬ್ಸಿಡಿ ನೀತಿಯಲ್ಲಿ ಬದಲಾವಣೆ ತರಬೇಕಿದೆ. ಬೀಜೋತ್ಪಾದನೆ ಕ್ಷೇತ್ರದಲ್ಲಿ ಉನ್ನತ ತಂತ್ರಜ್ಞಾನದ ಅಗತ್ಯವಿದ್ದು, ಜೈವಿಕ ತಂತ್ರಜ್ಞಾನವು ನಾನಾ ಸಮಸ್ಯೆಗೆ ಪರಿಹಾರ ಒದಗಿಸಬಲ್ಲದು. ತರಕಾರಿ, ಹಣ್ಣು ಮತ್ತು ಮಾಂಸಕ್ಕಾಗಿ ಪ್ರಾಣಿಗಳ ಸಾಕಣೆ ಹೆಚ್ಚಳಗೊಂಡಿದ್ದು, ಈ ಕ್ಷೇತ್ರದ ಅಗತ್ಯಗಳನ್ನು ಪರಿಗಣಿಸಿ ಅಗತ್ಯ ನೆರವು ನೀಡಬೇಕಿದೆ. ❑

# ವಾರ್ತಾ ವಿಶೇಷ



**ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಬಳಕೆ ಮೂಲಕ ಪಂಚಾಯತ್ ಸಂಸ್ಥೆಗಳನ್ನು ಸಶಕ್ತಗೊಳಿಸಿದ ಸಾಧನೆಗಾಗಿ ಕರ್ನಾಟಕ ದೇಶದಲ್ಲೇ ಪ್ರಥಮ ಸ್ಥಾನ ಪಡೆದುಕೊಂಡಿದೆ. ಲಕ್ನೋದಲ್ಲಿ ರಾಷ್ಟ್ರೀಯ ಪಂಚಾಯತ್ ದಿನಾಚರಣೆ ಸಂದರ್ಭದಲ್ಲಿ ನಡೆದ ಸಮಾರಂಭದಲ್ಲಿ ಈ ಕುರಿತ ಇ-ಪುರಸ್ಕಾರ (ವರ್ಗ-1)ವನ್ನು ಕೇಂದ್ರ ಪಂಚಾಯತ್ ಖಾತೆ ಸಚಿವ ಶ್ರೀ ನರೇಂದ್ರ ಸಿಂಗ್ ತೋಮರ್, ಕರ್ನಾಟಕ ಪಂಚಾಯತ್ ರಾಜ್ ಖಾತೆ ಸಚಿವ ಶ್ರೀ ಹೆಚ್.ಕೆ. ಪಾಟೀಲ್‌ರವರಿಗೆ ಪ್ರದಾನ ಮಾಡಿದರು. ಚಿತ್ರದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಶ್ರೀ ಯೋಗಿ ಆದಿತ್ಯನಾಥ್, ಕರ್ನಾಟಕ ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ. ನಾಗಾಂಬಿಕ ದೇವಿ ಅವರನ್ನು ಚಿತ್ರದಲ್ಲಿ ಕಾಣಬಹುದು.** ❑

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕಂಪೆನಿಯಾದ ವಿಪ್ರೊ ಸೇರಿದಂತೆ ಆರು ಖಾಸಗಿ ಸಂಸ್ಥೆಗಳು ಬೆಂಗಳೂರು ನಗರದಲ್ಲಿನ ಏಳು ಕೆರೆಗಳನ್ನು ಅಭಿವೃದ್ಧಿ ಪಡಿಸಲು ಮುಂದೆ ಬಂದಿವೆ.

ಬಯೋಕಾನ್ ಕಂಪೆನಿಯು ಹೆಬ್ಬಗೋಡಿ ಕೆರೆಯನ್ನು ಪುನಶ್ಚೇತನಗೊಳಿಸಲು ಮುಂದೆ ಬಂದರೆ, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ದೊಡ್ಡಬೊಮ್ಮಸಂದ್ರ ಕೆರೆಗೆ ಮರುಜೀವ ನೀಡಲು ಮುಂದಾಗಿದೆ.




ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಕೆಂಗೇರಿ ಮತ್ತು ವೀರಸಂದ್ರ ಕೆರೆಗಳನ್ನು ಹಾಗೂ ವಿಪ್ರೊ ಕಂಪೆನಿ ಮಾರಗೊಂಡನಹಳ್ಳಿ ಕೆರೆಗೆ ಹೊಸ ರೂಪ ನೀಡಲು ನಿರ್ಧರಿಸಿವೆ. ಗಾರ್ಡನ್ ಸಿಟಿ ಕಾಲೇಜ್ ಭಟ್ಟರ ಹಳ್ಳಿ ಕೆರೆ ಮತ್ತು 'ವೈಟ್‌ಫೀಲ್ಡ್ ರೈಸಿಂಗ್' ನಿವಾಸಿಗಳ ಸಮೂಹ ವರ್ತೂರು ಕೆರೆಯನ್ನು ಅಭಿವೃದ್ಧಿ ಪಡಿಸಲು ಮುಂದಾಗಿದೆ.

ಕೆರೆಗಳನ್ನು ಅಭಿವೃದ್ಧಿ ಪಡಿಸಲು ಈಗಾಗಲೇ ರೂ. 61.75 ಕೋಟಿಗಳನ್ನು ಈ ಸಂಸ್ಥೆಗಳು ಮೀಸಲಿರಿಸಿವೆ. ಇದರೊಂದಿಗೆ ಮೈಸೂರಿನಲ್ಲಿರುವ ಹೆಬ್ಬಾಳ ಕೆರೆಯನ್ನು ಇನ್ಫೋಸಿಸ್ ಮತ್ತು ಮಂಗಳೂರಿನಲ್ಲಿನ ಬಾಗುಂಡಿ ಕೆರೆಯನ್ನು ನವೀಕರಣಗೊಳಿಸಲು ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೋಲಿಯಂ ಲಿಮಿಟೆಡ್ (ಎಂಆರ್‌ಪಿಎಲ್) ಕಂಪೆನಿಗಳು ಅಣಿಯಾಗಿವೆ. ಈ ಕಂಪೆನಿಗಳು ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ (ಕೆಎಲ್‌ಸಿಡಿಎ)ದೊಂದಿಗೆ ಎರಡು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿವೆ. ಅಲ್ಲದೇ ಸ್ಥಳೀಯ ಸಮುದಾಯಗಳ ಸಹಕಾರದೊಂದಿಗೆ ಕೆರೆಗಳ ನವೀಕರಣ ಕಾರ್ಯ ಕೈಗೆತ್ತಿಕೊಳ್ಳುತ್ತಿವೆ. ಕೆಲವು ಕೆರೆಗಳ ಅಭಿವೃದ್ಧಿಗೆ ಈಗಾಗಲೇ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲಾಗಿದೆ. ಕೆರೆಗಳ ಅಭಿವೃದ್ಧಿಗಾಗಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್)ಯಡಿ ರೂ 94 ಕೋಟಿ ದೇಣಿಗೆ ಸಂಗ್ರಹಿಸಿದ್ದೇವೆ. ಎಲ್ಲ ಒಪ್ಪಂದಗಳಿಗೆ ಸಚಿವ ಸಂಪುಟದ ಒಪ್ಪಿಗೆ ಸಿಕ್ಕಿದೆ ಎಂದು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಶ್ರೀ ಜಿ. ವಿದ್ಯಾಸಾಗರ್ ತಿಳಿಸಿದ್ದಾರೆ.

* * *

ಬಹಳ ದಿನಗಳಿಂದ ಎದುರು ನೋಡುತ್ತಿದ್ದ ರಿಯಲ್ ಎಸ್ಟೇಟ್ (ಆರ್‌ಇಆರ್‌ಎ) ಕಾಯ್ದೆಯು ಮೇ 1 ರಂದು ಜಾರಿಗೆ ಬಂದಿದೆ. ಮನೆ ಖರೀದಿಸುವವರನ್ನು ರಕ್ಷಿಸಲು ಮತ್ತು ಪ್ರಾಮಾಣಿಕ ಖಾಸಗಿ ಉದ್ಯಮಿಗಳನ್ನು ಉತ್ತೇಜಿಸಲು ಅಗತ್ಯವಾದ ನಿಯಮಗಳೂ ಈ ಕಾಯ್ದೆಯಲ್ಲಿ ಇವೆ. ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಮಸೂದೆ – 2016 ಖಲೆದ ವರ್ಷದ ಮಾರ್ಚ್‌ನಲ್ಲಿಯೇ ಸಂಸತ್ತಿನಲ್ಲಿ ಅಂಗೀಕಾರವಾಗಿದೆ. ಕಾಯ್ದೆಯ ಎಲ್ಲ 92 ಸೆಕ್ಷನ್‌ಗಳು ಮೇ 1 ರಿಂದ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬಂದಿವೆ.

'ಕಾಯ್ದೆಯು ರಿಯಲ್ ಎಸ್ಟೇಟ್ ವಹಿವಾಟಿನ ವಿಶ್ವಾಸಾರ್ಹತೆ, ಪಾರದರ್ಶಕತೆ ಮತ್ತು ದಕ್ಷತೆ ಹೆಚ್ಚಿಸಲಿದೆ. ಖರೀದಿದಾರ ಮತ್ತು ಗೃಹ ನಿರ್ಮಾಣ ವಸತಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಕಟ್ಟಡ ನಿರ್ಮಾಣಗಾರರ ಹಕ್ಕುಗಳು ಮತ್ತು ಕರ್ತವ್ಯಗಳನ್ನು ವ್ಯಾಖ್ಯಾನಿಸಲಿದೆ' ಎಂದು ಕೇಂದ್ರ ಸಚಿವ ಎಂ. ವೆಂಕಯ್ಯ ನಾಯ್ಡು



ತಿಳಿಸಿದ್ದಾರೆ. ಗ್ರಾಹಕರ ಹಕ್ಕು ರಕ್ಷಣೆ ಮತ್ತು ವಹಿವಾಟಿನಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವ ಭರವಸೆ ನೀಡುವ ಕಾಯ್ದೆ ಜಾರಿ ಸಂಬಂಧ ಇದುವರೆಗೆ ಕೇವಲ 13 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮಾತ್ರ ಅಧಿಸೂಚನೆ ಹೊರಡಿಸಿವೆ. ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ರಚಿಸಿ ನಿಯಮಗಳನ್ನು ಪ್ರಕಟಿಸಿದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಇಲ್ಲ.

* * *

ಅಮೆರಿಕ ಮತ್ತು ಯೂರೋಪ್‌ಗಳಲ್ಲಿ ಸಾವಯವ ಕೃಷಿ ಉತ್ಪನ್ನಗಳ ಬೇಡಿಕೆ ಹೆಚ್ಚುತ್ತಿದ್ದು, ಅಲ್ಲಿನ ಮಾರುಕಟ್ಟೆಗೆ ಮೌಲ್ಯ ವರ್ಧಿತ ಉತ್ಪನ್ನಗಳನ್ನು ರಫ್ತು ಮಾಡಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ರಾಜ್ಯ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ರೈತರಿಗೆ ಕರೆ ನೀಡಿದ್ದಾರೆ. ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಾವಯವ ಮತ್ತು ಸಿರಿಧಾನ್ಯಗಳ ರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಅಮೆರಿಕದಲ್ಲಿ ಶೇ. 47 ಮತ್ತು ಮತ್ತು ಯುರೋಪ್‌ನಲ್ಲಿ ಶೇ. 32 ರಷ್ಟು ಜನ ಸಾವಯವ ಉತ್ಪನ್ನ ಬಳಸುತ್ತಿದ್ದಾರೆ. ಇದರ ಬಳಕೆ ಜಾಗತಿಕವಾಗಿ ಶೇ. 10 ರಷ್ಟು ಏರಿಕೆಯಾಗಿದೆ ಎಂದರು.

ಸಾವಯವ ಕಾಳು ಮೆಣಸು ಮತ್ತು ಬ್ಯಾಡಗಿ ಮೆಣಸಿನಕಾಯಿಗೆ ವಿದೇಶಗಳಲ್ಲಿ ಬಾರಿ ಬೇಡಿಕೆ ಇದೆ. ಇದಕ್ಕಾಗಿ ‘ಸಂಬಾರ ಅಭಿವೃದ್ಧಿ ಪಾರ್ಕ್’ವೊಂದನ್ನು ಸ್ಥಾಪಿಸಬೇಕು. ಇದರಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ಇರಬೇಕು. ಇದಕ್ಕೆ ಕೇಂದ್ರ ಸರ್ಕಾರವೂ ನೆರವು ನೀಡುತ್ತದೆ ಎಂದು ಹೇಳಿದರು.

ಅಮೆರಿಕ ಮತ್ತು ಯುರೋಪ್‌ಗಳಿಗೆ ಪ್ರಮಾಣೀಕೃತ ಸಾವಯವ ಉತ್ಪನ್ನಗಳನ್ನು ರಫ್ತು ಮಾಡಲು ಒಪ್ಪಂದ ಮಾಡಿಕೊಳ್ಳಲಾಗಿದೆ. ಜಪಾನ್, ಕೆನಡಾ, ದಕ್ಷಿಣ ಕೊರಿಯಾ ಮತ್ತು ತೈವಾನ್‌ಗಳಿಗೆ ರಫ್ತು ಮಾಡಲು ಸದ್ಯವೇ ಒಪ್ಪಂದ ಮಾಡಿಕೊಳ್ಳಲಾಗುವುದು ಎಂದರು. ಕೇಂದ್ರ ಕೃಷಿ ಇಲಾಖೆ ಕಾರ್ಯದರ್ಶಿ ಅಶೋಕ್ ದಳವಾಯಿ ಮಾತನಾಡಿ, ಕೇಂದ್ರ ಸರ್ಕಾರ ‘ಕೃಷಿ ಉತ್ಪನ್ನ ಮತ್ತು ಜಾನುವಾರು ಮಾರುಕಟ್ಟೆ ಕಾಯ್ದೆ’ಯೊಂದನ್ನು ರೂಪಿಸುತ್ತಿದೆ ಎಂದರು.

* * *

ಉದ್ದೇಶಿತ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯು ಭಾರತದ ಆರ್ಥಿಕ ಪ್ರಗತಿಗೆ ಗಮನಾರ್ಹವಾಗಿ ನೆರವಾಗಲಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಭಿಪ್ರಾಯಪಟ್ಟಿದೆ.

‘ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಮಾರುಕಟ್ಟೆಯಾಗಿ ಹೊರಹೊಮ್ಮಿದೆ. ಮುಂದೆಯೂ ಆ ವೇಗವನ್ನು ಉಳಿಸಿಕೊಳ್ಳಲಿದೆ ಎಂದು ಐಎಂಎಫ್ ಉಪ ವ್ಯವಸ್ಥಾಪಕ ನಿರ್ದೇಶಕ ಶ್ರೀ ತಾವೊ ಝಾಂಗ್ ಆಶಯ ವ್ಯಕ್ತಪಡಿಸಿದ್ದಾರೆ. ‘ಭಾರತದ ಮಧ್ಯಮಾವಧಿ ಆರ್ಥಿಕ ಪ್ರಗತಿ ಶೇ. 8 ರ ಗಡಿಯನ್ನು ತಲುಪಲು ಜಿಎಸ್‌ಟಿ ನೆರವಾಗಲಿದೆ. ಉತ್ಪಾದನೆ ಹೆಚ್ಚಿಸುವ ಜತೆಗೆ ಸರಕುಕ ಸಾಗಣೆಯ ಎಲ್ಲ ಅಡ್ಡಿ, ಆತಂಕಗಳನ್ನು ನಿವಾರಿಸಲಿದೆ’ ಎಂದು ಅವರು ಹೇಳಿದ್ದಾರೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.230/-; 2 yrs, Rs.430/- ; 3 yrs, Rs.610/-

Bal Bharati : 1 yr. Rs.160/-; 2 yrs, Rs.300/- ; 3 yrs, Rs.420/-

**(Circle the magazine of your choice and the period of subscription)**

DD/PO/MO No.______________________________ date ______________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ____________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodhi Road, New Delhi * 110 003.

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number

**To Subscribe Online**

*Log on to*

**http://publicationsdivision.nic.in/**,
*in collaboration with* **bharatkosh.gov.in**